ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ



ನವೆಂಬರ್ 15 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ-ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 207 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬಿಹಾರದಲ್ಲಿ ಎನ್‌ಡಿಎ ಪಾರುಪತ್ಯ

ವಿಧಾನಸಭೆಯ ಒಟ್ಟು 243ರಲ್ಲಿ 202 ಕ್ಷೇತ್ರದಲ್ಲಿ ಜಯಭೇರಿ

ಕಾಂಗ್ರೆಸ್, ಆರ್‌ಜೆಡಿ ನೇತೃತ್ವದ ಮಹಾಘಟಬಂಧನ್ ಧೂಳೀಪಟ; ಕೇವಲ 35 ಕ್ಷೇತ್ರದಲ್ಲಿ ಜಯ; ಒಂದಂಕಿಗೆ(6) ಕುಸಿದ ಕಾಂಗ್ರೆಸ್; ಘಟಬಂಧನ್ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಯಾದವ್ ಪ್ರಯಾಸದ ಗೆಲುವು; ಬಿಜೆಪಿ ಅತೀ ದೊಡ್ಡ ಪಕ್ಷ



ನರೇಂದ್ರ ಮೋದಿ ನಿತೀಶ್‌ಕುಮಾರ್ ಚಿರಾಗ್ ಪಸ್ವಾನ್ ಜಿತನ್ ರಾಂ ಮಾಂಝಿ

ಪಾಟ್ನಾ, ನ. 14- ಬಿಹಾರದಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ ಕೂಟ (ನ್ಯಾಷನಲ್ ಡೆಮಾಕ್ರಟಿಕ್ ಅಲಯನ್ಸ್-ಎನ್‌ಡಿಎ) ಪಾರುಪತ್ಯ ಮೆರೆದಿದೆ. ಎರಡು ಹಂತದಲ್ಲಿ ನಡೆದ ವಿಧಾನಸಭಾ ಚುನಾವಣೆಯ ಫಲಿತಾಂಶ ಹೊರಬಿದ್ದಿದ್ದು, ಒಟ್ಟು 243 ಸ್ಥಾನಗಳ ಪೈಕಿ ಬಿಜೆಪಿ ನೇತೃತ್ವದ ಎನ್‌ಡಿಎ 202 ಸ್ಥಾನಗಳಲ್ಲಿ ಜಯಭೇರಿ ಬಾರಿಸಿ, ಇತಿಹಾಸ ಸೃಷ್ಟಿಸಿದ್ದು, ಆರ್‌ಜೆಡಿ, ಕಾಂಗ್ರೆಸ್, ಇನ್ನಿತರ ಪಕ್ಷಗಳನ್ನೊಳಗೊಂಡ 'ಮಹಾಘಟಬಂಧನ್' ಮೈತ್ರಿ ಕೂಟ ಕೇವಲ 35 ಸ್ಥಾನ ಪಡೆದಿದ್ದು, ಭಾರೀ ಮುಖಭಂಗ ಅನುಭವಿಸಿದೆ. ಒಟ್ಟು 243 ಕ್ಷೇತ್ರಗಳ ಅತಿ ದೊಡ್ಡ ನ್ನೊಳಗೊಂಡ ಬಿಹಾರ ವಿಧಾನಸಭೆಯಲ್ಲಿ ಸರ್ಕಾರ ರಚಿಸಲು ಮ್ಯಾಜಿಕ್ ನಂ. 122 ಬೇಕಾಗಿದ್ದು, ಎನ್‌ಡಿಎ ಮೈತ್ರಿಕೂಟ 202 ಸ್ಥಾನಗಳಲ್ಲಿ ಗೆದ್ದು, ಸರ್ಕಾರ ರಚನೆಗೆ ಸಜ್ಜಾಗಿದೆ. ಮೈತ್ರಿ ಕೂಟದ ಜೆಡಿಯು ಪಕ್ಷದ ಹಾಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ 10ನೇ ಬಾರಿಗೆ ಮುಖ್ಯಮಂತ್ರಿಯಾಗಿ ದಾಖಲೆ ನಿರ್ಮಿಸಲಿದ್ದಾರೆ. ಅದೇ ವೇಳೆ ಮಹಾಘಟಬಂಧನ್ ಮೈತ್ರಿ ಕೂಟ ಕೇವಲ 35 ಸ್ಥಾನ ಪಡೆದು ಮುಗ್ಗರಿಸಿದರೆ, 6 ಸ್ಥಾನಗಳಲ್ಲಿ ಇತರರು ಗೆಲುವು ಸಾಧಿಸಿದ್ದಾರೆ. 89 ಸ್ಥಾನಗಳಲ್ಲಿ ಗೆಲುವು ಸಾಧಿಸಿರುವ ಬಿಜೆಪಿ, ವಿಧಾನಸಭೆಯಲ್ಲಿ ■ 6ನೇ ಪುಟಕ್ಕೆ

ಎನ್‌ಡಿಎ ಮೈತ್ರಿಕೂಟ
ಬಿಜೆಪಿ- 89
ಜೆಡಿಯು- 85
ಎಲ್‌ಜೆಪಿ- 19
ಹೆಚ್‌ಎಎಂ- 05
ಆರ್‌ಎಲ್‌ಎಂ- 04
ಒಟ್ಟು =202

ಮಹಾಘಟ ಬಂಧನ್
ಆರ್‌ಜೆಡಿ- 25
ಕಾಂಗ್ರೆಸ್- 06
ಎಡಪಕ್ಷಗಳು- 04
ಒಟ್ಟು =35



ಈ ಗೆಲುವು ಐಕ್ಯತೆ ಪ್ರತಿಬಿಂಬಿಸುತ್ತದೆ

ಪಾಟ್ನಾ, ನ.14- ಬಿಹಾರ ವಿಧಾನ ಸಭಾ ಚುನಾವಣೆ ಫಲಿತಾಂಶ ಪ್ರಕಟಗೊಂಡಿದ್ದು, 202 ಸ್ಥಾನಗಳ ಗೆಲುವಿನ ಭಾರೀ ಬಹುಮತದೊಂದಿಗೆ ಎನ್‌ಡಿಎ ಮತ್ತೆ ಸರ್ಕಾರ ರಚಿಸುತ್ತಿದೆ.

ಫಲಿತಾಂಶದ ಬಗ್ಗೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಪ್ರತಿಕ್ರಿಯೆ ನೀಡಿದ್ದು, ಮೈತ್ರಿಕೂಟದ ಪಾಲುದಾರರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಬೃಹತ್ ಬಹುಮತವು ಮೈತ್ರಿಕೂಟದ ಐಕ್ಯತೆಯನ್ನು ಪ್ರತಿಬಿಂಬಿಸುತ್ತದೆ ಎಂದು ನಿತೀಶ್ ಕುಮಾರ್ ಒತ್ತಿ ಹೇಳಿದ್ದಾರೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ಅವರು, ಮತದಾರರಿಗೆ ಧನ್ಯವಾದ ಅರ್ಪಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್), ರಾಷ್ಟ್ರೀಯ ಲೋಕ ಮೋರ್ಚಾ ಮತ್ತು ಹಿಂದೂಸ್ತಾನಿ ಅವಾಮ್ ಮೋರ್ಚಾಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಎಲ್ಲಾ ಎನ್‌ಡಿಎ ಸದಸ್ಯರ ಬೆಂಬಲದೊಂದಿಗೆ ಬಿಹಾರ ಈಗ ಇನ್ನಷ್ಟು ಪ್ರಗತಿ ಸಾಧಿಸಲಿದೆ ಎಂದು ಅವರು ಪ್ರತಿಪಾದಿಸಿದರು. ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನರು ನಮಗೆ ಭಾರೀ ■ 6ನೇ ಪುಟಕ್ಕೆ

- ಬಿಹಾರ ವಿಧಾನಸಭೆಯ ಒಟ್ಟು ಸ್ಥಾನ 243
- ಸರ್ಕಾರ ರಚನೆಗೆ ಮ್ಯಾಜಿಕ್ ನಂ. 122
- ಎನ್‌ಡಿಎ 202, ಮಹಾಘಟ ಬಂಧನ್ 35, ಇತರರು 06

ಮಹಾಘಟ್‌ಬಂಧನ್‌ನಲ್ಲಿ ನಂಬಿಕೆಯಿಟ್ಟ ಬಿಹಾರದ ಲಕ್ಷಾಂತರ ಮತದಾರರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಬಿಹಾರದ ಈ ಫಲಿತಾಂಶ ನಿಜಕ್ಕೂ ಅಚ್ಚರಿ ಮೂಡಿಸಿದೆ. ಆರಂಭದಿಂದಲೂ ನ್ಯಾಯಯುತವಲ್ಲದ ಚುನಾವಣೆಯಲ್ಲಿ ನಾವು ಗೆಲುವು ಸಾಧಿಸಲು ಸಾಧ್ಯವಾಗಿಲ್ಲ. ಈ ಹೋರಾಟ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ. ಈ ಫಲಿತಾಂಶವನ್ನು ಬೆಂಬಲಿಸಿ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಲು ಪ್ರಯತ್ನಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಿ.



-ರಾಹುಲ್ ಗಾಂಧಿ,
ಲೋಕಸಭಾ ಪ್ರತಿಪಕ್ಷ ನಾಯಕ



ದೆಹಲಿ ಬಿಜೆಪಿ ಕಚೇರಿಯಲ್ಲಿ ಪ್ರಧಾನಿ ಮೋದಿ ವಿಜಯೋತ್ಸವ.

ಬಿಹಾರ ಚುನಾವಣೆ ಮಹಿಳೆಯರು, ಯುವಜನರು ಎಂಬ ಹೊಸ ಸೂತ್ರ ನೀಡಿದೆ

ವಿಜಯೋತ್ಸವದಲ್ಲಿ ಪ್ರಧಾನಿ ಮೋದಿ ಭಾಷಣ

ನವದೆಹಲಿ, ನ. 14- ಬಿಹಾರದ ಇಂದಿನ ಗೆಲುವು ಹೊಸ ಸಕಾರಾತ್ಮಕ ಸೂತ್ರವನ್ನು ನೀಡಿದೆ. ಅದು MY ಸೂತ್ರ (ಮಹಿಳೆ ಮತ್ತು ಯುವಜನರು). ಇಂದು, ಬಿಹಾರವು ಅತೀ ಹೆಚ್ಚು ಯುವಕರನ್ನು ಹೊಂದಿರುವ ರಾಜ್ಯಗಳಲ್ಲಿ ಒಂದಾಗಿದೆ. ಇದರಲ್ಲಿ ಪ್ರತಿಯೊಂದು ಧರ್ಮ ಮತ್ತು ಜಾತಿಯ ಯುವಕರು ಸೇರಿದ್ದಾರೆ. ಅವರ ಆಸೆಗಳು, ಅವರ ಆಕಾಂಕ್ಷೆಗಳು ಮತ್ತು ಕನಸುಗಳು ಜಂಗಲ್ ರಾಜ್ ಜನರ ಹಳೆಯ ಕೋಮು ಸೂತ್ರವನ್ನು ಸಂಪೂರ್ಣವಾಗಿ ನಾಶಪಡಿಸಿವೆ ಎಂದು ದೆಹಲಿ ಬಿಜೆಪಿ ಪ್ರಧಾನ ಕಚೇರಿಯಲ್ಲಿ ನಡೆದ ವಿಜಯೋತ್ಸವದ ಭಾಷಣದಲ್ಲಿ ಪ್ರಧಾನಿ ಮೋದಿ ಹೇಳಿದ್ದಾರೆ.

ಬಿಹಾರ ವಿಧಾನಸಭೆ ಚುನಾವಣೆಯ ಗೆಲುವು ಅನೇಕ ಹೊಸ ದಾಖಲೆಗಳನ್ನು ಸೃಷ್ಟಿಸಿದೆ. 2025ರ ಬಿಹಾರ ವಿಧಾನ ಸಭಾ ಚುನಾವಣೆಯ ಫಲಿತಾಂಶಗಳು ನಿತೀಶ್ ಕುಮಾರ್ ನೇತೃತ್ವದ ಮೈತ್ರಿ ಕೂಟವು 243 ■ 6ನೇ ಪುಟಕ್ಕೆ

ಬಿಹಾರದ ಚುನಾವಣಾ ಫಲಿತಾಂಶ ರಾಜ್ಯಕ್ಕೆ ದಿಕ್ಸೂಚಿ

ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭವಿಷ್ಯ

ನವದೆಹಲಿ, ನ.14(ಬಿಎಲ್‌ಯು)- ಕರ್ನಾಟಕದಲ್ಲಿ 2028 ರಂದು ನಡೆಯುವ ವಿಧಾನಸಭಾ ಚುನಾವಣೆಗೆ ಬಿಹಾರ ಚುನಾವಣೆಯ ಫಲಿತಾಂಶ ದಿಕ್ಸೂಚಿಯಾಗಲಿದ್ದು, ರಾಜ್ಯದಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಕೂಟದ ಸರ್ಕಾರ ಅಧಿಕಾರಕ್ಕೆ ಬರುವುದು ಶತಸಿದ್ಧ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಭವಿಷ್ಯ ನುಡಿದರು.

ನವದೆಹಲಿಯ ಗೃಹ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಹಾರದಲ್ಲಿ ಎನ್‌ಡಿಎ ಪರ ಬಂದಿರುವ ಐತಿಹಾಸಿಕ ಗೆಲುವು ಮುಂಬರುವ ಕರ್ನಾಟಕದ ಚುನಾವಣೆ ಮೇಲೆ ಗಾಢ ಪ್ರಭಾವ ಬೀರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಈಗಾಗಲೇ ಕಾಂಗ್ರೆಸ್ ಸರ್ಕಾರದ ಆಡಳಿತ ವಿರೋಧಿ ಅಲೆ ಹೆಚ್ಚಾಗಿದೆ. ಕಳೆದ ಎರಡೂವರೆ ವರ್ಷದಿಂದ ಈ ಸರ್ಕಾರ ನಾಯಕತ್ವ ಬದಲಾವಣೆಯಲ್ಲಿ ಕಾಲಹರಣ ಮಾಡುತ್ತಿದ್ದು, ಅಭಿವೃದ್ಧಿ ಶೂನ್ಯವಾಗಿದೆ. 136 ಸ್ಥಾನ ನೀಡಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ತಂದಿರುವ ಜನರು ನಿರಾಸೆಗೊಂಡಿದ್ದಾರೆ. ಇದರಿಂದ ಯಾವಾಗ ಚುನಾವಣೆ ಬರು ವುದೋ ಎಂದು ಕಾಯುತ್ತಿದ್ದು, ಕಾಂಗ್ರೆಸ್‌ಗೆ ಪಾಠ ಕಲಿಸಲು ಮಾನಸಿಕವಾಗಿ ಸಿದ್ಧರಾಗಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದರು. ರಾಜ್ಯದಲ್ಲಿ ಎನ್‌ಡಿಎ ಮೈತ್ರಿಕೂಟ ಬಲಿಷ್ಠವಾಗಿದೆ. ■ 6ನೇ ಪುಟಕ್ಕೆ



ನಕಲಿ ವೈದ್ಯರ ವಿರುದ್ಧ ಕಠಿಣ ಕ್ರಮಕ್ಕೆ ರಾಜ್ಯ ಸರ್ಕಾರ ಆದೇಶ

ಬೆಂಗಳೂರು, ನ.14- ನಕಲಿ ವೈದ್ಯರು ಮತ್ತು ಅನರ್ಹ ವೈದ್ಯರನ್ನು ನೇಮಿಸಿಕೊಳ್ಳುವ ವೈದ್ಯಕೀಯ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸುತ್ತೋಲೆ ಹೊರಡಿಸಿದೆ.

ಕರ್ನಾಟಕ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಮತ್ತು ಯೋಗ ವೈದ್ಯರ ನೋಂದಣಿ ಮತ್ತು ವೈದ್ಯಕೀಯ ವೈದ್ಯರ ವಿವಿಧ ನಿಬಂಧನೆಗಳ ಕಾಯ್ದೆ, 1961 ರ ಪ್ರಕಾರ ಸಂಬಂಧಿತ ಕಾಯ್ದೆಗಳ ಅಡಿಯಲ್ಲಿ ನೋಂದಣಿ ಇಲ್ಲದೆ ವೈದ್ಯ ವೃತ್ತಿ ಮಾಡುವ ಯಾವುದೇ ವ್ಯಕ್ತಿ ಕಾನೂನು ಕ್ರಮವನ್ನು ಎದುರಿಸಬೇಕಾಗುತ್ತದೆ. ಈ ಕುರಿತ ಮೊದಲ ಅಪರಾಧಕ್ಕೆ 25 ಸಾವಿರ ರೂ.ಗಳವರೆಗೆ ದಂಡ, ಎರಡನೇ ಅಪರಾಧಕ್ಕೆ 2.5 ಲಕ್ಷ ರೂ.ಗಳವರೆಗೆ ಮತ್ತು ಒಂದು ವರ್ಷ ಜೈಲು ಶಿಕ್ಷೆ ಮತ್ತು ನಂತರದ ಪ್ರತಿ ಅಪರಾಧಕ್ಕೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆಯೊಂದಿಗೆ 5 ಲಕ್ಷ ರೂ.ಗಳವರೆಗೆ ದಂಡ ವಿಧಿಸಬಹುದು ಎಂದು ತಿಳಿಸಿದೆ. ■ 6ನೇ ಪುಟಕ್ಕೆ

ಪಿಜಿ ವೈದ್ಯಕೀಯ: ಅರ್ಜಿ ಸಲ್ಲಿಕೆಗೆ ನಾಳೆ ಕೊನೆಯ ದಿನ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳಿಗೆ (ಎಂ.ಡಿ, ಎಂ.ಎಸ್) ನೋಂದಣಿ ಮಾಡಲು ಅರ್ಹ ಸೇವಾ ನಿರತ ಅಭ್ಯರ್ಥಿಗಳಿಗೆ ಪೋರ್ಟಲ್ ತೆರೆಯಲಾಗಿದ್ದು, ಆನ್‌ಲೈನ್ ಮೂಲಕ ನೋಂದಾಯಿಸಿಕೊಂಡು ನ.16ರ ಒಳಗೆ ಅರ್ಜಿ ಸಲ್ಲಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹೇಳಿದೆ.

ಪಿಜಿನೀಟ್-2025ರಲ್ಲಿ ನಿಗದಿ ಪಡಿಸಿರುವ ಕನಿಷ್ಠ ಪರ್ಸೆಂಟೈಲ್ ಅಂಕಗಳನ್ನು ಅಥವಾ ■ 6ನೇ ಪುಟಕ್ಕೆ

ಪ್ರಾಥಮಿಕ ಹಂತದ ಶಿಕ್ಷಣದಿಂದಲೇ ಮಕ್ಕಳು ಮೌಢ್ಯ, ಕಂದಾಚಾರದಿಂದ ದೂರವಿರಿ

- ಮಕ್ಕಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು
- ವೈಚಾರಿಕ, ವೈಜ್ಞಾನಿಕ ಮನೋಭಾವನೆ ಬೆಳೆಸಿಕೊಳ್ಳಲು ಕರೆ
- ಮಕ್ಕಳ ದಿನಾಚರಣೆ-ಶಿಕ್ಷಕರ ಮಹಾಸಭೆ ಉದ್ಘಾಟನೆ

ಬೆಂಗಳೂರು, ನ.14(ಕೆಎಂಶಿ)- ಮಕ್ಕಳು ಪ್ರಾಥಮಿಕ ಶಿಕ್ಷಣದಿಂದಲೇ ಮೌಢ್ಯ, ಕಂದಾಚಾರದಿಂದ ದೂರ ಉಳಿಯಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಮಕ್ಕಳ ದಿನಾಚರಣೆ ಮತ್ತು ಪೋಷಕರ-ಶಿಕ್ಷಕರ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಭವಿಷ್ಯ ರೂಪಿತವಾಗುವುದು ವೈಚಾರಿಕ-ವೈಜ್ಞಾನಿಕ ಮನೋಭಾವದ ಮಕ್ಕಳಿಂದ ಎಂದರು.

ಮಕ್ಕಳೇ ಭಾರತದ ಭವಿಷ್ಯ ಎನ್ನುವ ದೂರದೃಷ್ಟಿ ಜವಾಹರಲಾಲ್ ನೆಹರು ಅವರದ್ದಾಗಿತ್ತು. ವೈಜ್ಞಾನಿಕ ಮನೋಧರ್ಮ ರೂಪಿಸುವ ಶಿಕ್ಷಣಕ್ಕೆ ಒತ್ತು ನೀಡಿದ್ದರು. ನಮ್ಮ ಸರ್ಕಾರ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಿದ್ದು, 65,000 ಕೋಟಿ ರೂ.ಗಳನ್ನು ಶಿಕ್ಷಣಕ್ಕೆ ನೀಡುತ್ತಿದೆ.

ನೆಹರು 3,200 ಕ್ಕೂ ಹೆಚ್ಚು ದಿನಗಳನ್ನು ಜೈಲಿನಲ್ಲಿ ಕಳೆದರು. ಶ್ರೀಮಂತ ಕುಟುಂಬದಿಂದ ಬಂದಿದ್ದರೂ ದೇಶದ ಸ್ವಾತಂತ್ರ್ಯಕ್ಕಾಗಿ ಸೆರೆಮನೆ ಸೇರಿದರು. ದೇಶದ ಪ್ರಧಾನಿಯಾಗಿ ಕೃಷಿ, ವಿಜ್ಞಾನ, ನೀರಾವರಿ, ತಂತ್ರ ಜ್ಞಾನ ಸೇರಿ ಸಮಗ್ರ ಅಭಿವೃದ್ಧಿಗೆ ಅಡಿಪಾಯ ಹಾಕಿದರು. ಐಐಟಿ, ಏಮ್ಸ್, ಅಣೆಕಟ್ಟು, ಕೈಗಾರಿಕೆಗಳನ್ನು ಸ್ಥಾಪಿಸಿದ್ದರು. ಆದರೆ, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದೆ ಬ್ರಿಟಿಷರ ಜೊತೆ ಕೈಜೋಡಿಸಿದವರು ನೆಹರು ಮತ್ತು ಗಾಂಧಿಯನ್ನು ಟೀಕಿಸುತ್ತಾರೆ.



ಪ್ರತಿಭೆ ಯಾರ ಸ್ವತ್ತಲ್ಲ : ಪ್ರತಿಭೆ ಯಾರ ಸ್ವತ್ತೂ ಅಲ್ಲ. ವೇದಿಕೆಯಲ್ಲಿ ಸನ್ಮಾನಿತರಾದ ವಿದ್ಯಾರ್ಥಿಗಳೆಲ್ಲರೂ ಬಡ ಕುಟುಂಬದ ಸರ್ಕಾರಿ ಶಾಲೆಗಳಲ್ಲಿ ಓದಿದವರು. ಸರ್ಕಾರ ಈ ವರ್ಷ ಒಟ್ಟು 900 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯುತ್ತಿದೆ. ಗುಣಮಟ್ಟದ ಶಿಕ್ಷಣ ನೀಡಲು ಶ್ರಮಿಸುತ್ತಿದೆ. ನಾನೂ ಸರ್ಕಾರಿ ಶಾಲೆಯಲ್ಲಿ ಓದಿಯೇ ಮುಖ್ಯಮಂತ್ರಿ ಆಗಿದ್ದೇನೆ.

ಜಾತಿ, ಧರ್ಮ, ಭಾಷೆಯ ಮಿತಿ ಇಲ್ಲದೆ ಮನುಷ್ಯ ಮನುಷ್ಯನನ್ನು ಪ್ರೀತಿಸಬೇಕು. ಜಾತಿ ವ್ಯವಸ್ಥೆ ಮೇಲೆ ತಾರತಮ್ಯ ಮಾಡುವವರನ್ನು ಹತ್ತಿರ ಸೇರಿಸದೆ, ಸಂವಿಧಾನದ ಆಶಯದಂತೆ ಸಹಿಷ್ಣುತೆ, ಸಹಬಾಳ್ವೆ ಮೂಲಕ ವೈವಿಧ್ಯತೆಯಲ್ಲಿ ಏಕತೆ ಉಳಿಸಿ ಬೆಳೆಸುವಂತಾಗಬೇಕು.

ವೈಜ್ಞಾನಿಕ ಮನಸ್ಥಿತಿ ಬೆಳೆಸಿಕೊಳ್ಳಿ: ಸರ್ಕಾರಿ ಶಾಲೆಗಳ ಮಕ್ಕಳು ಸ್ವಾಭಿಮಾನದಿಂದ ಸಮಾಜಮುಖಿಯಾಗಿ ಬೆಳೆಯಲು ಉತ್ತಮ ಶಿಕ್ಷಣ ಪಡೆಯಲು ಸಕಲ ಸವಲತ್ತುಗಳನ್ನೂ ನೀಡುತ್ತಿದೆ. ಇಂದಿರಾ ಕಿಟ್, ಶೂ, ಸಮವಸ್ತ್ರ, ಮೊಟ್ಟೆ, ಬಾಳೆಹಣ್ಣು, ಪತ್ಯ ಪುಸ್ತಕ, ಶಿಷ್ಯವೇತನ ಬಡವರ ಮಕ್ಕಳಿಗಾಗಿ ಒದಗಿಸುತ್ತಿದೆ. ಇದರ ಸದುಪಯೋಗ ಪಡೆದು ವೈಜ್ಞಾನಿಕ ಮನಸ್ಥಿತಿ ಬೆಳೆಸಿ ಕೊಳ್ಳಿ ಎಂದರು.

ವೃಕ್ಷಮಾತೆ, ಶತಾಯುಷಿ ಸಾಲುಮರದ ತಿಮ್ಮಕ್ಕ ಇನ್ನಿಲ್ಲ



ಇಂದು ಸರ್ಕಾರಿ ಗೌರವದೊಂದಿಗೆ ಪದ್ಮಶ್ರೀ ಪುರಸ್ಕೃತೆಯ ಅಂತ್ಯಕ್ರಿಯೆ

ಬೆಂಗಳೂರು, ನ.14- ಉಸಿರಾಟದ ಸಮಸ್ಯೆಯಿಂದ ಬೆಂಗಳೂರಿನ ಜಯನಗರದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕ ಚಿಕಿತ್ಸೆ ಫಲಕಾರಿಯಾಗದೆ ಇಂದು ನಿಧನರಾಗಿದ್ದಾರೆ. ಅವರಿಗೆ 114 ವರ್ಷ ವಯಸ್ಸಾಗಿತ್ತು.

ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಮಧ್ಯಾಹ್ನ 12ಕ್ಕೆ ಬೆಂಗಳೂರು ಜ್ಞಾನಭಾರತಿಯ ಕಲಾಗ್ರಾಮದ ಆವರಣದಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಲಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ 1911 ಜೂನ್ 30ರಂದು ಜನಿಸಿದ್ದ ಅವರು, ವೃಕ್ಷಮಾತೆ ಎಂದೇ ಪ್ರಸಿದ್ಧಿ ಪಡೆದಿದ್ದರು. ಮಾಗಡಿ ತಾಲೂಕಿನ ಚಿಕ್ಕಯ್ಯ ಎಂಬುವವರನ್ನು ವಿವಾಹವಾಗಿದ್ದರು. ದುರದೃಷ್ಟವಶಾತ್, ಇವರಿಗೆ ಮಕ್ಕಳಿರಲಿಲ್ಲ. ಹೀಗಾಗಿ ತಮಗೆ ಮಕ್ಕಳಿರದ ದುಃಖವನ್ನು ಮರೆಯಲು ರಸ್ತೆಯ ಬದಿಯಲ್ಲಿ ಆಲದ ಸಸಿಗಳನ್ನು ನೆಟ್ಟು ಅವುಗಳನ್ನೇ ಮಕ್ಕಳಂತೆ ಭಾವಿಸಿ ಬೆಳೆಸಿದ್ದರು.

ಅನಕ್ಷರಸ್ಥೆಯಾಗಿದ್ದರೂ ಪರಿಸರ ಸಂರಕ್ಷಣೆಯಲ್ಲಿ ತಿಮ್ಮಕ್ಕ ಅವರ ಮಹತ್ತರ ಸಾಧನೆಗೆ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿವೆ. ರಾಜ್ಯೋತ್ಸವ ಪ್ರಶಸ್ತಿ, ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ವಿಶಾಲಾಕ್ಷಿ ಪ್ರಶಸ್ತಿ, 2010ನೇ ಸಾಲಿನ ಪ್ರತಿಷ್ಠಿತ ನಾಡೋಜ ಪ್ರಶಸ್ತಿ ಸೇರಿ 2019ರಲ್ಲಿ ಪದ್ಮಶ್ರೀ ಪ್ರಶಸ್ತಿಗೂ ಇವರು ಪಾತ್ರರಾಗಿದ್ದಾರೆ. 2020ರಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ತಿಮ್ಮಕ್ಕನವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ತಿಮ್ಮಕ್ಕ ಅವರಿಗೆ 1995ರಲ್ಲಿ ರಾಷ್ಟ್ರೀಯ ಪೌರ ಪ್ರಶಸ್ತಿ, 1997ರಲ್ಲಿ ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, 2019ರಲ್ಲಿ ಪದ್ಮಶ್ರೀ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ನಾಡೋಜ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ■ 6ನೇ ಪುಟಕ್ಕೆ

ತಿಮ್ಮಕ್ಕ ಪರಿಸರ ಪ್ರೇಮ ಚಿರಸ್ಥಾಯಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಂತಿಮ ನಮನ

ಬೆಂಗಳೂರು, ನ.14- ಜಯನಗರದ ಅಪೋಲೋ ಆಸ್ಪತ್ರೆಯಲ್ಲಿ ವೃಕ್ಷಮಾತೆ ಸಾಲುಮರದ ತಿಮ್ಮಕ್ಕನವರ ಪಾರ್ಥಿವ ಶರೀರದ ದರ್ಶನ ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂತಿಮ ನಮನ ಸಲ್ಲಿಸಿದರು. ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಾಲುಮರದ ತಿಮ್ಮಕ್ಕನವರು ಅಗಲಿದರೂ ಅವರ ಪರಿಸರ ಪ್ರೇಮ ಚಿರಸ್ಥಾಯಿಯಾಗಿದೆ. ಅವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವದೊಂದಿಗೆ ನಡೆಸಲಾಗುವುದು. ಸದ್ಯ ತಿಮ್ಮಕ್ಕನವರ ಅಂತ್ಯಕ್ರಿಯೆಯ ಬಗ್ಗೆ ಕುಟುಂಬದವರು ಎರಡು, ಮೂರು ಸ್ಥಳಗಳನ್ನು ಗೊತ್ತು ಮಾಡಿದ್ದು, ಎಲ್ಲಿ ಮಾಡಬೇಕೆಂದು ಸದ್ಯದಲ್ಲಿಯೇ ನಿರ್ಧರಿಸಲಾಗುವುದು ಎಂದು ತಿಳಿಸಿದರು.

ಮಕ್ಕಳಿಲ್ಲದ ತಿಮ್ಮಕ್ಕನವರು ಮರಗಿಡಗಳನ್ನೇ ತಮ್ಮ ಮಕ್ಕಳಂತೆ ಸಾಕುತ್ತಿದ್ದರು. ಅವರು ನೆಟ್ಟಿರುವ ಮರಗಳು ಇವತ್ತು ಹೆಮ್ಮರವಾಗಿ ಬೆಳೆದು ನಿಂತು ಜನರಿಗೆ ನೆರಳು ನೀಡುತ್ತಿವೆ. ಪರಿಸರವಾದಿಯಾಗಿದ್ದ ತಿಮ್ಮಕ್ಕ ನವರ ಸೇವೆಯನ್ನು ಪರಿಗಣಿಸಿ, ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತ್ತು ಎಂದು ಸ್ಮರಿಸಿದರು. ತಿಮ್ಮಕ್ಕನವರು ಕೊನೆ ಆಸೆಯ ಪತ್ರ ಕೊಟ್ಟಿದ್ದಾರೆ. ಬೇಲೂರಿನಲ್ಲಿ ತಿಮ್ಮಕ್ಕ ವಸ್ತು ಸಂಗ್ರಹಾಲಯವನ್ನು ಮಾಡಬೇಕು ಎಂದು ಹೇಳಿದ್ದು, ಈ ಬಗ್ಗೆ ಸರ್ಕಾರ ಪರಿಶೀಲಿಸಲಿದೆ. ತಿಮ್ಮಕ್ಕನವರ ಆತ್ಮಕ್ಕೆ ಶಾಂತಿ ದೊರಕಲಿ, ಅವರ ಸಾವಿನಿಂದ ಉಂಟಾದ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ಹಾಗೂ ಅಭಿಮಾನಿಗಳಿಗೆ ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಸಿಎಂ ತಿಳಿಸಿದರು.



ತಿಮ್ಮಕ್ಕನವರ ಅಂತಿಮ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ .

ಮಧುಮೇಹ ಜಾಗೃತಿ ಜಾಥಾ



ವಿಶ್ವ ಮಧುಮೇಹ ದಿನದ ಅಂಗವಾಗಿ ಅಸೋಸಿಯೇಷನ್ ಆಫ್ ಫಿಜಿಷಿಯನ್ ವತಿಯಿಂದ ಜಾಗೃತಿ ಜಾಥಾ ನಡೆಸಲಾಯಿತು.

ಮೈಸೂರು, ನ.14(ಎಂಟಿವೈ)– ವಿಶ್ವ ಮಧುಮೇಹ ದಿನದ ಅಂಗವಾಗಿ ಅಸೋಸಿಯೇಷನ್ ಆಫ್ ಫಿಜಿಷಿಯನ್ ವತಿಯಿಂದ ಜಾಗೃತಿ ಜಾಥಾ ನಡೆಸಲಾಯಿತು.

ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದಿಂದ ಜೆ.ಕೆ.ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜಿನ ಅಮೃತೋತ್ಸವ ಭವನದ ಮುಂಭಾಗದವರೆಗೂ ಜಾಗೃತಿ ಜಾಥಾ ನಡೆಸಿ, ಮಧುಮೇಹದ ಬಗ್ಗೆ ಅರಿವು ಮೂಡಿಸಲಾಯಿತು.

ಮಧುಮೇಹದ ಲಕ್ಷಣ ಕಂಡು ಬಂದರೆ, ನಿರ್ಲಕ್ಷಿಸಬಾರದು. ಆರಂಭದಲ್ಲಿಯೇ ತಪಾಸಣೆಗೆ ಒಳಪಟ್ಟು, ತಜ್ಞ ವೈದ್ಯರಿಂದ ಸೂಕ್ತ ಚಿಕಿತ್ಸೆ ಪಡೆದುಕೊಳ್ಳುವುದರಿಂದ ಮಧುಮೇಹದಿಂದ ಪಾರಾಗಬಹುದು. ಸಕ್ಕರೆ ಅಂಶ ದೇಹದಲ್ಲಿ ಹೆಚ್ಚಾದಾಗ ಮಾತ್ರ ಮಧುಮೇಹ ದೇಹದ ಇನ್ನಿತರ ಅಂಗಾಂಗಗಳಿಗೆ ಹಾನಿಯುಂಟು ಮಾಡುತ್ತದೆ. ಆ ಕಾರಣದಿಂದ ಮಧುಮೇಹದ ಬಗ್ಗೆ ಜನ ನಿರ್ಲಕ್ಷಿಸಬಾರದು. ತಜ್ಞ ವೈದ್ಯರಿಂದ ತಪಾಸಣೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆದು ಆರೋಗ್ಯವಂತರಾಗಿರುವಂತೆ ಜಾಗೃತಿ ಮೂಡಿಸಲಾಯಿತು.

ರಾಷ್ಟ್ರಮಟ್ಟಕ್ಕೆ ಡೀನ್ ಅರ್ಜುನ್ ಎಂ.ಬಿ. ಆಯ್ಕೆ



ಮೈಸೂರು, ನ. 14– ಚಿಕ್ಕಬಳ್ಳಾಪುರದಲ್ಲಿ ನವೆಂಬರ್ 10 ರಂದು 17 ವರ್ಷದ ಒಳಗಿನ ಬಾಲಕರಿಗೆ ನಡೆದ ರಾಜ್ಯಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಮೈಸೂರಿನ ಕುವೆಂಪು ನಗರದ ಜ್ಯೋತಿ ಹೈ ಸ್ಕೂಲ್ ವಿದ್ಯಾರ್ಥಿ ಕರಾಟೆ ಸಂತ್ ಸೈ ಮಹೇಶ್ ಅವರ ಸ್ಟೂಡೆಂಟ್ ಪೈಲ್ವಾನ್ ಭರತ್ ಡೀನ್ ಅವರ ಮಗ ಡೀನ್ ಅರ್ಜುನ್ ಎಂ ಬಿ ಪ್ರಥಮ ಬಹುಮಾನ ಪಡೆದು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಕರ್ನಾಟಕದ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಅರುಣ್ ಮಾಚಯ್ಯ ಹಾಗೂ ಟೀಮ್ ಮ್ಯಾನೇಜರ್ ಸುಧಾಕರ್ ಜಿ ಗೌಡ ಮತ್ತಿತರರು ಅಭಿನಂದಿಸಿದರು.

ಸಿವಿಲ್ ನ್ಯಾಯಾಧೀಶರ ಮುಖ್ಯ ಪರೀಕ್ಷೆಗೆ ವಿಶೇಷ ಉಚಿತ ತರಬೇತಿ

ಮೈಸೂರು, ನ.14– ಅಧಿವಕ್ತ ಪರಿಷತ್, ಕರ್ನಾಟಕ ದಕ್ಷಿಣ ಪ್ರಾಂತ್ಯ, ಮೈಸೂರು ಘಟಕ, ಮೈಸೂರು ಮತ್ತು ಸಮಾಜ ಸೇವಾ ಕಾಳಜಿ ಇರುವ ಜ್ಞಾನದಾನಿಗಳ ಸಹಕಾರದಿಂದ ಸಿವಿಲ್ ನ್ಯಾಯಾಧೀಶರ ಮುಖ್ಯ ಪರೀಕ್ಷೆ ಬರೆಯುತ್ತಿರುವ ಅಭ್ಯರ್ಥಿಗಳ ಅನುಕೂಲಕ್ಕಾಗಿ 3 ದಿನಗಳ ವಿಶೇಷ ಉಚಿತ ತರಬೇತಿಯನ್ನು ಡಿ. 21 ರಿಂದ 23 ರ ವರೆಗೆ ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆವರೆಗೆ ಮಾಳವೀಯ ಮಿಷನ್ ಟೀಚರ್ಸ್ ಟ್ರೈನಿಂಗ್, ಮಾನಸ ಗಂಗೋತ್ರಿ, ಮೈಸೂರು ಇಲ್ಲಿ ಆಯೋಜಿಸಲಾಗಿದೆ. ಅರ್ಹ ಆಸಕ್ತ ಕೆಲವು ಗ್ರಾಮೀಣ ಪ್ರದೇಶದ ಮತ್ತು ಹೊರ ಜಿಲ್ಲೆಯ ಅಭ್ಯರ್ಥಿಗಳಿಗೆ ವಸತಿ ಸೌಕರ್ಯವನ್ನು ಸಹ ನೀಡಲಾಗುತ್ತದೆ. ಆಸಕ್ತರು ನ. 17 ರ ಸಂಜೆ 6 ಗಂಟೆ ಒಳಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು.

ಮೊದಲು ಬಂದ 60 ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ನೀಡಲಾಗುತ್ತದೆ. ನೊಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9448945477, 9972948415, 8970658588 ಗಳನ್ನು ಸಂಪರ್ಕಿಸಲು ಕೋರಲಾಗಿದೆ.

ಮೈಸೂರು ಡ್ರಗ್ಸ್ ಮುಕ್ತವಾಗಲು ಸಿಎಂ ಆದೇಶವನ್ನು ಪೊಲೀಸರು ಚಾಚೂ ತಪ್ಪದೆ ಪರಿಪಾಲಿಸಬೇಕು

ಸಮಾನತೆ ಪ್ರಕಾಶನದ ಪ್ರಕಾಶಕ ಭರತ್ ರಾಮಸ್ವಾಮಿ ಆಗ್ರಹ



ಮೈಸೂರು, ನ.14(ಬಿಎಲ್‌ಯು)– ಮೈಸೂರು ಜಿಲ್ಲೆಯನ್ನು ಡ್ರಗ್ಸ್ ಮುಕ್ತ ಮಾಡಬೇಕಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆದೇಶವನ್ನು ಪೊಲೀಸರು ಕಟ್ಟುನಿಟ್ಟಾಗಿ ಪಾಲಿಸಿದರೆ ಉದ್ದೇಶ ಸಫಲವಾಗಲಿದೆ ಎಂದು ಸಮಾನತೆ ಪ್ರಕಾಶನದ ಪ್ರಕಾಶಕ ಭರತ್ ರಾಮಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ. ಡ್ರಗ್ಸ್ ವ್ಯಸನದಿಂದ ಅಮಾಯಕ ಯುವಕರ ಭವಿಷ್ಯ ನಾಶವಾಗುತ್ತಿದೆ. ಇದಕ್ಕೆ ಕಡಿವಾಣ ಹಾಕದಿದ್ದರೆ ಸಮಾಜ ಘೋರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರು ನಗರದಲ್ಲಿ ಗಾಂಜಾ ಸೇರಿದಂತೆ ಹಲವು ಮಾದಕ ವಸ್ತುಗಳು ವ್ಯಾಪಕವಾಗಿ ಮಾರಾಟವಾಗುತ್ತಿರುವುದು ಗೌಪ್ಯ ವಿಚಾರವಲ್ಲ. ಇದನ್ನು ನಿಗ್ರಹಿಸುವುದು ಪೊಲೀಸರಿಗೆ ಅಸಾಧ್ಯವಾದ ಕಾರ್ಯವೇನೂ ಅಲ್ಲ. ಈ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತರು, ಮುಖ್ಯಮಂತ್ರಿಗಳ ಆದೇಶವನ್ನು ಗಂಭೀರವಾಗಿ ಪರಿಗಣಿಸಬೇಕು.

ಈ ಹಿನ್ನೆಲೆಯಲ್ಲಿ ಡ್ರಗ್ಸ್ ದಂಧೆ ಮಟ್ಟ ಹಾಕಲು ವಿಶೇಷ ತಂಡ ರಚನೆ ಮಾಡಬೇಕು. ಶಿಕ್ಷಣ ಸಂಸ್ಥೆಗಳು ಹಾಗೂ ಸಾರ್ವಜನಿಕ ಸಂಘ ಸಂಸ್ಥೆಗಳು ಮಾದಕ ವಸ್ತುಗಳ ದುಷ್ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಬೇಕು. ಆಗ ಮಾತ್ರ ಸಿಎಂ ಸಿದ್ದರಾಮಯ್ಯ ಹೇಳಿದಂತೆ ಮೈಸೂರನ್ನು ಡ್ರಗ್ಸ್ ಮುಕ್ತ ಮಾಡಲು ಸಾಧ್ಯ ಎಂದು ಭರತ್ ಅಭಿಪ್ರಾಯಪಟ್ಟಿದ್ದಾರೆ.


ವೃಕ್ಷಮಾತೆಗೆ ಶ್ರದ್ಧಾಂಜಲಿ



ಮೈಸೂರಿನ ಇಟ್ಟಿಗೆಗೂಡು ನಿವಾಸಿಗಳು ಜ್ವಾಲಾಮುಖಿ ವೃತ್ತದಲ್ಲಿ ದೀಪ ಬೆಳಗುವ ಮೂಲಕ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಕೋದಂಡರಾಮು, ವನರಾಜು, ಪ್ರಕಾಶ್, ಮಂಜುನಾಥ್, ಮಹೇಶ್, ನಾಗಣ್ಣ, ಆರ್.ಹೆಚ್.ಕುಮಾರ್, ಸುಂದರ್ ಮೂರ್ತಿ, ಶಂಕರ್ ಮೂರ್ತಿ, ಹರೀಶ್, ನವೀನ್, ಧರ್ಮರಾಜ್, ಗೋಕುಲ್ ಗೋವರ್ಧನ್, ರಾಜಾರಾಮ್, ಶೇಖರ್, ಕೃಷ್ಣ ಹೊಯ್ಸಳ, ತಿಲಕ್, ವಿನಯ್, ರಮೇಶ್, ಶರತ್, ಮಧು ಮತ್ತಿತರರಿದ್ದರು.


ನಿಧನ

ಹೆಚ್.ಕೆ. ಪದ್ಮಮ್ಮ



ಮೈಸೂರು, ನ. 14– ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿ ದಿವಂಗತ ಎಸ್.ಆರ್. ದಾಸೇಗೌಡರ ಪತ್ನಿ ಹಾಗೂ ಶಿಕ್ಷಣ ಇಲಾಖೆ ನಿವೃತ್ತ ಸಿಬ್ಬಂದಿ ಹೆಚ್.ಕೆ. ಪದ್ಮಮ್ಮ (83) ಗುರುವಾರ ರಾತ್ರಿ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿ ಧಾಮದಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಎಸ್.ಹಲಗಪ್ಪ



ಪಿರಿಯಾಪಟ್ಟಣ, ನ.14– ತಾಲೂಕಿನ ರಾವಂದೂರು ಹೋಬಳಿ, ಮಲಗನಕೆರೆ ಗ್ರಾಮದ ದೊಡ್ಡಹಟ್ಟಿ ಎಂ.ಎಸ್.ಹಲಗಪ್ಪ(80) ಅವರು ಶುಕ್ರವಾರ ರಾತ್ರಿ ನಿಧನರಾದರು. ಇವರು ಪತ್ನಿ ಗೌರಮ್ಮ, ಪುತ್ರ ಎಂ.ಹೆಚ್.ಗಿರೀಶ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮದ ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಹಕಾರ ವಿಷಯದಲ್ಲಿ ಕೋರ್ಸ್ ಪಡೆದವರಿಗೆ ಉದ್ಯೋಗದಲ್ಲಿ ಆದ್ಯತೆಗೆ ಶಾಸಕ ಜಿಟಿಡಿ ಮನವಿ

ಸಹಕಾರ ಸಪ್ತಾಹದಲ್ಲಿ ಪಠ್ಯದಲ್ಲಿ ಸಹಕಾರ ವಿಷಯ ಸೇರ್ಪಡೆಗೂ ಮುಖ್ಯಮಂತ್ರಿ ಸಿದ್ದರಾಮಯ್ಯರಲ್ಲಿ ಕೋರಿಕೆ

ಬೆಂಗಳೂರು, ನ.14– ಸಹಕಾರ ವಿಷಯವನ್ನು ಪಠ್ಯದಲ್ಲಿ ಸೇರ್ಪಡೆ ಮಾಡುವುದರ ಜೊತೆಗೆ ಈ ವಿಷಯದಲ್ಲಿ ಪದವಿ ಇನ್ನಿತರ ಕೋರ್ಸ್ ಮಾಡಿದವರಿಗೆ ಉದ್ಯೋಗ ನೇಮಕಾತಿಯಲ್ಲಿ ಆದ್ಯತೆ ನೀಡಬೇಕು ಎಂದು ಸಹಕಾರ ಮಹಾಮಂಡಳದ ಅಧ್ಯಕ್ಷರು ಆದ ಶಾಸಕ ಜಿ.ಟಿ. ದೇವೇಗೌಡರು, ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.



ಬೆಂಗಳೂರು ಅರಮನೆ ಮೈದಾನದಲ್ಲಿ ಶುಕ್ರವಾರ 72ನೇ ಅಖಿಲ ಭಾರತ ಸಹಕಾರ ಸಪ್ತಾಹಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ಸಹಕಾರ ಮಹಾಮಂಡಳದ ಅಧ್ಯಕ್ಷರು ಆದ ಶಾಸಕ ಜಿ.ಟಿ.ದೇವೇಗೌಡರು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಇಂದು ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೃಷಿ ಪದವಿ, ಇಂಜಿನಿಯರಿಂಗ್, ವೈದ್ಯಕೀಯ ಪದವಿ ಪಡೆದವರಿಗೆ ಆಯಾಯ ಕ್ಷೇತ್ರದಲ್ಲಿ ಸರ್ಕಾರಿ ಉದ್ಯೋಗ ಲಭ್ಯವಾಗುತ್ತದೆ. ಆದರೆ ಸಹಕಾರ ವಿಷಯದಲ್ಲಿ ಅಧ್ಯಯನ ಮಾಡಿದವರಿಗೆ ಈ ರೀತಿಯ ಅವಕಾಶವಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಹಕಾರದಲ್ಲಿ ಎಂ.ಎ. ಪದವಿ, ಜಿಡಿಸಿ ತರಬೇತಿ, ಡಿಪ್ಲೋಮಾ ಮಾಡಿದವರಿಗೆ ಸಹಕಾರ ಇಲಾಖೆ ಉದ್ಯೋಗ ನೇಮಕಾತಿಯಲ್ಲಿ ಆದ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ಕೆ.ಎನ್.ರಾಜಣ್ಣನವರು ಹಾಗೂ ಎಸ್.ಟಿ. ಸೋಮಶೇಖರ್ ಅವರು ಸಹಕಾರ ಸಚಿವರಾಗಿದ್ದಾಗ ಪ್ರಯತ್ನಿಸಿದ್ದರಾದರೂ ಕಾರಣಾಂತರಗಳಿಂದ ಸಾಕಾರಗೊಳ್ಳಲಿಲ್ಲ. ಆದ್ದರಿಂದ ಉದ್ಯೋಗ ನೇಮಕಾತಿಯಲ್ಲಿ ಆದ್ಯತೆ ಕಲ್ಪಿಸುವುದರ ಜೊತೆಗೆ ಪಠ್ಯದಲ್ಲಿ ಸಹಕಾರ ವಿಷಯವನ್ನು ಸೇರ್ಪಡೆ ಮಾಡುವ ನಿಟ್ಟಿನಲ್ಲಿ ತಾವು ಕ್ರಮ ಕೈಗೊಳ್ಳಬೇಕು ಎಂದು ವೇದಿಕೆಯಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು.

ನಾನು ಮೊದಲ ಬಾರಿಗೆ ಮಹಾಮಂಡಳದ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ 1995ರಲ್ಲಿ ರಾಮನಗರದ ಅಂಕನಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಸಪ್ತಾಹ ಕಾರ್ಯಕ್ರಮದ ಉದ್ಘಾಟನೆಗೆ ಆಗಿನ ಮುಖ್ಯಮಂತ್ರಿ ಹೆಚ್.ಡಿ.ದೇವೇಗೌಡರನ್ನು ಆಹ್ವಾನಿಸಿದ್ದೆ. ಅಂದಿನಿಂದ ಈವರೆಗೂ ಮುಖ್ಯಮಂತ್ರಿಗಳೇ ಸಪ್ತಾಹದ ಉದ್ಘಾಟನೆ ನೆರವೇರಿಸಿಕೊಂಡು ಬರುತ್ತಿರುವುದು ಸಂತೋಷದ ಸಂಗತಿ. ಈ ಹಿಂದೆ ಸಹಕಾರ ಸಚಿವರ ಬಳಿ ಬಹಳಷ್ಟು ಬೇಡಿಕೆಗಳನ್ನು ಸಲ್ಲಿಸಿದ್ದು, ಸದ್ಯ ಸಹಕಾರ ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಅನುಭವದ ಮೂಲಕ ಬೇಡಿಕೆಗಳನ್ನು ಈಡೇರಿಸುವುದರ ಜೊತೆಗೆ ಸಹಕಾರ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಯನ್ನು ಸಾಕಾರಗೊಳಿಸುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಭಾರತದಲ್ಲಿ 1904ರಲ್ಲಿ ಕ್ರೆಡಿಟ್ ಕಾನೂನು ಜಾರಿಗೆ ಬಂದಾಗ ನಮ್ಮ ರಾಜ್ಯದ ಗದಗಿನ, ಕಣಗಿನಹಾಳ ಗ್ರಾಮದಲ್ಲಿ ಶ್ರೀ ಸಿದ್ದನಗೌಡ ಸಣ್ಣ ರಾಮನಗೌಡ ಪಾಟೀಲರು ಪತ್ತಿನ ಸಹಕಾರ ಸಂಘವನ್ನು ಪ್ರಾರಂಭಿಸಿದರು. ಇಂದು ಸಹಕಾರ ಕ್ಷೇತ್ರವು ದೇಶದಲ್ಲೆಡೆ ಹೆಮ್ಮರವಾಗಿ ಬೆಳೆದಿದೆ. ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರು, ಪಂಚ ವಾರ್ಷಿಕ ಯೋಜನೆಗಳ ಮೂಲಕ ಆಹಾರ ಉತ್ಪಾದನೆ, ಕೈಗಾರಿಕೆ, ಗೊಬ್ಬರ ಉತ್ಪಾದನೆ ಸೇರಿದಂತೆ ಎಲ್ಲಾ ವಲಯದ ಅಭಿವೃದ್ಧಿಗೂ ಒತ್ತು ನೀಡಿದ್ದರು. ಹಾಗಾಗಿ ಅವರ ಜನ್ಮ ದಿನವಾದ ನ.14 ರಿಂದ ನ.20ರವರೆಗೆ ದೇಶದಾದ್ಯಂತ ಸಹಕಾರ ಸಪ್ತಾಹ ಆಚರಿಸಿಕೊಂಡು ಬರಲಾಗುತ್ತಿದ್ದು, ಈ ಕಾರ್ಯಕ್ರಮದಲ್ಲಿ ಎಲ್ಲಾ ಸಹಕಾರಿಗಳು ಭಾಗವಹಿಸಬೇಕು ಎಂದು ಮನವಿ ಮಾಡಿದರು.

> ಎಲ್ಲಾ ಪಟ್ಟಣ ಸಹಕಾರ ಹಾಗೂ ಪತ್ತಿನ ಸಹಕಾರಿ ಬ್ಯಾಂಕುಗಳ ಮೂಲಕ ಬೀದಿ ಬದಿ ವ್ಯಾಪಾರಿಗಳು, ನೌಕರರು, ಮನೆ ಕಟ್ಟುವವರು, ಕೃಷಿಕರು, ನೇಕಾರರು ಸೇರಿದಂತೆ ಎಲ್ಲಾ ಶ್ರಮಿಕರು ಹಾಗೂ ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯ ಕಲ್ಪಿಸುವ ಮೂಲಕ ಸಮಾಜಕ್ಕೆ ಆರ್ಥಿಕ ಚೇತನ ನೀಡುವ ಸಹಕಾರ ಕ್ಷೇತ್ರವನ್ನು ಮತ್ತಷ್ಟು ಬಲಿಷ್ಠಗೊಳಿಸಬೇಕು.
> -ಜಿ.ಟಿ.ದೇವೇಗೌಡ

ಇದಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಸತಿ ಮಹಾಮಂಡಳದ ಅಧ್ಯಕ್ಷ ಎಸ್.ಟಿ.ಸೋಮಶೇಖರ್, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ಕೆ.ಷಡಕ್ಷರಿ, ಶಾಸಕರಾದ ಪುಟ್ಟರಂಗ ಶೆಟ್ಟಿ, ಗಣೇಶ್ ಪ್ರಸಾದ್, ಪ್ರಕಾಶ್ ಕೋಳಿವಾಡ, ಕೆ.ವೈ.ನಂಜೇಗೌಡ, ಎ.ಸಿ.ಶ್ರೀನಿವಾಸ್, ಅಲ್ಲಮಪ್ರಭು ಪಾಟೀಲ್, ಟಿ.ಡಿ.ರಾಜೇಗೌಡ, ಸಹಕಾರ ಇಲಾಖೆ ಕಾರ್ಯದರ್ಶಿ ಶೆಟ್ಟಣ್ಣನವರ್, ನಿಬಂಧಕ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



ಹೆಲ್ತ್ ಕಾರ್ಡ್ ವಿತರಣೆ

ಮೈಸೂರಿನ ಭಾನವಿ ಆಸ್ಪತ್ರೆ ವತಿಯಿಂದ ವಿದ್ಯುನ್ಮಾನ ಮಾಧ್ಯಮದ ವರದಿಗಾರರು ಮತ್ತು ಕ್ಯಾಮರಾಮೆನ್‌ಗಳಿಗೆ ಶುಕ್ರವಾರ ಆಸ್ಪತ್ರೆ ಆವರಣದಲ್ಲಿ ಹೆಲ್ತ್ ಕಾರ್ಡ್ ವಿತರಿಸ ಲಾಯಿತು. ಈ ಹೆಲ್ತ್ ಕಾರ್ಡ್ ಮೂಲಕ ಹಲವು ವೈದ್ಯಕೀಯ ಸೇವೆಗಳನ್ನು ಉಚಿತ ವಾಗಿ ಹಾಗೂ ಕೆಲವು ವೈದ್ಯಕೀಯ ಸೇವೆ ಗಳನ್ನು ರಿಯಾಯಿತಿ ದರದಲ್ಲಿ ಪಡೆಯ ಬಹುದು. ಒಟ್ಟು 60 ಜನರಿಗೆ ಈ ಕಾರ್ಡ್‌ಗಳನ್ನು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕಾರ್, ಭಾನವಿ ಆಸ್ಪತ್ರೆ ಎಂ.ಡಿ ಡಾ.ಎನ್. ವಿಜಯ್, ಚೆಲುವರಾಜ್, ನರಸೇ ಗೌಡ, ಹಿರಿಯ ಪತ್ರಕರ್ತ ಜಯಂತ್ ವಿತರಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.11.2025 ಶನಿವಾರ, ಮಳೆ ನಕ್ಷತ್ರ: ವಿಶಾಖ, 6.11.2025 ರಿಂದ 19.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ದೀಪಾ ಶಿಕ್ಷಣ ಮತ್ತು ಸೇವಾ ಟ್ರಸ್ಟ್ :** ಕನ್ನಡ ರಾಜ್ಯೋತ್ಸವ, ಕನಕದಾಸ ಜಯಂತಿ, ಅಂತರಶಾಲಾ ಸ್ಪರ್ಧೆ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು : ಡಿವೈಎಸ್ಪಿ ರಾಜಣ್ಣ, ಅಧ್ಯಕ್ಷತೆ : ಸಂಸ್ಥೆ ಅಧ್ಯಕ್ಷ ಎಂ. ರಾಮಪ್ಪ, ಸ್ಥಳ: ದೀಪಾ ಶಾಲಾ ಆವರಣ, ಬೆಳಗ್ಗೆ 8.30ಕ್ಕೆ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ಸೆವೆನ್ ಡಿಕೇಡ್ಸ್ ಆಫ್ ಇಂಡಿಯನ್ ಕಾನ್‌ಸ್ಟಿಟ್ಯೂಷನ್ ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ಕೇರಳ ಹೈಕೋರ್ಟ್ ಜಡ್ಜ್ ಜಸ್ಟೀಸ್ ಎನ್. ನಾಗರೇಶ್, ಉಪಸ್ಥಿತರು : ಕಾಲೇಜು ಚೀಫ್ ಎಕ್ಸಿಕ್ಯೂಟಿವ್ ಪ್ರೊ. ಕೆ.ಎಸ್. ಸುರೇಶ್, ಪ್ರಿನ್ಸಿಪಾಲ್ ಡಾ. ಎನ್. ವಾಣಿಶ್ರೀ, ಸ್ಥಳ: ಸಿಲ್ವರ್ ಜ್ಯೂಬಿಲಿ ಹಾಲ್, ಬೆಳಗ್ಗೆ 9ಕ್ಕೆ.

■ **ಅನಂತಗೀತ ವಿದ್ಯಾಲಯ :** ವಾರ್ಷಿಕೋತ್ಸವ ಸಮಾರಂಭ, ಮುಖ್ಯ ಅತಿಥಿಗಳು : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ, ಬೆಳಗ್ಗೆ 9.30ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಅಸ್ತಮಾ, ಉಬ್ಬಸಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಗೆ.

■ **ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ, ಜೆಎಸ್‌ಎಸ್ ಮಹಾವಿದ್ಯಾಪೀಠದ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ಹಾಗೂ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ರಂಗವಲ್ಲಿ ಮೈಸೂರು :** ಮೈಸೂರು ರಂಗಭೂಮಿ ಬ್ಯಾಡ್ಮಿಂಟನ್ ಲೀಗ್ – ರಂಗಭೂಮಿ ಕಲಾವಿದರಿಗಾಗಿ, ಸ್ಥಳ: ಮಾನಸಗಂಗೋತ್ರಿ ಒಳಾಂಗಣ ಕ್ರೀಡಾಂಗಣ, ಬೆಳಗ್ಗೆ 10 ರಿಂದ.

■ **ಶ್ರೀ ಶಿವಪಾದ ಗುರುಸೇವಾ ನಂದಿಧ್ವಜ ಸಂಘ :** ಶಿವಯೋಗಿ ಶ್ರೀ ಶಿವಪಾದ ಸ್ವಾಮಿಗಳವರ ಕಂಚಿನ ಪುತ್ಥಳಿ ಅನಾವರಣ ಹಾಗೂ ಸಂಘದ ವಾರ್ಷಿಕೋತ್ಸವ, ಸಾನ್ನಿಧ್ಯ: ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ, ಅಧ್ಯಕ್ಷತೆ : ಶ್ರೀ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಕಂಚಿನ ಪುತ್ಥಳಿ ಉದ್ಘಾಟನೆ : ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಶಾಸಕರಾದ ಟಿ.ಎಸ್. ಶ್ರೀವತ್ಸ, ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಎಂ. ಪ್ರದೀಪ್ ಕುಮಾರ್, ಎಲ್.ವಿ. ಲೋಕೇಶ್ ಕುಮಾರ್, ಹೆಚ್.ವಿ. ರಾಜೀವ್, ಎ.ಎಂ. ಗುರುಸ್ವಾಮಿ, ಸ್ಥಳ: ಸಂಘದ ಕಚೇರಿ ಆವರಣ, ಬೆಳಗ್ಗೆ 10ಕ್ಕೆ.

■ **ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು :** ಕನ್ನಡ ರಾಜ್ಯೋತ್ಸವ, ಅಧ್ಯಕ್ಷತೆ : ಗೌರವ ಕಾರ್ಯದರ್ಶಿ ಕೆ.ಎನ್. ಪಂಚಾಕ್ಷರಸ್ವಾಮಿ, ರಾಜ್ಯೋತ್ಸವ ನುಡಿಗಳು : ಕವಯಿತ್ರಿ ಡಾ. ಸುಜಾತ ಅಕ್ಕಿ, ಮುಖ್ಯ ಅತಿಥಿಗಳು : ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಎನ್. ಉದಯಶಂಕರ, ಅಭಿನಂದನೆ : ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಮಂಗಳಾ ಮುದ್ದುಮಾದಪ್ಪ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ಎಸ್.ಕೆ. ಅನಿಲ, ಸ್ಥಳ: ಮರಿಮಲ್ಲಪ್ಪನವರ ಸಭಾ ಮಂಟಪ, ಬೆಳಗ್ಗೆ 11.30ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಕಾಲೇಜ್ ಆಫ್ ಫಿಸಿಯೋಥೆರಪಿ, ಕಾಲೇಜ್ ಆಫ್ ನರ್ಸಿಂಗ್, ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ, ಸ್ಕೂಲ್ ಆಫ್ ನರ್ಸಿಂಗ್ :** ಕನ್ನಡ ರಾಜ್ಯೋತ್ಸವ ಸಮಾರಂಭ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಶತಮಾನೋತ್ಸವ ಭವನ, ಜೆಎಸ್‌ಎಸ್ ಆಸ್ಪತ್ರೆ, ಮಧ್ಯಾಹ್ನ 3ಕ್ಕೆ.

■ **ಶಾಶ್ವತ ಸೇವಾ ಶಾಲೆ :** ಕನ್ನಡ ರಾಜ್ಯೋತ್ಸವ, ಆಯಿಮಾತಾಜೀ ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಶಾಲೆ ಕಾರ್ಯದರ್ಶಿ ಎಂ.ಆರ್. ಚೌಧರಿ, ಉದ್ಘಾಟನೆ : ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ಉಪಸ್ಥಿತರು : ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಪ್ರಕಾಶ್, ಶ್ರೀಮತಿ ಡಿ.ಎನ್. ಗೀತಾ, ಶ್ರೀಮತಿ ಜಿ.ಎಸ್. ಸ್ವರ್ಣ, ಮಾಲಂಗಿ ಸುರೇಶ್, ಅಹಿಂದ ಜವರಪ್ಪ, ಎಂ. ಚಂದ್ರಶೇಖರ್, ಡಾ. ಮೈಸೂರು ಉಮೇಶ್, ಸ್ಥಳ: ಶಾಶ್ವತ ಶಾಲೆ ಆವರಣ, ಸಂಜೆ 4ಕ್ಕೆ.

■ **ಡಾ. ಎಸ್.ಎನ್. ಹೆಗಡೆ ಅಭಿನಂದನಾ ಸಮಿತಿ, ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ :** ಡಾ. ಎಸ್.ಎನ್. ಹೆಗಡೆಯವರ ಅಭಿನಂದನಾ ಸಮಾರಂಭ, ವಿಜ್ಞಾನ ವತ್ಸಲ ಅಭಿನಂದನಾ ಗ್ರಂಥ ಲೋಕಾರ್ಪಣೆ, ಗ್ರಂಥ ಬಿಡುಗಡೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಅಭಿನಂದನಾ ಗ್ರಂಥ ಪರಿಚಯ : ವಿಶ್ರಾಂತ ಪ್ರಾಂಶುಪಾಲ ಪ್ರೊ. ಕೆ.ಆರ್. ಕೃಷ್ಣಯ್ಯ, ಉಪಸ್ಥಿತರು : ವಿಜ್ಞಾನ ಲೇಖಕ ಡಾ.ಎಸ್.ಎನ್.ಹೆಗಡೆ, ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಅಧ್ಯಕ್ಷ ವಿದ್ವಾನ್ ರಾಮಚಂದ್ರ ಭಟ್, ಅಧ್ಯಕ್ಷತೆ : ಜಾನಪದ ತಜ್ಞ ಜಿ.ಎಸ್. ಭಟ್ಟ, ಸ್ಥಳ: ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಕುವೆಂಪುನಗರ, ಸಂಜೆ 4ಕ್ಕೆ.

■ **ಮೈಸೂರು ಸಿಂಗರ್ಸ್ ಫ್ರೆಂಡ್ಸ್, ಮೈಸೂರು ನೃತ್ಯಗಿರಿ ಅಕಾಡೆಮಿ :** ಕನ್ನಡ ರಾಜ್ಯೋತ್ಸವದ, ಮುಖ್ಯ ಅತಿಥಿಗಳು : ಶಾಸಕರಾದ ಕೆ. ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ತನ್ವೀರ್ ಸೇಠ್, ವಿವೇಕಾನಂದ, ನಾಗರಾಜ್ ವಿ. ಭೈರಿ, ಶ್ರೀಹರಿ, ಬೀರಿಹುಂಡಿ ಬಸವಣ್ಣ, ಮಡ್ಡೀಕೆರೆ ಗೋಪಾಲ್, ಆಯೂಬ್ ಖಾನ್, ಹೆಚ್.ವಿ. ರಾಜೀವ್, ಸ್ಥಳ: ಜೆ.ಕೆ. ಮೈದಾನ, ಎಂಎಂಸಿ ಆಡಿಟೋರಿಯಂ, ಸಂಜೆ 4 ರಿಂದ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ– 906, ಕಥೆ ಹೇಳುವವರು: ಶ್ರೀಯುತ ಶಿವಣ್ಣ ಇಂದ್ವಾಡಿ, ನಿವೃತ್ತ ಪ್ರೌಢಶಾಲೆ ಶಿಕ್ಷಕರು ಹಾಗೂ ರಾಜ್ಯ ಸಂಪನ್ಮೂಲ ವ್ಯಕ್ತಿ, ಕೊಳ್ಳೇಗಾಲ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಬಾದ ರಾಮಣಾಚಾರ್ಯ ಅವರಿಂದ 'ಶ್ರೀಮತ್ ಭಾಗವತ್' ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5 ಗಂಟೆಗೆ.

■ **ಬೆಂಗಳೂರು ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು :** 159ನೇ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ದಾಸರ ಪದಗಳು ಕಾರ್ಯಕ್ರಮ, ವಿದ್ವಾನ್ ಪುತ್ತೂರು ನರಸಿಂಹ ನಾಯಕ್ ಅವರಿಂದ ಗಾಯನ, ಪಕ್ಕವಾದ್ಯದಲ್ಲಿ ರಾಘವೇಂದ್ರ ಜೋಷಿ–ತಬಲ, ಗಣೇಶ್ ಭಟ್–ಕೀಬೋರ್ಡ್, ವೆಂಕಟೇಶ್ ಪುರೋಹಿತ್–ಮಂಜಿರ, ಸ್ಥಳ: ಭಾರತೀಯ ವಿದ್ಯಾಭವನ, ವಿಜಯನಗರ 1ನೇ ಹಂತ, ಸಂಜೆ 6 ಗಂಟೆಗೆ

■ **ಕಲಾಸುರುಚಿ :** ವಿಶ್ವನಾಥ ಮಿರ್ಲೆ ನೆನಪಿನ ಮಕ್ಕಳ ಇಂಗ್ಲಿಷ್ ನಾಟಕೋತ್ಸವ, ಸಂಜೆ 6 ರಿಂದ ದಿ ಆರ್ಕಿಡ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಗಳಿಂದ ಪಿಗ್‌ಮ್ಯಾಲಿಯನ್, ಸಂಜೆ 7 ರಿಂದ ಅರಿವು ಸ್ಕೂಲ್ ವಿದ್ಯಾರ್ಥಿಗಳಿಂದ ಲಾಲಿ ರೋಡ್ ನಾಟಕ ಪ್ರದರ್ಶನ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ.

■ **ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಕನ್ನಡ ರಾಜ್ಯೋತ್ಸವ ಆಚರಣೆ, ಉದ್ಘಾಟನೆ : ಕರ್ನಾಟಕ ರಾಜ್ಯ ಮುಕ್ತ ವಿವಿ ವಿಶ್ರಾಂತ ಕುಲಪತಿ ಡಾ. ಎನ್.ಎಸ್. ರಾಮೇಗೌಡ, ಸನ್ಮಾನಿತರು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು : ರಂಗಕರ್ಮಿ ರಾಜಶೇಖರ ಕದಂಬ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಹೆಚ್.ಎಸ್. ಸುರೇಶ್‌ಬಾಬು, ಸ್ಥಳ: ಎಸ್.ಪಿ. ಭಟ್ ಸಭಾಂಗಣ, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಶ್ರೀಮತಿ ರುಕ್ಮಿಣಿ ಅಮ್ಮಾಳ್ ಮತ್ತು ಶ್ರೀ ರಾಮಸ್ವಾಮಿ ಅಯ್ಯಂಗಾರ್ ಸಂಸ್ಮರಣಾ ಕಾರ್ಯಕ್ರಮ, ಡಾ. ನಾಗಲಕ್ಷ್ಮಿ ನಾಗರಾಜನ್ ಅವರಿಂದ ಕರ್ನಾಟಕ ಕಾವೇರಿ ಭಾವಧಾರೆ–ನೃತ್ಯ ರೂಪಕ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 6.15ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ – ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೊಡ್ಲಿ ಗುರುರಾಜು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 9.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಿರಿಧಾನ್ಯಗಳ ಬೇಸಾಯ ಪ್ರಾಮುಖ್ಯತೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ ಚಿಕ್ಕಹುಂಡಿಯ ಕೃಷಿಕ ದಂಪತಿ ಸಿ.ಪಿ.ನಂಜುಂಡಪ್ಪ ಮತ್ತು ನಾಗಮ್ಮ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿದೂಷಿ ಚಾರುಮತಿ ರಾಮಚಂದ್ರನ್ – ಹಾಡುಗಾರಿಕೆ.

ಮೈಸೂರು ದಸರಾ ವಸ್ತುಪ್ರದರ್ಶನ, ಮೃಗಾಲಯ, ಪ್ರವಾಸಿ ತಾಣಗಳಲ್ಲಿ ಮಕ್ಕಳ ಸಂಭ್ರಮ



ಮಕ್ಕಳ ದಿನಾಚರಣೆ ಹಿನ್ನೆಲೆಯಲ್ಲಿ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಮಕ್ಕಳು ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು.



ವಸ್ತು ಪ್ರದರ್ಶನ ಪ್ರಾಧಿಕಾರದಿಂದ ಮಕ್ಕಳಿಗೆ ಉಚಿತವಾಗಿ ಬಾಳೆಹಣ್ಣು, ಕಿತ್ತಳೆಹಣ್ಣು, ಮಜ್ಜಿಗೆ ವಿತರಿಸಲಾಯಿತು.

ಮಕ್ಕಳ ಸಂಭ್ರಮವೇ ನಮಗೆ ಖುಷಿ

ಮಕ್ಕಳ ದಿನಾಚರಣೆಯಂದು ದಸರಾ ವಸ್ತು ಪ್ರದರ್ಶನ ವೀಕ್ಷಣೆಗೆ ಬರುವ ಮಕ್ಕಳಿಗೆ ಪ್ರಾಧಿಕಾರದ ವತಿಯಿಂದ ಪ್ರೀತಿಯಿಂದ ಬರಮಾಡಿಕೊಳ್ಳಲಾಗಿದೆ. ಉಚಿತ ಪ್ರವೇಶಾವಕಾಶದೊಂದಿಗೆ ಮಕ್ಕಳಿಗೆ ಕಡಲೆಕಾಯಿ, ಬಾಳೆಹಣ್ಣು, ಕಿತ್ತಳೆಹಣ್ಣು, ಮಜ್ಜಿಗೆ, ಐಸ್‌ಕ್ರೀಮ್, ಲಘು ಉಪಹಾರ ನೀಡಲಾಗಿದೆ. ಎಲ್ಲಾ ಸರ್ಕಾರಿ ಮಳಿಗೆಗಳನ್ನು ಬೆಳಗ್ಗಿನಿಂದಲೇ ತೆರೆದು, ಮಕ್ಕಳಿಗೆ ಮಾಹಿತಿ ಒದಗಿಸಲಾಗಿದೆ. ಕೆಲವು ಆಟೋಟಗಳಲ್ಲಿ ಉಚಿತ ಸೇವೆ ಒದಗಿಸಲಾಗಿದೆ ಬೆಳಗ್ಗಿನಿಂದ ಸಂಜೆಯವರೆಗೂ ಸಾವಿರಾರು ಮಕ್ಕಳು ವಸ್ತುಪ್ರದರ್ಶನ ಭೇಟಿ ನೀಡಿ ಸಂಭ್ರಮಿಸಿದ್ದಾರೆ.

- ಅಯೂಬ್ ಖಾನ್.
ಅಧ್ಯಕ್ಷ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ

ಮೈಸೂರು, ನ.14(ಎಂಟಿವೈ)–ಶುಕ್ರವಾರ ಮೈಸೂರಲ್ಲಿ ಮಕ್ಕಳ ದಿನಾಚರಣೆ ಸಂಭ್ರಮ ಜೋರಾಗಿತ್ತು. ದಸರಾ ವಸ್ತು ಪ್ರದರ್ಶನ, ಮೃಗಾಲಯ ಸೇರಿದಂತೆ ಪ್ರಮುಖ ಪ್ರವಾಸಿ ತಾಣಗಳಲ್ಲಿ ಮಕ್ಕಳ ದಂಡೇ ನೆರೆದು ಸಂಭ್ರಮಿಸಿತು.

ಮಕ್ಕಳ ದಿನಾಚರಣೆ ಅಂಗವಾಗಿ ಮೈಸೂರು ನಗರ ಹಾಗೂ ತಾಲೂಕಿನ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಮೃಗಾಲಯ ಹಾಗೂ ದಸರಾ ವಸ್ತುಪ್ರದರ್ಶನ ವೀಕ್ಷಿಸಿ ಸಂಭ್ರಮಿಸಿದರು. ಕೆಲವರು ಅರಮನೆ, ಚಾಮುಂಡಿಬೆಟ್ಟಕ್ಕೂ ತೆರಳಿ ಮಕ್ಕಳ ದಿನಾಚರಣೆಯ ಸಂಭ್ರಮದಲ್ಲಿ ಮಿಂದೆದ್ದರು. ಶಾಲಾ ಕೊಠಡಿಯಲ್ಲಿ ಬೆಳಗ್ಗಿನಿಂದ ಸಂಜೆವರೆಗೆ ಪಾಠ ಆಲಿಸುತ್ತಿದ್ದ ವಿದ್ಯಾರ್ಥಿಗಳು ಇಂದು ಸ್ವಚ್ಛಂದವಾಗಿ ವಿಹರಿಸುತ್ತ ಮಕ್ಕಳ ದಿನವನ್ನು ಹಬ್ಬದಂತೆ ಆಚರಿಸಿದರು.

ಮೃಗಾಲಯಕ್ಕೆ ಭೇಟಿ: ವಿವಿಧೆಡೆಯಿಂದ ಆಗಮಿಸಿದ್ದ ಶಾಲಾ ವಿದ್ಯಾರ್ಥಿಗಳು ಬೆಳಗ್ಗಿನಿಂದ ಮಧ್ಯಾಹ್ನದವರೆಗೆ ಮೈಸೂರು ಮೃಗಾಲಯಕ್ಕೆ ಮುಗಿಬಿದ್ದರು. ಬೆಳಗ್ಗೆ 8.30ರಿಂದ ಮಧ್ಯಾಹ್ನ 12 ಗಂಟೆವರೆಗೆ 12 ವರ್ಷದೊಳಗಿನ ಮಕ್ಕಳಿಗೆ ಮೃಗಾಲಯಕ್ಕೆ ಉಚಿತ ಪ್ರವೇಶಾವಕಾಶ ನೀಡಲಾಗಿತ್ತು. ಗ್ರಾಮೀಣ ಪ್ರದೇಶದಿಂದ ತಂಡೋಪ ತಂಡವಾಗಿ ಆಗಮಿಸಿದ್ದ ಮಕ್ಕಳು ಮೃಗಾಲಯ ವೀಕ್ಷಿಸಿ ಸಂಭ್ರಮಿಸಿದರು. ಸಮವಸ್ತ್ರ ಹಾಗೂ ಗುರುತಿನ ಚೀಟಿ ಪರಿಶೀಲಿಸಿ ಮೃಗಾಲಯ ಪ್ರವೇಶಿಸಲು ಅವಕಾಶ ಮಾಡಿಕೊಡಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಆಗಮಿಸಿದ್ದರಿಂದ ಮೃಗಾಲಯದ ಒಳಗೆ ಪ್ರಾಣಿಗಳ ಬೋನ್ ಬಳಿ ನುಸುಳದಂತೆ ಕಟ್ಟೆಚ್ಚರ ವಹಿಸಲು ಹೆಚ್ಚಿನ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿತ್ತು.

ದಸರಾ ವಸ್ತುಪ್ರದರ್ಶನದಲ್ಲಿ ಮಕ್ಕಳ ಜಾತ್ರೆ: ಮಕ್ಕಳ ದಿನಾಚರಣೆ ಹಿನ್ನೆಲೆಯಲ್ಲಿ ದಸರಾ ವಸ್ತು ಪ್ರದರ್ಶನಕ್ಕೆ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 4 ಗಂಟೆವರೆಗೆ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಕ್ಕೆ ಅವಕಾಶ ನೀಡಲಾಗಿತ್ತು. ಅಪಾರ ಸಂಖ್ಯೆಯಲ್ಲಿ ಬಂದ ಹಿನ್ನೆಲೆಯಲ್ಲಿ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಮಕ್ಕಳ ಜಾತ್ರೆಯು ಕಂಡು ಬಂದಿತು. ಎಲ್ಲಿ ನೋಡಿದರೂ ಮಕ್ಕಳ ದಂಡೇ ಕಾಣುತ್ತಿತ್ತು. ವಿವಿಧ ಆಟೋಟ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಕ್ಕಳು ಸಂಗೀತಕ್ಕೆ ಕುಣಿದು ಕುಪ್ಪಳಿಸಿದರು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ಮಕ್ಕಳಿಗೆ ಸಿಹಿ, ಗುಲಾಬಿ ನೀಡಿ ಬರಮಾಡಿಕೊಳ್ಳಲಾಯಿತು. ಬಳಿಕ ಮಕ್ಕಳಿಗೆ ಉಚಿತವಾಗಿ ಬಾಳೆಹಣ್ಣು, ಕಿತ್ತಲೆಹಣ್ಣು, ಕಡಲೇಕಾಯಿ, ಐಸ್‌ಕ್ರೀಮ್ ವಿತರಿಸಲಾಯಿತು. ಮಧ್ಯಾಹ್ನದ ನಂತರ ಮಕ್ಕಳಿಗೆ ರೈಸ್ ಬಾತ್, ಮೊಸರನ್ನ ನೀಡಿ ಹಸಿವು ತಣಿಸಲಾಯಿತು.

ವಸ್ತು ಪ್ರದರ್ಶನ ಆವರಣದಲ್ಲಿನ ಕಾಳಿಂಗರಾವ್ ರಂಗ ಮಂಟಪದಲ್ಲಿ ಪ್ರಾಧಿಕಾರದ ವತಿಯಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿವಿಧ ಕಾಲೇಜು ವಿದ್ಯಾರ್ಥಿಗಳ ತಂಡ ಕೊಡವ ವಾಲಗ ನೃತ್ಯ ಸೇರಿದಂತೆ ವಿವಿಧ ನೃತ್ಯ ಪ್ರದರ್ಶಿಸಿ ಮಕ್ಕಳಿಗೆ ಮುದ ನೀಡಿದರು. ಅಲ್ಲದೆ, ಗಾಯನ ಕಾರ್ಯಕ್ರಮವೂ ನೆರೆದಿದ್ದ ಅಪಾರ ಸಂಖ್ಯೆ ಮಕ್ಕಳನ್ನು ಮಂತ್ರ ಮುಗ್ಧರನ್ನಾಗಿಸಿತು. ಇದೇ ವೇಳೆ ಮಕ್ಕಳು ಸಂಗೀತಕ್ಕೆ ಸಾಮೂಹಿಕವಾಗಿ ನೃತ್ಯ ಮಾಡುವ ಮೂಲಕ ಗಮನ ಸೆಳೆದರು.

ಈ ಸಂದರ್ಭದಲ್ಲಿ ರಂಗಕರ್ಮಿ ಪ್ರಸನ್ನ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಂಗಕರ್ಮಿ ಮೈಮ್ ರಮೇಶ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸೋಲಿನ ಸರದಾರ ರಾಹುಲ್ ಗಾಂಧಿಗೆ 95ನೇ ಸೋಲು!

ಸಾಮಾಜಿಕ ಜಾಲತಾಣದಲ್ಲಿ ಬಿಜೆಪಿ ಅಣಕು

ನವದೆಹಲಿ, ನ.14– ಬಿಹಾರದಲ್ಲಿ ಎನ್‌ಡಿಎ ಮೈತ್ರಿ ಕೂಟ ಭರ್ಜರಿ ಗೆಲುವು ಸಾಧಿಸಿದ್ದು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ವಿರುದ್ಧ ಬಿಜೆಪಿ ತನ್ನ ದಾಳಿಯನ್ನು ತೀವ್ರಗೊಳಿಸಿದೆ. ಅವರನ್ನು ಪುನರಾವರ್ತಿತ ಚುನಾವಣಾ ಸೋಲುಗಳ ಸಂಕೇತವೆಂದು ಕರೆದಿದೆ.

ಚುನಾವಣೆಗೆ ಮುಂಚಿತವಾಗಿ 20 ಜಿಲ್ಲೆಗಳಲ್ಲಿ ರಾಹುಲ್ ಗಾಂಧಿ 16 ದಿನ ಮತದಾರರ ಅಧಿಕಾರ ಯಾತ್ರೆಯನ್ನು ಕೈಗೊಂಡಿದ್ದರು. 'ಮತಗಳ್ಳತನ' ಆರೋಪಗಳ ಮೇಲೆ ತಮ್ಮ ಪ್ರಚಾರವನ್ನು ಕೇಂದ್ರೀಕರಿಸಿದ್ದರು. ಚುನಾವಣಾ ಆಯೋಗವು ಅನುಕೂಲಕರ ಫಲಿತಾಂಶವನ್ನು ರೂಪಿಸಲು ಬಿಜೆಪಿಯೊಂದಿಗೆ ಒಪ್ಪಂದ ಮಾಡಿಕೊಂಡಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಮತ್ತು ಇಂಡಿ ಬ್ಲಾಕ್ ಈ ಚುನಾವಣೆಯನ್ನು 'ಮತ–ಕಳ್ಳ' ಸರ್ಕಾರ ಎಂದು ಕರೆದು, ಸಂವಿಧಾನವನ್ನು ಉಳಿಸುವ ನಿರ್ಣಾಯಕ ಯುದ್ಧ ಎಂದು ಬಿಂಬಿಸಿದ್ದವು. ರಾಹುಲ್ ಗಾಂಧಿಯವರು ರಾಜ್ಯದಲ್ಲಿ ಕಾಂಗ್ರೆಸ್‌ನ ಸ್ಟಾರ್ ಪ್ರಚಾರಕರಲ್ಲಿ ಒಬ್ಬರಾಗಿದ್ದರು. ವಿಪರ್ಯಾಸ ಎಂದರೆ ಅವರು ಪ್ರಚಾರ ಮಾಡಿದ ಜಿಲ್ಲೆಗಳಲ್ಲಿ ಕಾಂಗ್ರೆಸ್ ಸೋತಿದೆ.



ಕಳೆದ ಎರಡು ದಶಕಗಳಲ್ಲಿ ರಾಹುಲ್ ಗಾಂಧಿ ತಮ್ಮ ಪಕ್ಷಕ್ಕೆ 95 ಸೋಲು ಉಂಟು ಮಾಡಿದ್ದಾರೆ ಎಂದು ಬಿಜೆಪಿಯ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಪೋಸ್ಟ್ ಮಾಡಿದ್ದಾರೆ. 'ರಾಹುಲ್ ಗಾಂಧಿ! ಮತ್ತೊಂದು ಚುನಾವಣೆ, ಮತ್ತೊಂದು ಸೋಲು!' ಶೀರ್ಷಿಕೆಯಡಿ, ರಾಹುಲ್ ಗಾಂಧಿ ಚುನಾವಣಾ ರಾಜಕೀಯಕ್ಕೆ ಪ್ರವೇಶಿಸಿದ ನಂತರ ಕಾಂಗ್ರೆಸ್ ಪಕ್ಷ ಯಾವಾಗ ಮತ್ತು ಎಲ್ಲಿ ಚುನಾವಣೆಗಳಲ್ಲಿ ಸೋತಿದೆ ಎಂಬುದನ್ನು ತೋರಿಸುವ ರಾಜ್ಯ ಚುನಾವಣೆಗಳ ಗ್ರಾಫಿಕ್ಸ್ ಅನ್ನು ಬಿಜೆಪಿ ನಾಯಕರು ಪೋಸ್ಟ್ ಮಾಡಿದ್ದಾರೆ.

ಮಾಳವೀಯ ಈ ಗ್ರಾಫಿಕ್ ಅನ್ನು ಪೋಸ್ಟ್ ಮಾಡಿದ್ದಾರೆ. ಇದು 2004 ಮತ್ತು 2025ರ ನಡುವಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಸೋಲುಗಳನ್ನು ಪಟ್ಟಿ ಮಾಡಿದೆ. ಬಿಜೆಪಿ ಪ್ರಕಾರ, ರಾಹುಲ್ ಗಾಂಧಿ ಪ್ರಚಾರದ ಪ್ರಮುಖ ಪಾತ್ರವನ್ನು ವಹಿಸಿದ್ದರು. ಈ ಪಟ್ಟಿಯು ಬಹುತೇಕ ಎಲ್ಲಾ ಪ್ರಮುಖ ರಾಜ್ಯಗಳನ್ನು ಒಳಗೊಂಡಿದೆ. ಹಿಮಾಚಲ ಪ್ರದೇಶ (2007, 2017), ಪಂಜಾಬ್ (2007, 2012, 2022), ಗುಜರಾತ್ (2007, 2012, 2017, 2022), ಮಧ್ಯಪ್ರದೇಶ (2008, 2013, 2018, 2023), ಮತ್ತು ಮಹಾರಾಷ್ಟ್ರ (2014, 2019, 2024). ಇದು ದೆಹಲಿ, ಹರಿಯಾಣ, ಉತ್ತರ ಪ್ರದೇಶ, ಬಿಹಾರ, ಈಶಾನ್ಯ, ದಕ್ಷಿಣ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಒಡಿಶಾ ಮತ್ತು ಆಂಧ್ರಪ್ರದೇಶದಲ್ಲಿನ ಹಿನ್ನಡೆಗಳನ್ನು ಸಹ ಒಳಗೊಂಡಿದೆ.

ತೊಂದರೆಗೆ ಸಿಲುಕಿರುವ ಮಕ್ಕಳ ರಕ್ಷಿಸಿ, ಪುನರ್ವಸತಿಗೆ ಬದ್ಧ

ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ರವಿಚಂದ್ರ

ಮೈಸೂರು, ನ.14(ಎಂಟಿವೈ)– ವಿವಿಧ ಕಾರಣಗಳಿಂದ ತೊಂದರೆಗೆ ಸಿಲುಕಿರುವ ಮಕ್ಕಳ ರಕ್ಷಣೆ ಮಾಡಿ ಅವರಿಗೆ ಸೂಕ್ತ ಶಿಕ್ಷಣ ಕೊಡಿಸುವುದರೊಂದಿಗೆ ಅಗತ್ಯ ಪುನರ್ವಸತಿ ಕಲ್ಪಿಸುವುದಕ್ಕೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಬದ್ಧವಾಗಿದೆ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ರವಿಚಂದ್ರ ತಿಳಿಸಿದ್ದಾರೆ.

ಮೈಸೂರಿನ ಜ್ಞಾನೋದಯ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ , ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಮಕ್ಕಳ ಸಹಾಯವಾಣಿ ಘಟಕ–1098/112 ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಮಕ್ಕಳ ಮಾಸ ಮತ್ತು ಅಂತರಾಷ್ಟ್ರೀಯ ದತ್ತು ಮಾಸಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನವೆಂಬರ್ ಮಾಸವನ್ನು ಮಕ್ಕಳ ಮಾಸವೆಂದು ಸರ್ಕಾರ ಘೋಷಿಸಿದೆ. ತೊಂದರೆಯಲ್ಲಿ ಸಿಲುಕುವ ಮಕ್ಕಳ ರಕ್ಷಣೆಗೆ ಕ್ರಮ ಕೈಗೊಳ್ಳಲಾಗುತ್ತದೆ. ಅಲ್ಲದೆ, ರಕ್ಷಿಸಲ್ಪಟ್ಟ ಮಕ್ಕಳ ಪಾಲನೆ, ಪೋಷಣೆ, ರಕ್ಷಣೆ ಅಗತ್ಯವಿದ್ದಲ್ಲಿ ಸೂಕ್ತ ಪುನರ್ವಸತಿ ಕಲ್ಪಿಸಲಾಗುತ್ತದೆ. ಅವರಿಗೆ ಆಪ್ತ ಸಮಾಲೋಚನೆ ಮಾಡಿ, ಸೂಕ್ತ ಶಿಕ್ಷಣ ಕೊಡಿಸಲಾಗುತ್ತದೆ. ಸಾಮಾಜಿಕ ಬೆಂಬಲದೊಂದಿಗೆ ಕುಟುಂಬದೊಂದಿಗೆ ಸಂಮಿಲನ ಹಾಗೂ ಸಮಾಜದ ಮುಖ್ಯವಾಹಿನಿಗೆ ತರಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲಾ ಕಾನೂನು ಪ್ರಾಧಿಕಾರದ ಸಹಾಯಕ ಕಾನೂನು ಅಭಿರಕ್ಷಕರಾದ ಎನ್.ಗೀತಾ ಮಾತನಾಡಿ, ಬಾಲ್ಯವಿವಾಹ ಹೆಚ್ಚಾಗಲು ಹಲವಾರು ಸಾಮಾಜಿಕ ಕಾರಣಗಳಿವೆ. ಮಕ್ಕಳು ಪ್ರೀತಿ–ಪ್ರೇಮದ ಬಲೆಗೆ ಬಿದ್ದು ಬಾಲ್ಯವಿವಾಹ ಪ್ರಕರಣಗಳು ಹೆಚ್ಚಾಗಲು ಪ್ರಮುಖ ಕಾರಣವಾಗುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ಮುಳುಗುವ ಮಕ್ಕಳು ಕಲಿಕೆಯಲ್ಲಿ ನಿರ್ಲಕ್ಷ್ಯ ತೋರುತ್ತಿದ್ದಾರೆ. ಇದು ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಗುತ್ತಿದೆ ಎಂದು ವಿಷಾದಿಸಿದರು.



ಮೈಸೂರಿನ ಜ್ಞಾನೋದಯ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ 'ಮಕ್ಕಳ ಮಾಸ ಮತ್ತು ಅಂತರಾಷ್ಟ್ರೀಯ ದತ್ತು ಮಾಸಾಚರಣೆ' ಕಾರ್ಯಕ್ರಮವನ್ನು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ರವಿಚಂದ್ರ ಉದ್ಘಾಟಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಸಾಂಸ್ಥಿಕ ಅಧಿಕಾರಿ ಅಪೇಕ್ಷಿತ ಮಾತನಾಡಿ, ಕಾನೂನು ಬದ್ಧ ದತ್ತು ಸ್ವೀಕಾರವು ಒಂದು ಮಗುವಿಗೆ ಕಾನೂನು ಬದ್ಧ ಕುಟುಂಬ ವ್ಯವಸ್ಥೆಯನ್ನು ಕಲ್ಪಿಸಿದಂತಾಗುತ್ತದೆ. ಕಾನೂನು ಬಾಹಿರವಾಗಿ ದತ್ತು ಪಡೆಯುವ ಪೋಷಕರು ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ ಅಡಿ 5 ವರ್ಷ ಜೈಲು, 2 ಲಕ್ಷ ದಂಡ ವಿಧಿಸಲು ಅವಕಾಶವಿದೆ ಎಂದು ತಿಳಿಸಿದರು.

ಮಕ್ಕಳ ಸಹಾಯವಾಣಿ–1098/112 ಘಟಕದ ಜಿಲ್ಲಾ ಯೋಜನಾ ಸಂಯೋಜಕರಾದ ಎ.ಎಸ್.ರಘು ಮಾತನಾಡಿ, 18 ವರ್ಷದೊಳಗಿನ ಮಕ್ಕಳು ಪ್ರಮುಖವಾಗಿ ಭೌತಿಕ, ಮಾನಸಿಕ, ದೈಹಿಕ, ಸಾಮಾಜಿಕ ಮತ್ತು ಭಾಷಿಕ ಬೆಳವಣಿಗೆ ಹೊಂದಲು ಅವಕಾಶ ಕಲ್ಪಿಸಬೇಕು. ಹಕ್ಕು ಆಧಾರಿತ ಮಕ್ಕಳ ಸ್ನೇಹಿ ವಾತಾವರಣ ಕಲ್ಪಿಸಬೇಕು. ಮಕ್ಕಳ ಹಕ್ಕುಗಳು ಉಲ್ಲಂಘನೆಯಾದಲ್ಲಿ ಹಾಗೂ ಯಾವುದೇ ಸಂಕಷ್ಟ ಪರಿಸ್ಥಿತಿ ಇದ್ದಲಿ ಮಕ್ಕಳ ಉಚಿತ ಸಹಾಯವಾಣಿ –1098ಗೆ ಕರೆ ಮಾಡಿ ದೂರು ದಾಖಲಿಸುವಂತೆ ಸಲಹೆ ನೀಡಿದರು.

ಕಾಲೇಜಿನ ಪ್ರಾಂಶುಪಾಲರಾದ ಪದ್ಮ ರವಿ ಮಾತನಾಡಿ, ಮಕ್ಕಳಿಗಾಗಿ ಹಲವು ಕಾನೂನು ಮತ್ತು ಕಾಯ್ದೆಗಳು ರೂಪಿಸಲಾಗಿದ್ದು, ಅದರ ಅನುಷ್ಠಾನಕ್ಕಾಗಿ ಹಾಗೂ ಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪಾತ್ರ ಹಾಗೂ ಮಕ್ಕಳ ಸಹಾಯವಾಣಿಯ ಸೇವೆ ಬಹಳ ಮುಖ್ಯವಾದದ್ದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾನೂನು ಮತ್ತು ಪರಿವೀಕ್ಷಣಾಧಿಕಾರಿ ಚಂದ್ರಕುಮಾರ್, ಭಾಸ್ಕರ್, ಅನ್ನಪೂರ್ಣ ಜೋಸ್ ಹಾಗೂ ಇತರರು ಉಪಸ್ಥಿತರಿದ್ದರು.

ಅಲಿನಗರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಮೈಥಿಲಿ ಠಾಕೂರ್ ಅತೀ ಕಿರಿಯ ವಯಸ್ಸಿನ ಶಾಸಕಿ

ಪಾಟ್ನಾ, ನ.14– ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಕೇವಲ 25 ವರ್ಷದ ಜಾನಪದ ಗಾಯಕಿ ಹಾಗೂ ಬಿಜೆಪಿ ಅಭ್ಯರ್ಥಿ ಮೈಥಿಲಿ ಠಾಕೂರ್ ಅವರು ಅಲಿನಗರ ವಿಧಾನಸಭಾ ಕ್ಷೇತ್ರದಲ್ಲಿ ಅಮೋಘ ಜಯಭೇರಿ ಬಾರಿಸಿ, ಇತಿಹಾಸ ನಿರ್ಮಿಸಿದ್ದಾರೆ.

ಮತ ಎಣಿಕೆ ಆರಂಭವಾದಾಗಿನಿಂದ ಸತತ ಎಲ್ಲ ಸುತ್ತುಗಳಲ್ಲಿ ಮುನ್ನಡೆ ಕಾಯ್ದುಕೊಂಡ ಮೈಥಿಲಿ ಠಾಕೂರ್ ಆರ್‌ಜೆಡಿಯ ಹಿರಿಯ ನಾಯಕ ಬಿನೋದ್ ಮಿಶ್ರಾ ಅವರನ್ನು ಮಣಿಸಿದ್ದಾರೆ.



ಬಿಜೆಪಿ ಮೈಥಿಲಿ ಠಾಕೂರ್ ಒಟ್ಟಾರೆ 74 ಸಾವಿರಕ್ಕೂ ಅಧಿಕ ಮತಗಳನ್ನು ಪಡೆದಿದ್ದು, ಆ ಮೂಲಕ ತಮ್ಮ ಸಮೀಪದ ಸ್ಪರ್ಧಿ ಆರ್‌ಜೆಡಿಯ ಬಿನೋದ್ ಮಿಶ್ರಾ ಅವರಿಗಿಂತ 12 ಸಾವಿರಕ್ಕೂ ಅಧಿಕ ಮತಗಳನ್ನು ಪಡೆದು ಐತಿಹಾಸಿಕ ಜಯ ಸಾಧಿಸಿದ್ದಾರೆ.

ಅಲಿನಗರವು ಸಾಂಪ್ರದಾಯಿಕವಾಗಿ ಆರ್‌ಜೆಡಿಯ ಭದ್ರಕೋಟೆಯಾಗಿದ್ದು, ಅನುಭವಿ ಅಬ್ದುಲ್ ಬಾರಿ ಸಿದ್ದಿಕಿ ದೀರ್ಘಕಾಲದಿಂದ ಪ್ರತಿನಿಧಿಸುತ್ತಿದ್ದರು. ಅಲ್ಲದೆ ಬರೋಬ್ಬರಿ 7 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಆದರೆ ಅವರು 2015 ರ ಗೆಲುವಿನ ನಂತರ ಚುನಾವಣಾ ರಾಜಕೀಯದಿಂದ ದೂರ ಸರಿದಿದ್ದರು.

2020ರಲ್ಲಿ ಈ ಕ್ಷೇತ್ರ ಮಿಶ್ರಿಲಾಲ್ ಯಾದವ್ ಅವರಿಗೆ ವಿಕಾಸಶೀಲ್ ಇನ್ಸಾನ್ ಪಕ್ಷದ ಪಾಲಾಯಿತು. ನಂತರ ಅವರು ಕೇವಲ 3,000ಕ್ಕೂ ಹೆಚ್ಚು ಮತಗಳ ಕಡಿಮೆ ಅಂತರದಿಂದ ಗೆದ್ದ ನಂತರ ಬಿಜೆಪಿ ಸೇರಿದ್ದರು. ಮೇ 2025 ರಲ್ಲಿ, ದರ್ಭಾಂಗಾದ ಸಂಸದ–ಶಾಸಕ ನ್ಯಾಯಾಲಯವು 2019 ರ ಕ್ರಿಮಿನಲ್ ಪ್ರಕರಣದಲ್ಲಿ ಅವರಿಗೆ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿತು. ನಂತರ ಬಿಜೆಪಿ ಅವರ ಬದಲಿಗೆ ಮೈಥಿಲಿ ಠಾಕೂರ್ ಅವರನ್ನು ಸ್ಪರ್ಧೆಗಿಳಿಸಿತ್ತು.

ದಕ್ಷಿಣ ಆಫ್ರಿಕಾ–ಭಾರತ ಮೊದಲ ಟೆಸ್ಟ್: ಭಾರತ ಆರಂಭ ಮೇಲುಗೈ

ಕೋಲ್ಕತ್ತಾ, ನ.14(ವಿವಿಹೆಚ್)– ಇಲ್ಲಿನ ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಮೊದಲ ಟೆಸ್ಟ್ ಪಂದ್ಯದ ಮೊದಲ ದಿನದಾಟದಲ್ಲಿ ಭಾರತ ಮೇಲುಗೈ ಸಾಧಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ದಕ್ಷಿಣ ಆಫ್ರಿಕಾ, ವೇಗಿ ಬುಮ್ರಾ ಅವರ ಮಾರಕ ದಾಳಿಗೆ ತತ್ತರಿಸಿತು. ಮೊದಲ ಇನಿಂಗ್ಸ್‌ನಲ್ಲಿ 55 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 159 ರನ್ ಗಳಿಸಲಷ್ಟೆ ಶಕ್ತವಾಯಿತು.

ಇತ್ತ ತನ್ನ ಮೊದಲ ಇನ್ನಿಂಗ್ಸ್ ಆರಂಭಿಸಿರುವ ಭಾರತ 20 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು 37 ರನ್ ಗಳಿಸಿ ಎರಡನೇ ದಿನಕ್ಕೆ ಆಟ ಕಾಯ್ದಿರಿಸಿಕೊಂಡಿದೆ.

ದಕ್ಷಿಣ ಆಫ್ರಿಕಾ ಮೊದಲ 20 ಓವರ್ ಮುಕ್ತಾಯದ ವೇಳೆ 86 ರನ್ ಗಳಿಸಿ ಪ್ರಮುಖ 3 ವಿಕೆಟ್ ಕಳೆದುಕೊಂಡಿತ್ತು. ಬಳಿಕ ದ.ಆಫ್ರಿಕಾ ವಿರುದ್ಧ ಕರಾರುವಕ್ಕಾದ ದಾಳಿ ನಡೆಸಿದ ಬುಮ್ರಾ ಕೇವಲ 27 ರನ್ ಬಿಟ್ಟುಕೊಟ್ಟು ಪ್ರಮುಖ 5 ವಿಕೆಟ್ ಕಬಳಿಸಿದರು. ಇದರಿಂದ ಮಂಕಾದ ಹರಿಣ ಪಡೆ ಅಲ್ಪ ಮೊತ್ತಕ್ಕೆ ಕುಸಿಯಿತು.



ಆರಂಭಿಕ ಬ್ಯಾಟರ್ ಐಡೆನ್ ಮಾರ್ಕ್ರಮ್ 31 ರನ್ ಗಳಿಸಿ ಜಸ್ಪ್ರೀತ್ ಬುಮ್ರಾ ಅವರಿಗೆ ವಿಕೆಟ್ ಒಪ್ಪಿಸಿದರು. ಬಳಿಕ ರಿಯಾನ್ ರಿಕಲ್ಟನ್ 23 ರನ್ ಗಳಿಸಿ ಔಟಾದರೆ, ನಾಯಕ ತೆಂಬಾ ಬವುಮಾ 3 ರನ್‌ಗಳಿಗೆ ಪೆವಿಲಿಯನ್ ಸೇರಿದರು. ದಕ್ಷಿಣ ಆಫ್ರಿಕಾ ಪರ, ವಿಯಾನ್ ಮುಲ್ಡರ್ 24, ಟೋನಿ ಡಿ ಜೋರ್ಜಿ 24, ಟ್ರಿಸ್ಟಾನ್ ಸ್ಟಬ್ಸ್ 15, ಕೈಲ್ ವೆರೆನ್ 16, ಮಾರ್ಕೊ ಜಾನ್ಸೆನ್ ಶೂನ್ಯಕ್ಕೆ ನಿರ್ಗಮಿಸಿದರು.

ಟೀಂ ಇಂಡಿಯಾ ಪರ ಜಸ್ಪ್ರೀತ್ ಬುಮ್ರಾ 5 ವಿಕೆಟ್ ಕಬಳಿಸಿದರು. ಮೊಹಮ್ಮದ್ ಸಿರಾಜ್ 2, ಕುಲದೀಪ್ ಯಾದವ್ 2 ಹಾಗೂ ಅಕ್ಷರ್ ಪಟೇಲ್ 1 ವಿಕೆಟ್ ಪಡೆದು ಭಾರತಕ್ಕೆ ನೆರವಾದರು.

ಇತ್ತ ತನ್ನ ಮೊದಲ ಇನ್ನಿಂಗ್ಸ್ ಆರಂಭಿಸಿದ ಭಾರತ ಯಶಸ್ವಿ ಜೈಸ್ವಾಲ್(12) ವಿಕೆಟ್ ಬೇಗನೇ ಕಳೆದುಕೊಂಡಿತು. ಬಳಿಕ ಒಂದಾದ ಕನ್ನಡಿಗ ಕೆ.ಎಲ್.ರಾಹುಲ್ ಅಜೇಯ 13 ಹಾಗೂ ವಾಷಿಂಗ್ಟನ್ ಸುಂದರ್ ಔಟಾಗದೇ 6 ರನ್ ಗಳಿಸಿ, ಯಾವುದೇ ವಿಕೆಟ್ ಬೀಳದಂತೆ ನೋಡಿಕೊಂಡರು. ದ.ಆಫ್ರಿಕಾ ಪರ ಮಾರ್ಕ್ರೋ ಏನ್ಸನ್ 1 ವಿಕೆಟ್ ಕಿತ್ತರು.

ದೆಹಲಿ ಸ್ಫೋಟ: 13 ಜನರ ಸಾವಿಗೆ ಕಾರಣನಾದ ಪುಲ್ವಾಮಾ ಶಂಕಿತ ಆರೋಪಿ ಡಾ. ಉಮರ್ ನಬಿ ಮನೆ ಧ್ವಂಸ

ನವದೆಹಲಿ, ನ.14– ದೆಹಲಿಯ ಕೆಂಪು ಕೋಟೆ ಸಮೀಪದಲ್ಲಿ ಪ್ರಬಲ ಕಾರು ಸ್ಫೋಟದ ಶಂಕಿತ ಆರೋಪಿ ಡಾ. ಉಮರ್ ನಬಿ ಮನೆಯನ್ನು ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಧ್ವಂಸಗೊಳಿಸಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರದ ಪುಲ್ವಾಮಾದಲ್ಲಿ ರಾತ್ರಿಯಿಡೀ ನಡೆದ ಪ್ರಮುಖ ಕಾರ್ಯಾಚರಣೆಯಲ್ಲಿ ಡಾ. ಉಮರ್ ನಬಿ ಮನೆಯನ್ನು ಅಧಿಕಾರಿಗಳು ನೆಲಸಮ ಮಾಡಿದ್ದಾರೆ. ದೆಹಲಿ ಸ್ಫೋಟದ ನಂತರ ಜಮ್ಮು ಮತ್ತು ಕಾಶ್ಮೀರ ಪೊಲೀಸರು ರಾತ್ರಿಯಿಡೀ ಕಾರ್ಯಾಚರಣೆ ನಡೆಸಿ, ಡಾ. ಉಮರ್ ಅವರ ಕುಟುಂಬದ ಮೂವರು ಸದಸ್ಯರು ಸೇರಿದಂತೆ ಆರು ಮಂದಿಯನ್ನು ಬಂಧಿಸಿದ್ದಾರೆ. ಸ್ಫೋಟ ಸ್ಥಳದಿಂದ ಸಂಗ್ರಹಿಸಲಾದ ಡಿಎನ್‌ಎ ಮಾದರಿಗಳು ಉಮರ್‌ನ ತಾಯಿಯ ಡಿಎನ್‌ಎ ಮಾದರಿಗಳೊಂದಿಗೆ ಹೊಂದಿಕೆಯಾದ ನಂತರ ಅವನ ಗುರುತು ದೃಢಪಟ್ಟಿತು.

ಸ್ಫೋಟದ ವೇಳೆ ಕಾರಿನಲ್ಲಿ ಉಮರ್ ಒಬ್ಬನೇ ಇದ್ದ ಎಂಬುದನ್ನೂ ತನಿಖಾಧಿಕಾರಿಗಳು ದೃಢಪಡಿಸಿದ್ದಾರೆ. ನ.10 ರಂದು ಕೆಂಪು ಕೋಟೆ ಸಮೀಪದಲ್ಲಿ ಸಂಭವಿಸಿದ್ದ ಪ್ರಬಲ ಕಾರು ಸ್ಫೋಟದಲ್ಲಿ 13 ಮಂದಿ ಮೃತಪಟ್ಟು ಹಲವರು ಗಾಯಗೊಂಡಿದ್ದರು.

ಇಂದು ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್ ದೆಹಲಿ ಪ್ರವಾಸ

ರಾಹುಲ್ ಗಾಂಧಿ ಅನುಪಸ್ಥಿತಿ; ಬಿಹಾರ ಫಲಿತಾಂಶ ಹಿನ್ನಡೆ, ಇಬ್ಬರ ಪ್ರಯತ್ನಗಳು ಫಲದಾಯಕವಾಗದ ಪರಿಸ್ಥಿತಿ ನಿರ್ಮಾಣ

ಬೆಂಗಳೂರು, ನ.14(ಕೆಎಂಶಿ)– ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿಯ ವಿದೇಶ ಪ್ರವಾಸ ವೇಳೆಯಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ ದೆಹಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯವಾದಿ ಕಪಿಲ್ ಸಿಬಲ್ ಅವರ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಉಭಯ ನಾಯಕರು ಒಂದು ದಿನದ ದೆಹಲಿ ಪ್ರವಾಸ ಕೈಗೊಂಡಿದ್ದಾರೆ.

ನವೆಂಬರ್ ಕ್ರಾಂತಿ ವದಂತಿಗಳ ಬೆನ್ನಲ್ಲೇ ಇಬ್ಬರೂ ನಾಯಕರು ದೆಹಲಿಗೆ ತೆರಳುತ್ತಿರುವ ವಿಚಾರ ಕಾಂಗ್ರೆಸ್ ವಲಯದಲ್ಲಿ ಭಾರೀ ಚರ್ಚೆಗೆ ಅವಕಾಶ ಮಾಡಿಕೊಟ್ಟಿದೆ.

ಆದರೆ, ಬಿಹಾರ ವಿಧಾನಸಭಾ ಚುನಾವಣೆ ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ರಾಹುಲ್ ಪೂರ್ವ ನಿಗದಿಯಂತೆ ಫಿನ್‌ಲ್ಯಾಂಡ್ ಪ್ರವಾಸಕ್ಕೆ ತೆರಳುತ್ತಿದ್ದಾರೆ.

ರಾಹುಲ್ ಅನುಪಸ್ಥಿತಿಯಲ್ಲಿ ಯಾವುದೇ ಪ್ರಮುಖ ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳಲಾಗದ ಕಾರಣ ಉಭಯ ನಾಯಕರ ಪ್ರವಾಸ ಉದ್ದೇಶವೂ ಈಡೇರುತ್ತಿಲ್ಲ.

ಡಿಸಿಎಂ ಅವಿರತ ಪ್ರಯತ್ನ: ನವೆಂಬರ್ 20ರ ನಂತರ ಕರ್ನಾಟಕದಲ್ಲಿ ತಮಗೆ ನಾಯಕತ್ವ ದೊರೆಕಿಸುವಂತೆ ವರಿಷ್ಠರನ್ನು ಕಳೆದ ಒಂದು ತಿಂಗಳಿಂದ ಶಿವಕುಮಾರ್ ಭೇಟಿ ಮಾಡುತ್ತಲೇ ಬಂದಿದ್ದಾರೆ.



ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್

ಶನಿವಾರದ ಭೇಟಿ ವೇಳೆ ಅಂತಿಮ ಸ್ವರೂಪ ದೊರೆಯಲಿದೆ ಎಂಬ ನಿರೀಕ್ಷೆಯಲ್ಲಿ ಶಿವಕುಮಾರ್ ಇದ್ದರು. ಆದರೆ, ರಾಹುಲ್ ಅನುಪಸ್ಥಿತಿ ಹಾಗೂ ಪಕ್ಷದ ಹೀನಾಯ ಸೋಲಿನ ಹಿನ್ನೆಲೆಯಲ್ಲಿ ವರಿಷ್ಠರು ಕರ್ನಾಟಕದ ಬಗೆಗಿನ ನಿರ್ಧಾರ ಮುಂದೂಡಬಹುದು.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸಂಪುಟವನ್ನು ದೊಡ್ಡ ಪ್ರಮಾಣದಲ್ಲಿ ಪುನರ್ ರಚಿಸಿ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು ಕಳೆದ ಎರಡು ವಾರಗಳ ಹಿಂದೆಯೇ ದೆಹಲಿ ಪ್ರವಾಸ ದಿನಾಂಕ ನಿಗದಿ ಪಡಿಸಿದ್ದರು.

ಈ ಸಂದರ್ಭದಲ್ಲಿ ಐದು ದಿನ ದೆಹಲಿಯಲ್ಲೇ ಉಳಿದು, ವರಿಷ್ಠರನ್ನು ಭೇಟಿ ಮಾಡಿ ಪುನರ್ ರಚನೆಗೆ ಅನುಮತಿ ಪಡೆಯುವ ಯತ್ನದಲ್ಲಿದ್ದರು.

ಆದರೆ, ರಾಹುಲ್ ಅನುಪಸ್ಥಿತಿಯಲ್ಲಿ ಉಳಿದ ಯಾವುದೇ ನಾಯಕರು ಇಂತಹ ಪ್ರಮುಖ ನಿರ್ಧಾರಕ್ಕೆ ಹಸಿರು ನಿಶಾನೆ ತೋರುವುದಿಲ್ಲ ಎಂಬ ಕಾರಣಕ್ಕೆ ಶನಿವಾರ ತಡರಾತ್ರಿಯೇ ನಗರಕ್ಕೆ ಹಿಂತಿರುಗುತ್ತಿದ್ದಾರೆ. ಶನಿವಾರ ಮಧ್ಯಾಹ್ನದ ವೇಳೆಗೆ ದೆಹಲಿಗೆ ತೆರಳುವ ಮುಖ್ಯಮಂತ್ರಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡುವ ಸಾಧ್ಯತೆ ಇದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಇವರ ಭೇಟಿ ನಂತರ ಸಂಜೆ ಕಪಿಲ್ ಸಿಬಲ್ ಕಾರ್ಯಕ್ರಮದಲ್ಲಿ ಭಾಗವಹಿಸಿ ತಡರಾತ್ರಿ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಹಿಂತಿರುಗಲಿದ್ದಾರೆ.

ಪ್ರತ್ಯೇಕವಾಗಿ ದೆಹಲಿಗೆ ತೆರಳುತ್ತಿರುವ ಶಿವಕುಮಾರ್, ಹಿಂತಿರುಗುವ ದಿನವನ್ನು ನಿಗದಿ ಪಡಿಸಿಲ್ಲ. ಅವರ ದೆಹಲಿ ಭೇಟಿ ಸಂದರ್ಭದಲ್ಲಿ ರಾಹುಲ್ ಇಲ್ಲದಿದ್ದರೂ ತಮಗೆ ದಕ್ಕಬೇಕಾದ ಅಧಿಕಾರ ಪಡೆಯಲು ಕಸರತ್ತು ಮುಂದುವರೆಸಲಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಟೀಚರ್ : ನಿಮ್ಮ ಸ್ವಂತ ಊರು ಯಾವುದು?
ಗುಂಡ : ಸ್ವಂತ ಊರು ಇಟ್ಟುಕೊಳ್ಳುವಷ್ಟು ದೊಡ್ಡವರಲ್ಲ ಮೇಡಂ.
ಟೀಚರ್ : ನಿಮ್ಮಪ್ಪ ಏನ್ ಮಾಡ್ತಾರೆ?
ಗುಂಡ : ನಮ್ಮ ಅಮ್ಮ ಹೇಳಿದ ಕೆಲಸ ಮಾಡ್ತಾರೆ. ಅಮ್ಮ ರೀಲ್ಸ್ ಮಾಡ್ತಾರೆ, ಆಮೇಲೆ ಅಪ್ಪ ಅಪ್ಲೋಡ್ ಮಾಡ್ತಾರೆ!

ಮೈಸೂರು ಮಿತ್ರ
ಶನಿವಾರ, 15 ನವೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಮುಗುಳ್ನಗೆ ಮತ್ತು ಮೌನ ಇವೆರಡೂ ಅತ್ಯಂತ ಪ್ರಭಾವಿ ಸಾಧನಗಳು. ಮುಗುಳ್ನಗೆ ಸಮಸ್ಯೆಗಳನ್ನು ಬಗೆಹರಿಸಿದರೆ, ಮೌನವು ಸಾಕಷ್ಟು ಸಮಸ್ಯೆಗಳಿಂದ ನಮ್ಮನ್ನು ದೂರವಿರಿಸುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಂಪಿಗೆ ಹೋಗುವುದಕ್ಕಿಂತ ಕೊಂಪೆಯಲ್ಲಿರುವುದೇ ಲೇಸು.

ನಿಮ್ಮ ಪತ್ರಗಳು

ಹರಿಕಥೆ ದಾಸರು ರಾಜ್ಯೋತ್ಸವ ಪ್ರಶಸ್ತಿಗೆ ಅನರ್ಹರೇ?

ಮಾನ್ಯರೆ,

ಕರ್ನಾಟಕ ಸರ್ಕಾರ 2025ರ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವವರಿಗೆ ನೀಡಿರುವುದು ಸಂತಸದ ಸಂಗತಿ. ಆದರೆ, ಹರಿಕಥಾ ಕೀರ್ತನೆ ಒಂದು ಕಲೆಯಲ್ಲವೇ? ಶತಮಾನಗಳಿಂದ ಈ ಕ್ಷೇತ್ರದಲ್ಲಿ (ಹರಿಕಥಾ) ದುಡಿಯುತ್ತಿರುವ ಮಹನೀಯರಿಲ್ಲವೇ? ಅಥವಾ ಹರಿಕಥಾ ಕ್ಷೇತ್ರ ಅಳಿಸಿ ಹೋಯಿತೇ? ಎಂಬ ಸಂದೇಹ, ಬೇಸರ ನಾಡಿನ ಹರಿಕಥಾ ವಿದ್ವಾಂಸರಲ್ಲಿ ಮೂಡಿದೆ. ಅದರಲ್ಲಿ ನಾನು ಒಬ್ಬ. ಸರ್ಕಾರ ಶಾಸ್ತ್ರೀಯ ಸಂಗೀತ, ಜನಪದ ಸಂಗೀತ, ವಚನ ಗಾಯನ, ಗಮಕ ನೃತ್ಯ, ದಾಸರ ಪದಗಳು, ಸಾಹಿತ್ಯ, ಶಿಕ್ಷಣ, ಆರೋಗ್ಯ, ರಂಗಭೂಮಿ, ಪತ್ರಿಕಾ ವರದಿಗಾರರು ಇತ್ಯಾದಿ ಹತ್ತು ಹಲವು ಕ್ಷೇತ್ರದಲ್ಲಿ ಸಾಧಕರನ್ನು ಗುರುತಿಸಿ ಪ್ರತ್ಯೇಕವಾಗಿ ಪ್ರಶಸ್ತಿ ನೀಡಿ ಗೌರವಿಸಿದೆ.

ಆದರೆ ಈ ಎಲ್ಲಾ ಕಲೆಯನ್ನು ಅಂದರೆ ಶಾಸ್ತ್ರೀಯ ಸಂಗೀತ, ಗಮಕ, ಸಾಹಿತ್ಯ, ಲಘು ಸಂಗೀತ, ದಾಸರ ಕೀರ್ತನೆ, ಶರಣರ ವಚನ, ಸುಭಾಷಿತ ನವರಸಗಳನ್ನು ಒಗ್ಗೂಡಿಸಿಕೊಂಡು ಶ್ರೀಮದ್ರಾಮಾಯಣ, ಮಹಾಭಾರತ, ಭಾಗವತ, ಶರಣ–ದಾಸ–ಸಾಧು ಸಂತ–ಲೋಕ ಮಹಾತ್ಮರ ಪುಣ್ಯ ಚರಿತ್ರೆಯನ್ನು ಏಕಪಾತ್ರಾಭಿನಯದಂತೆ ಅಭಿನಯಿಸಿ ನಿರೂಪಿಸುತ್ತಾ ಸಂಸ್ಕೃತಿ–ಸಂಸ್ಕಾರ–ಧರ್ಮ–ನೀತಿ, ಭಕ್ತಿ, ಭಗವತ್ ದರ್ಶನದ ಮಾರ್ಗಗಳನ್ನು ಈ ಸಮಾಜಕ್ಕೆ (ಆಸ್ತಿಕ ಬಂಧುಗಳಿಗೆ) ತಮ್ಮ ಹರಿಕಥೆಯ ಮೂಲಕ ಪ್ರಸಾರ ಮಾಡುವ ಈ ಹರಿಕಥೆ ದಾಸರು ರಾಜ್ಯೋತ್ಸವ ಪ್ರಶಸ್ತಿಗೆ ಅನರ್ಹರೇ? ದಯಮಾಡಿ ಮುಂದಿನ ದಿನಗಳಲ್ಲಿಯಾದರೂ ಸರ್ಕಾರ ಹಾಗೂ ಸಂಬಂಧಿಸಿದ ಸಚಿವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯ್ಕೆ ಸಮಿತಿ ಯೋಚಿಸಿ ಹರಿಕಥಾ (ದಾಸರಿಗೂ) ಕೀರ್ತನ ಕಲಾ ವಿಭಾಗಕ್ಕೂ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಿ.

– ಡಾ. ವಿಜಯದಾಸ್, ಹರಿಕಥಾ ವಿದ್ವಾಂಸರು, ಮೈಸೂರು.

ಬಹು ಆಯಾಮದ ಪಠ್ಯ ಬೋಧನೆ ಅತ್ಯಗತ್ಯ

ಮಾನ್ಯರೆ,

ಮಂಡ್ಯದ ಗಾಂಧಿ ಭವನದಲ್ಲಿ ಶೈಕ್ಷಣಿಕ ಸಮ್ಮೇಳನ ಮತ್ತು ನೂತನ ಮಾದರಿ ಪ್ರಶ್ನೆಪತ್ರಿಕೆ ನೀಲನಕ್ಷೆ ಅನ್ವಯಿಕತೆ ಕಾರ್ಯಾಗಾರವನ್ನು ಉದ್ಘಾಟಿಸಿ, ಖ್ಯಾತ ವನ್ಯಜೀವಿ ಛಾಯಾಗ್ರಾಹಕ ಕೃಪಾಕರ ಅವರು, ಸಮಾಜ ಎಂದರೆ ಎಲ್ಲಾ ರೀತಿಯ ವಿಷಯಗಳನ್ನು ಒಳಗೊಂಡಿರುತ್ತದೆ. ಈ ನಿಟ್ಟಿನಲ್ಲಿ ಯೋಚಿಸಿದಾಗ ವಿದ್ಯಾರ್ಥಿಗಳಿಗೆ ಬಹು ಆಯಾಮದ ಪಠ್ಯ ಬೋಧನೆ ಇಂದು ತುಂಬಾ ಅತ್ಯಗತ್ಯವಾಗಿದೆ ಎಂದು ಹೇಳಿರುವುದು ಶ್ಲಾಘನೀಯ. ವಿದ್ಯಾರ್ಥಿಗಳಿಗೆ ಪಠ್ಯ ಬೋಧನೆಯ ಜೊತೆಗೆ ವೃತ್ತಿಪರತೆಯ ವಿಷಯದ ಬಗ್ಗೆ ಆಸಕ್ತಿ ಮೂಡುವಂತೆ ಮಾಡುವುದು ಶಿಕ್ಷಕರ ಕೆಲಸವಾಗಬೇಕು ಎಂದು ಹೇಳಿರುವುದು ಸ್ವಾಗತಾರ್ಹ.ಸಂವಾದ ಕಾರ್ಯಕ್ರಮದಲ್ಲಿ ಭಾಗವಸಿದ ಮತ್ತೊಬ್ಬ ಖ್ಯಾತ ವನ್ಯಜೀವಿ ಛಾಯಾಗ್ರಾಹಕ ಹಾಗೂ ಗ್ರೀನ್ ಆಸ್ಕರ್ ಪ್ರಶಸ್ತಿ ಪಡೆದ ಸೇನಾನಿ ಅವರು ಮಾತನಾಡಿ ಮನುಷ್ಯರು ಭೂಮಿ ನಮ್ಮದೇ ಎಂದರೆ ಸಮಸ್ಯೆ ಪರಿಹಾರವಾಗುವುದಿಲ್ಲ, ಭೂಮಂಡಲದಲ್ಲಿ ಮನುಷ್ಯನಿಗೆ ಇರುವಷ್ಟೇ ಪ್ರಾಮುಖ್ಯತೆ ಮರ,ಗಿಡ,ಬಳ್ಳಿ,ಕ್ರಿಮಿಕೀಟ ಹಾಗೂ ಪ್ರಾಣಿಗಳಿಗೂ ಇದೆ ಎಂದು ಮನುಷ್ಯ ಭಾವಿಸಿದರೆ ಅವನು ಪರಿಸರಕ್ಕೆ ಕೊಡುವ ದೊಡ್ಡ ಕೊಡುಗೆಯಾಗುತ್ತದೆ. 80 ಲಕ್ಷ ಜೀವಿಗಳಲ್ಲಿ ಮನುಷ್ಯನು ತಾನು ಸಹ ಪರಿಸರದ ಒಂದು ಭಾಗ ಎಂದು ಅರ್ಥ ಮಾಡಿಕೊಂಡು, ನೋಡುವ ಕಣ್ಣು ಹಾಗೂ ಕಾಣುವ ಕಣ್ಣು ಒಂದೇ ಆಗಿರಬೇಕು ಎಂದು ಹೇಳಿರುವುದು ಮೆಚ್ಚುವಂತದ್ದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ತಾತ್ಸಾರವೇಕೆ!

ಮಾನ್ಯರೆ,

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಸಾವಿರಾರು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದರಲ್ಲಿ ನಮ್ಮ ಸರ್ಕಾರವು ತಾತ್ಸಾರ ಮನೋಭಾವನೆಯನ್ನು ತೋರುತ್ತಿರುವುದು ವಿಷಾದನೀಯ. ಎರಡು ಮೂರು ವರ್ಷಗಳಿಂದ ಯಾವುದೇ ನೇಮಕಾತಿಯ ಪ್ರಕ್ರಿಯೆಯನ್ನು ಆರಂಭಿಸದೆ ಅಭ್ಯರ್ಥಿಗಳಲ್ಲಿ ಆತಂಕವನ್ನು ಸೃಷ್ಟಿಸಿರುವುದು ಗಂಭೀರವಾಯವಾಗಿದೆ. ಮಾಧ್ಯಮಗಳ ಮುಂದೆ ಸಚಿವರುಗಳು ಸಾಕಷ್ಟು ಹುದ್ದೆಗಳು ಖಾಲಿ ಇವೆ ಅವುಗಳನ್ನು ಭರ್ತಿ ಮಾಡಲು ಆದೇಶ ಮಾಡಿದ್ದೇನೆ ಎಂಬ ಭರವಸೆಗಳನ್ನು ಕೊಡುವುದರಲ್ಲೆ ಸಮಯ ಕಳೆದು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದರಲ್ಲಿ ಮರೆತಿದ್ದಾರೆ. ನೇಮಕಾತಿಗಳು ನಿಧಾನವಾದಷ್ಟು ರಾಜ್ಯದ ಲಕ್ಷಾಂತರ ಅಭ್ಯರ್ಥಿಗಳ ಬದುಕಿನಲ್ಲಿ ಕತ್ತಲು ಕವಿಯಲು ಪ್ರಾರಂಭವಾಗುತ್ತದೆ. ಇದನ್ನು ಸೂಕ್ಷ್ಮವಾಗಿ ಪರಿಗಣಿಸಿ ತಕ್ಷಣ ರಾಜ್ಯ ಸರ್ಕಾರವು ನೇಮಕಾತಿಗಳಿಗೆ ಅತಿ ಶೀಘ್ರದಲ್ಲೇ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಮುಂದಾಗಬೇಕಾಗಿದೆ. ಹಾಗೇ ವರ್ಷಗಳಿಂದ ಪ್ರಾಮಾಣಿಕವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಧ್ಯಯನ ಮಾಡುತ್ತಿರುವ ಅಭ್ಯರ್ಥಿಗಳಿಗೆ ಯಾವುದೇ ಹಂತದಲ್ಲೂ ಮೋಸವಾಗದ ರೀತಿಯಲ್ಲಿ ನೇಮಕಾತಿಯನ್ನು ಸರ್ಕಾರವೂ ಪಾರದರ್ಶಕವಾಗಿ ನಡೆಸಬೇಕಾಗಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ

ಕನ್ನಡ ಶಾಲೆಗಳ ಉಳಿಸುವ ಕೆಲಸವಾಗಲಿ


ಮಾನ್ಯರೆ,

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರು ಇತ್ತೀಚೆಗೆ ನಡೆದ ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ರಾಜ್ಯದ ಆರು ಸಾವಿರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತಲಾ ಒಂದರಂತೆ ಆರು ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು (ಕೆಪಿಎಸ್), ತೆರೆಯುವ ಮೂಲಕ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡಲು ತೀರ್ಮಾನಿಸಲಾಗಿದೆ ಎಂದು ಹೇಳಿದ್ದಾರೆ.

ಮಾನ್ಯ ಶಿಕ್ಷಣ ಸಚಿವರೇ, ಕಳೆದ ವಿಧಾನಸಭಾ ಅಧಿವೇಶನದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಶಾಲೆಗೆ ಸೇರುವ ಮಕ್ಕಳ ಸಂಖ್ಯೆ ಸುಮಾರು ಐದು ಲಕ್ಷದಷ್ಟು ಕಡಿಮೆಯಾಗಿದೆ. ಅಲ್ಲದೇ, ರಾಜ್ಯದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ಐದು ಸಾವಿರ ಕನ್ನಡ ಸರ್ಕಾರಿ ಶಾಲೆಗಳನ್ನು ಮುಚ್ಚುವ ಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿರುವುದು ನಿಮಗೆ ನೆನಪಿರಬಹುದು ಎಂದುಕೊಂಡಿದ್ದೇನೆ. ಈಗಿರುವ ಸರ್ಕಾರಿ ಶಾಲೆಗೆ ಪೋಷಕರು ತಮ್ಮ ಮಕ್ಕಳನ್ನು ಸೇರಿಸದೇ ಇರಲು ಹಲವಾರು ಕಾರಣಗಳಿವೆ. ಮುಖ್ಯವಾಗಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಮೂಲಭೂತ ಸೌಕರ್ಯ ಇಲ್ಲದೇ ಇರುವುದು (ಕೆಲವು ಸರ್ಕಾರಿ ಹೆಣ್ಣು ಮಕ್ಕಳ ಶಾಲೆಯಲ್ಲೂ ಶೌಚಾಲಯ ಇಲ್ಲ), ಗುಣಮಟ್ಟದ ಶಿಕ್ಷಣದ ಕೊರತೆ ಹಾಗೂ ಶಿಕ್ಷಕರ ಕೊರತೆ, ಕೆಲವು ಸರ್ಕಾರಿ ಶಾಲೆಗಳಂತೂ, ಸುಣ್ಣ– ಬಣ್ಣ ಕಂಡು ಬಹಳಷ್ಟು ವರ್ಷಗಳೇ ಕಳೆದು ಪಾಳುಬಿದ್ದ ಮನೆಯಂತಾಗಿರುವುದು. ಮಾನ್ಯ ಶಿಕ್ಷಣ ಸಚಿವರೇ ಮೊದಲು ಮುಚ್ಚಿ ಹೋಗುತ್ತಿರುವ ನಮ್ಮ ಕನ್ನಡ ಶಾಲೆಗಳನ್ನು ಉಳಿಸುವ ಕೆಲಸವಾಗಲಿ. ಮೊದಲು ಈ ಸಮಸ್ಯೆಗಳನ್ನು ಬಗೆಹರಿಸಿ ನಂತರ ನೀವು ಹೊಸದಾಗಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯಲು ಚಿಂತನೆ ನಡೆಸಿ ಸ್ವಾಮಿ.


–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಅದಾಗಲೇ ಮೈಸೂರು ಗ್ರೇಟರ್ ಆಗಿದೆ!



ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್

“ 'ಗ್ರೇಟರ್ ಮೈಸೂರು' ಬಯಸುವವರು ಬಿಡುವು ಸಿಕ್ಕಾಗ ನಗರವನ್ನು ವೀಕ್ಷಿಸಿ ಬನ್ನಿ, ಹಾಗೆಯೇ ಮೈಸೂರು ಏಳು ಅರಮನೆ ನಗರ (Seven Palace City) ಎನಿಸಿಕೊಳ್ಳಲು ಕಾರಣವಾಗಿದ್ದ ಜಗನ್ಮೋಹನ ಪ್ಯಾಲೇಸ್, ಜಯಲಕ್ಷ್ಮಿ ವಿಲಾಸ ಅರಮನೆ, ಅಂಬಾವಿಲಾಸ ಅರಮನೆ, ಚಿತ್ತರಂಜನ್ ಪ್ಯಾಲೇಸ್, ಚೆಲುವಾಂಬವಿಲಾಸ ಪ್ಯಾಲೇಸ್, ಲಲಿತಮಹಲ್ ಪ್ಯಾಲೇಸ್, ರಾಜೇಂದ್ರವಿಲಾಸ ಪ್ಯಾಲೇಸ್‌ಗಳನ್ನು ಹಾಗೂ ಶತಮಾನಗಳನ್ನು ಕಂಡಿರುವ 200ಕ್ಕೂ ಹೆಚ್ಚು ಪಾರಂಪರಿಕ ಕಟ್ಟಡಗಳನ್ನು ನೋಡಿ ಆನಂದಿಸಿ, ಏಳು ಅರಮನೆಗಳಲ್ಲಿ, ಆರು ಅರಮನೆಗಳು ನಾಲ್ವಡಿ ಕೃಷ್ಣರಾಜರ ಕಾಲದಲ್ಲಿ ನಿರ್ಮಾಣವಾಗಿದ್ದು. ಇವುಗಳನ್ನು ಹೊರತುಪಡಿಸಿ ಸುಂದರ ಮೈಸೂರು ನಗರವನ್ನು ಕಲ್ಪಿಸಿಕೊಳ್ಳಲು ಹೇಗೆ ಸಾಧ್ಯ?. ಇವುಗಳಿಂದಾಗಿ ಯಾವಾಗಲೂ 'ಮೈಸೂರು ಗ್ರೇಟರ್' ಆಗಿಯೇ ಉಳಿದಿರುತ್ತದೆ. ಬನ್ನಿ ನಮ್ಮ ಅಚ್ಚುಮೆಚ್ಚಿನ, ಸದಾ ಸ್ಮರಣೀಯರೂ ಆದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮಹಾರಾಜರ ಮನದ ಮಾತು ಕೇಳೋಣ...!!!



ಮಿರ್ಲೆ ಚಂದ್ರಶೇಖರ
ಹವ್ಯಾಸ ಬರಹಗಾರರು
ಮೊ: 9916129654

ಮೈಸೂರಿನ ನನ್ನ ಎಲ್ಲಾ ಆತ್ಮೀಯ ಪ್ರಜೆಗಳೇ...,

ನಾನು ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್, ಮೊದಲಿಗೆ ನಿಮಗೆಲ್ಲಾ ಧನ್ಯವಾದಗಳನ್ನು ಹೇಳಬಯಸುವೆ. ನಾನು ಮರಣಿಸಿ ಎಂಬತ್ತೈದು ವರ್ಷಗಳಾಗುತ್ತಾ ಬಂದಿದ್ದರೂ ನನ್ನನ್ನು ಯಾರೂ ಮರೆತಿರುವುದಿಲ್ಲ ಎಂಬ ಕಾರಣಕ್ಕಾಗಿ. 4 ಜೂನ್ 1884ರಲ್ಲಿ ಜನಿಸಿ 1902ರಲ್ಲಿ ಸಂಸ್ಥಾನದ ಅಧಿಕಾರ ಹಿಡಿದು 1940ರವರೆಗೂ ಕೈಗೊಂಡ ಅಭಿವೃದ್ಧಿ ಕಾರ್ಯಗಳು ದೈಹಿಕವಾಗಿ ನಾನಿಲ್ಲದಿದ್ದರೂ ನಿಮ್ಮೊಂದಿಗೆ ಇರುವುದರಿಂದ ಇಂದಿಗೂ ನೆನಪಿಸಿಕೊಳ್ಳುತ್ತಿದ್ದೀರಿ. ನಾನು ಅಂದು ಕೈಗೊಂಡ ಯೋಜನೆಗಳೆಲ್ಲವೂ ಜನಪರವಾಗಿದ್ದವು, ನೀರಾವರಿ, ಕೈಗಾರಿಕೆ, ಶಿಕ್ಷಣ, ಸಾಹಿತ್ಯ, ಆಡಳಿತ ಸುಧಾರಣೆ, ಆರೋಗ್ಯ, ಕುಡಿಯುವ ನೀರು, ಕಟ್ಟಡಗಳು ಮುಂತಾದ ಕ್ಷೇತ್ರಗಳಲ್ಲಿ ಮಾಡಿದ ಅಭಿವೃದ್ಧಿ ಕೆಲಸಗಳನ್ನು ಇಂದಿಗೂ ನೀವು ಕಾಣುತ್ತಿದ್ದೀರಿ ಹಾಗೂ ಅವುಗಳ ಫಲಾನುಭವಿಗಳು ಹೌದು. ಆ ಮೂಲಕ ನಿಮ್ಮ ನೆನಪಿನಲ್ಲಿ ಇನ್ನೂ ಇದ್ದೇನೆ. ನನ್ನ ಆಡಳಿತಾವಧಿಯಲ್ಲಿ ಮಾಡಿದ ಸುಧಾರಣೆಗಳು ಮತ್ತು ಸಾಧನೆಗಳಿಂದಾಗಿ ರಾಜರ್ಷಿ ಹಾಗೂ ಸಂತರಾಜನೆಂದು ಜನಪ್ರಿಯನಾಗಿ ಪ್ರಜೆಗಳಿಗೆ ಇಷ್ಟವಾಗುತ್ತಿದ್ದೆ. ಉದಾತ್ತ ಮತ್ತು ಪರಿಣಾಮಕಾರಿ ರಾಜತ್ವವನ್ನು ಮೆಚ್ಚಿದ ಅಂದಿನ ಬ್ರಿಟನ್ ದೇಶದ ನ್ಯಾಯಾಧೀಶ, ಲೇಬರ್ ರಾಜಕಾರಣಿ ಮತ್ತು ಗ್ರೇಟ್ ಬ್ರಿಟನ್‌ನ ಲಾರ್ಡ್ ಹೈ ಚಾನ್ಸಲರ್ ಆಗಿದ್ದ ಜಾನ್‌ಸ್ಯಾಂಕಿಯವರು 1930ರಲ್ಲಿ ಲಂಡನ್‌ನಲ್ಲಿ ನಡೆದ ಮೊದಲ ದುಂಡುಮೇಜಿನ ಸಮ್ಮೇಳನದಲ್ಲಿ ಮೈಸೂರು ವಿಶ್ವದ ಅತ್ಯುತ್ತಮ ಆಡಳಿತ ರಾಜ್ಯ ಎಂದು ಘೋಷಿಸಿದರು. ಆಧುನಿಕ ಮೈಸೂರಿನ ಪಿತಾಮಹ, ಮೈಸೂರಿನ ಸುವರ್ಣಯುಗ ಎಂದೆಲ್ಲಾ ಕರೆಯಲಾಗುತ್ತಿತ್ತು.

ಮೈಸೂರು ಸಂಸ್ಥಾನದ ಮೈಸೂರು ಪಟ್ಟಣಕ್ಕೆ ಇಂದು ಏನಾಗಿದೆ ಎಂಬುದೇ ನನಗೆ ಚಿಂತೆಯಾಗಿದೆ. ಈ ಓಲೆಯನ್ನು ಆ ಬಗ್ಗೆಯೇ ಬರೆದಿರುವುದು. ಆಗಿನ ಅಭಿವೃದ್ಧಿ ಕಾರ್ಯಗಳ ಮಾತ್ರದಿಂದಾಗಿಯೇ ಇಂದಿಗೂ ಮೈಸೂರು ನಗರವು ಸಾಂಸ್ಕೃತಿಕ ನಗರಿಯಾಗಿ ಉಳಿದಿರುವುದು ನೆಮ್ಮದಿ ತಂದಿದೆ. 1940ರ ನಂತರ ಇಲ್ಲಿವರೆಗೆ ಜನರ ಮನಸ್ಸಿನಲ್ಲಿ ಉಳಿಯುವಂತಹ ಯಾವ ಅಭಿವೃದ್ಧಿ ಕಾರ್ಯಗಳಾಗಿವೆ ಹೇಳುವಿರಾ. ಯಾವೊಂದು ಪೂರಕ ವಾತಾವರಣ ಇಲ್ಲದೆ, ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿದ್ದ ಕಾಲಘಟ್ಟದಲ್ಲಿ, ಈಗಿನಂತೆ ತೆರಿಗೆ ವಸೂಲಿ ಇಲ್ಲದ ಕಾರಣ ಖಜಾನೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರೂ ಮಹಾರಾಣಿಯರ ಒಡವೆಗಳನ್ನು ಮಾರಾಟ ಮಾಡಿ, ನಾವು ಮಾಡಿಸಿದಷ್ಟು ಪ್ರಮಾಣದ ಕೆಲಸ ಗಳನ್ನು ಪ್ರಜಾಪ್ರಭುತ್ವದ ಆಡಳಿತದಲ್ಲಿ ಆಗಿಲ್ಲದಿರುವುದನ್ನು ಗಮನಿಸುತ್ತಾ ಬಂದಿದ್ದೇನೆ.

ನಮ್ಮ ಅಭಿವೃದ್ಧಿಯ ಕೆಲಸಗಳು ಎಂದಿಗೂ ಗ್ರೇಟರ್ ಮೈಸೂರು ಕಾನ್ಸೆಪ್ಟ್‌ನಲ್ಲಿ ಮಾಡಿದ್ದಲ್ಲ. ಮಾಡಿದ್ದೆಲ್ಲವೂ ವಿಶ್ವದಲ್ಲೇ 'ಮೈಸೂರು ಗ್ರೇಟರ್' ಎನಿಸಿಕೊಂಡ ಮಾದರಿಯಲ್ಲಿ ಮಾಡಿದ್ದು. ಈಗ ಏನಾಗಿದೆ, ಸಂಸ್ಥಾನದ ವ್ಯಾಪ್ತಿಯ ಕೆಲಸಗಳಿರಲಿ ಮೈಸೂರು ನಗರದಲ್ಲಿ ಹೇಳಿಕೊಳ್ಳುವಂತಹ ಕೆಲಸಗಳು ಯಾವ ಸರ್ಕಾರದಲ್ಲೂ ಆಗಲಿಲ್ಲವಲ್ಲ. ತೆಗೆದುಕೊಂಡ ಕೆಲಸಗಳಾದರೂ ಸಮರ್ಪಕವಾಗಿ ಮುಕ್ತಿ ಕಂಡಿವೆಯೇ, ಅದೂ ಆಗಲಿಲ್ಲ. ಅರಮನೆಯ ಸುತ್ತ ಪಾದಚಾರಿ ಮಾರ್ಗಕ್ಕೆ ಹಾಕಿದ ಕಲ್ಲಿನ ರೈಲ್ಸ್ ಕಂಬಗಳ ಕೈಕಾಲುಗಳು ಮುರಿದು ಬಿದ್ದಿವೆ, ನೆಲಕ್ಕೆ ಹಾಸಿದ ಟೈಲ್ಸ್‌ಗಳು ಕಿತ್ತು ಬಂದಿವೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮತ್ತು ದೇವರಾಜ ಮಾರುಕಟ್ಟೆ ಕಟ್ಟಡಗಳು ಕುಸಿದು, ಕೆಲವರ ಬಲಿ ಪಡೆದು ಬಹಳ ವರ್ಷಗಳೇ ಆದರೂ ಪುನರುಜ್ಜೀವನ ಅಥವಾ ಪುನರ್‌ನಿರ್ಮಾಣ ಆಗಲೇ ಇಲ್ಲ. ನಗರದ ಸುತ್ತ ಹೊಸಹೊಸ ಖಾಸಗಿ ಬಡಾವಣೆಗಳು ನಿರ್ಮಾಣವಾಗುತ್ತಿವೆ. ಆದರೆ ನಗರವು ಸಮಗ್ರ ಮತ್ತು ಯೋಜನಾಬದ್ಧವಾಗಿ ಬೆಳೆದಂತೆ ಕಾಣುವುದಿಲ್ಲ. ಹೊಸ ಬಡಾವಣೆಗಳಿಗೆ ಪೂರ್ಣಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಕೊಡಲಾಗುತ್ತಿಲ್ಲ. ನನ್ನ ಕಾಲದಲ್ಲಿ ಯೋಜನೆಗಳಲ್ಲಿ ಭ್ರಷ್ಟಾಚಾರದ ಭೂತಗಳು ಬರದಂತೆ ತಡೆಯಲಾಗುತ್ತಿತ್ತು. ನಡೆಯುವ ಎಲ್ಲಾ ಕಾಮಗಾರಿಗಳು ಗುಣಾತ್ಮಕವಾಗಿದ್ದವು. ಈಗ ಕೈಗೊಳ್ಳುವ ಎಲ್ಲಾ ಯೋಜನೆಗಳಲ್ಲೂ ಭ್ರಷ್ಟಾಚಾರದ ಭೂತಗಳು ಕಾಡುತ್ತವೆ. 40 ಕಿಮೀ ಗಿಂತಲೂ ಹೆಚ್ಚು ಉದ್ದ ಇರುವ ರಿಂಗ್ ರೋಡ್ ಬದಿಗಳು ನಗರದ ತ್ಯಾಜ್ಯ ಸಂಗ್ರಹಿಸುವ ತಾಣವಾಗಿವೆ. ಸಮರ್ಪಕ ನಿರ್ವಹಣೆ ಇಲ್ಲದೆ ಅತೀ ಕೆಟ್ಟ ಸ್ಥಿತಿಯಲ್ಲಿದೆ. ಮೈಸೂರು–ಬನ್ನೂರು ರಸ್ತೆಯಲ್ಲಿ ಗೋಪಾಲಗೌಡ ಆಸ್ಪತ್ರೆ ವೃತ್ತದವರೆಗೆ ರಸ್ತೆ ಅಗಲೀಕರಣವಾಗದೆ ವಾಹನ ಸವಾರರಿಗೆ ಬಹಳವೇ ತೊಂದರೆ ಆಗುತ್ತಿದೆ. ಟೆರಿಷಿಯನ್ ಕಾಲೇಜು ವೃತ್ತದಿಂದ ಪ್ರಾರಂಭವಾಗುವ ರಾಜ್‌ಕುಮಾರ್ ರಸ್ತೆಯ ಅವ್ಯವಸ್ಥೆಯಂತೂ ಹೇಳತೀರದು. ಬಹುತೇಕ ರಸ್ತೆಗೆ ಪಾದಚಾರಿ ಮಾರ್ಗಗಳಿಲ್ಲ, ವಾಹನಗಳ ದಟ್ಟಣೆಗೆ ತಕ್ಕಂತೆ ರಸ್ತೆ ಅಗಲವಿಲ್ಲ, ಮಧ್ಯ ಇನ್ನೂರು ಮೀಟರಿನಷ್ಟು ಭೂಸ್ವಾಧೀನ ಆಗದೆ ನೆನೆಗುದಿಗೆ ಬಿದ್ದು ಇಪ್ಪತ್ತು ವರ್ಷಗಳೇ ಕಳೆದಿದೆ, ಕುಸಿದ ಬೆಟ್ಟದ ನಂದಿ ರಸ್ತೆ ಹಲವು ವರ್ಷವಾದರೂ ಆಗಿಲ್ಲ. ಕುಕ್ಕರಹಳ್ಳಿ ಕೆರೆ ಅತೀವ ಮಲೀನವಾಗುತ್ತಿದೆ. ಕೆ.ಆರ್.ಆಸ್ಪತ್ರೆ ಪರಿವೀಕ್ಷಣೆಗೆ ಬಂದವರು ತರಾಟೆಗೆ ತೆಗೆದುಕೊಂಡರೂ ಅದೇ ಕೊಳಕು ತಾಂಡವವಾಡುತ್ತಿದೆ, ಬಹಳಷ್ಟಿವೆ ಬಿಡಿ ಸಾಕಿಷ್ಟು, ಇವುಗಳನ್ನಾದರೂ ಸರಿಪಡಿಸಿ.

ಕೆಲಸಗಳು ಆಗೇ ಇಲ್ಲ ಎನ್ನಲಾರೆ. ಆಗಿದ್ದೆಲ್ಲವೂ ನೂರುಕಾಲ ಉಳಿಯಬೇಕಲ್ಲವೇ. ಬಡಾವಣೆಗಳನ್ನು ನಿರ್ಮಿಸಿ ಜನರಿಗೆ ನಿವೇಶನಗಳನ್ನು ಕೊಡುವುದು ಹಾಗೂ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಮಾತ್ರ ಒತ್ತು ಕೊಟ್ಟರೆ ಮೈಸೂರು ಬೆಳೆಯಿತೆಂದು ಪರಿಗಣಿಸಲು ಆಗುತ್ತದೆಯೇ. ಆಗಿನ್ನೂ ತಂತ್ರಜ್ಞಾನ ಬೆಳೆಯಲಾರಂಭಿಸಿತ್ತು, ಸೀಮಿತ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಮಾಡಿದ ಕೆಲವು ಕೆಲಸಗಳಲ್ಲಿ ಕೆಲವನ್ನು ದಾಖಲಿಸುತ್ತೇನೆ.

ಶಿವನಸಮುದ್ರ ಜಲವಿದ್ಯುತ್ ಯೋಜನೆ, ಮಿಂಟೋ ಕಣ್ಣಿನ ಆಸ್ಪತ್ರೆ, ಬೆಂಗಳೂರಿಗೆ ಬೀದಿ ದೀಪಗಳನ್ನು ಅಳವಡಿಸಿದ್ದು, ಕರ್ನಾಟಕದ ಮೊದಲ ಅಣೆಕಟ್ಟೆ ವಾಣಿವಿಲಾಸ ಸಾಗರ ಅಣೆಕಟ್ಟೆ, ಮೈಸೂರು ವಿಧಾನ ಪರಿಷತ್, ಭಾರತೀಯ ವಿಜ್ಞಾನ ಸಂಸ್ಥೆ, ಮೈಸೂರು ಸ್ಕೌಟ್ಸ್, ಮೈಸೂರು ಕೃಷಿ ವಸತಿ ಶಾಲೆ, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರು ಮುದ್ರಣ, ಮೈಸೂರಿನಲ್ಲಿ ಯುವರಾಜ ಕಾಲೇಜು, ಮೈಸೂರು ವಾಣಿಜ್ಯ ಮಂಡಳಿ, ಶ್ರೀಗಂಧದ ಎಣ್ಣೆ ಕಾರ್ಖಾನೆ, ರೈಲ್ವೆ ಮಾರ್ಗ, ಮೈಸೂರಿನಲ್ಲಿ ಆರು ಅರಮನೆಗಳು, ಸರ್ಕಾರಿ ವಿಜ್ಞಾನ ಕಾಲೇಜು, ಭದ್ರಾವತಿಯಲ್ಲಿ ಕಬ್ಬಿಣ ಕಾರ್ಖಾನೆ, ಮಹಿಳೆಯರಿಗೆ ಮತದಾನದ ಹಕ್ಕು ಕೊಟ್ಟಿದ್ದು, ಕೃಷ್ಣರಾಜಸಾಗರ ಅಣೆಕಟ್ಟೆ, ಮೈಸೂರು ವೈದ್ಯಕೀಯ ಕಾಲೇಜು, ಬೆಂಗಳೂರಿನಲ್ಲಿ ನಿಮಾನ್ಸ್, ಮೈಸೂರಿನ ಕೆ.ಆರ್.ಆಸ್ಪತ್ರೆ, ಬೆಂಗಳೂರಿನ ಕೆ.ಆರ್.ಮಾರುಕಟ್ಟೆ, ಮಾರಕೋನಹಳ್ಳಿ ಜಲಾಶಯ, ಸಂತ ಫಿಲೋಮಿನಾ ಚರ್ಚ್, ಬೆಂಗಳೂರಿನ ಟೌನ್ ಹಾಲ್, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ, ಭದ್ರಾವತಿಯಲ್ಲಿ ಪೇಪರ್ ಮಿಲ್, ಮೈಸೂರಿನ ಕೆ.ಆರ್.ಮಿಲ್ಸ್, ವಾಣಿವಿಲಾಸ ಆಸ್ಪತ್ರೆ, ರಾಮನ್ ಸಂಶೋದನಾ ಕೇಂದ್ರ, ಮೈಸೂರು ಲ್ಯಾಂಪ್ಸ್, ರಾಸಾಯನಿಕ ಮತ್ತು ರಸಗೊಬ್ಬರ ಕಾರ್ಖಾನೆ, ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ ಮತ್ತು ಬೆಂಗಳೂರಿನಲ್ಲಿ ಮಹಾರಾಣಿ ಮಹಿಳಾ ಕಾಲೇಜು, ಇನ್ನೂರಕ್ಕೂ ಹೆಚ್ಚು ಪಾರಂಪರಿಕ ಕಟ್ಟಡಗಳು, ಉದ್ಯಾನವನಗಳು, ಸಣ್ಣ ಅಣೆಕಟ್ಟೆಗಳು ಹಾಗೂ ಇತರೆ ಹತ್ತು–ಹಲವು ಅಭಿವೃದ್ಧಿ ಕೆಲಸಗಳು.

ಮೈಸೂರು ನಗರವನ್ನು ನಿವೃತ್ತರ ಸ್ವರ್ಗ ಎಂದು ಕರೆಯಲ್ಪಡುತ್ತಿದೆ. ರಾಜ್ಯವಲ್ಲದೆ ಅನ್ಯ ರಾಜ್ಯದವರು ಇಲ್ಲಿನ ಸೌಂದರ್ಯ ಹಾಗೂ ವಾತಾವರಣಕ್ಕೆ ಮಾರುಹೋಗಿ ಇಲ್ಲಿ ನೆಲೆಸಿರುವುದಲ್ಲದೆ, ತಮ್ಮವರನ್ನು ಕರೆಸಿಕೊಳ್ಳುತ್ತಿದ್ದಾರೆ. ಈಗಾಗಲೇ ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿದೆ, ಮತ್ತಷ್ಟು ಏರಿಕೆಯಾದರೆ ಶುದ್ದಗಾಳಿಯ ಕೊರತೆಯಿಂದ ಆರೋಗ್ಯದ ಮೇಲೆ ಪರಿಣಾಮ ಬೀರುವುದು. ದಸರಾ ಸಮಯದಲ್ಲಿ ಮಾತ್ರ ತರಾತುರಿಯಲ್ಲಿ ಮಾಡುವ ಕೆಲಸಗಳು ಮುಂದಿನ ದಸರಾದವರೆಗೂ ಉಳಿಯುತ್ತಿಲ್ಲ, ಇದನ್ನು ಇಲ್ಲಿಂದಲೇ ನೋಡಿ ನೊಂದುಕೊಳ್ಳುವುದು ಪ್ರತೀ ವರ್ಷವೂ ತಪ್ಪಿದ್ದಲ್ಲ. ಚುನಾಯಿತ ಜನಪ್ರತಿನಿಧಿಗಳು ಇಲ್ಲದಿದ್ದಾಗ ನಡೆಯುತ್ತಿದ್ದ ಗುಣಾತ್ಮಕ ಕೆಲಸಗಳು ಜನರಿಂದ ಆಯ್ಕೆ ಆದ ಪ್ರತಿನಿಧಿಗಳು ಅಧಿಕಾರವನ್ನು ಹಿಡಿದ ನಂತರ ಇಂತಹ ಕೆಲಸಗಳ ಕೊರತೆ ಎದ್ದು ಕಾಣುತ್ತಿದೆ. ಸುದ್ದಿಮಾಧ್ಯಮಗಳಲ್ಲಿ ಕಾಮಗಾರಿಗಳಲ್ಲಿ ಕಮಿಷನ್ ತೆಗೆದುಕೊಳ್ಳುವುದು ಹೆಚ್ಚಾಗಿದೆ ಎಂಬ ಸುದ್ದಿಯನ್ನು ನೋಡಿದ್ದೇನೆ, ನಮ್ಮ ಆಡಳಿತದಲ್ಲಿ ಇದು ಏನೆಂದು ನನಗಾಗಲೀ, ನಮ್ಮ ಅಧಿಕಾರಿಗಳಿಗಾಗಲೀ ತಿಳಿದಿರಲಿಲ್ಲ.

ಪ್ರೀತಿಯ ಪ್ರಜೆಗಳೆ... ಇಷ್ಟೆಲ್ಲಾ ಪೀಠಿಕೆಗೆ ಮುಖ್ಯ ಕಾರಣ, ಮೈಸೂರನ್ನು ಗ್ರೇಟರ್ ಮೈಸೂರು ಮಾಡುತ್ತಿರುವುದಾಗಿ ತಿಳಿಯಿತು. ವಿಶ್ವದಲ್ಲಿ ನಮ್ಮ ನಗರವನ್ನು 'ಮೈಸೂರು ಗ್ರೇಟರ್' ಎಂದು ಈಗಾಗಲೇ ಗುರುತಿಸಿ ಆಗಿದೆ. ಗ್ರೇಟರ್ ಮೈಸೂರು ಮಾಡಿ ಮೈಸೂರಿನ ಅಂದವನ್ನು ಕೆಡಿಸುವುದು ಬೇಡ. ಬಡಾವಣೆಗಳನ್ನು ವ್ಯವಸ್ಥಿತವಾಗಿ ನಿರ್ಮಿಸಿ ಅವುಗಳನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿ, ಅಗಲವಾಗಿ ಹಾಗೂ ವೈಜ್ಞಾನಿಕವಾಗಿ ನನ್ನ ಕಾಲದಲ್ಲೇ ನಿರ್ಮಾಣವಾಗಿದ್ದ ರಸ್ತೆಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಿದರೆ ಸಾಕು. ಕರ್ನಾಟಕದಲ್ಲಿ ಬುದ್ಧಿವಂತ ಇಂಜಿನಿಯರ್‌ಗಳಿಗೆ ಕೊರತೆ ಇಲ್ಲ, ಅವರನ್ನು ಹಾಗೂ ನಗರ ಯೋಜನಾ ಇಂಜಿನಿಯರ್‌ಗಳ ಜ್ಞಾನವನ್ನು ಬಳಸಿಕೊಂಡು ಉತ್ತಮವಾದ ಯೋಜನೆ ರೂಪಿಸಿ ಮೈಸೂರನ್ನು ಕಟ್ಟಿ. ಫ್ಲೈಓವರ್, ಮೆಟ್ರೋ, ಅಂಡರ್‌ಪಾಸ್ ಮುಂತಾದ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳುವಾಗ ರಾಜಕೀಯ ನಾಯಕರ ಅಭಿಪ್ರಾಯಕ್ಕಿಂತ ತಜ್ಞರು ಹಾಗೂ ಸಾರ್ವಜನಿಕರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಳ್ಳಿ, ಗ್ರೇಟರ್ ಮೈಸೂರು ಮಾಡಿ ಭೂಮಿ ಬೆಲೆಯನ್ನು ಚಿನ್ನದ ಬೆಲೆಗೇರಿಸಿ ಯಾರಿಗೋ ಅನುಕೂಲ ಮಾಡಿಕೊಟ್ಟು, ಮಧ್ಯಮ ವರ್ಗದ ಮೈಸೂರಿನ ನನ್ನ ಪ್ರಜೆಗಳು ಸೂರು ಕಾಣದೆ ಉಸಿರು ಬಿಡುವಂತಾಗದಿರಲಿ, ಭವಿಷ್ಯದ ಮೈಸೂರಿನ ಅಂದ ಕೆಡಿಸುವುದನ್ನು ನಾನು ಎಂದಿಗೂ ಒಪ್ಪುವುದಿಲ್ಲ.

ಮೈಸೂರು ನಗರದ ನಿವಾಸಿಗಳೇ ಬಿಡುವು ಸಿಕ್ಕಾಗ ನಗರವನ್ನು ವೀಕ್ಷಿಸಿ ಬನ್ನಿ. ಹಾಗೆಯೇ ಮೈಸೂರು ಏಳು ಅರಮನೆ ನಗರ (Seven Palace City) ಎನಿಸಿಕೊಳ್ಳಲು ಕಾರಣವಾಗಿದ್ದ ಜಗನ್‌ಮೋಹನ್ ಪ್ಯಾಲೇಸ್(1861), ಜಯಲಕ್ಷ್ಮಿ ವಿಲಾಸ ಅರಮನೆ(1905), ಅಂಬಾವಿಲಾಸ ಅರಮನೆ(1912), ಚಿತ್ತರಂಜನ್ ಪ್ಯಾಲೇಸ್(1916), ಚೆಲುವಾಂಬ ವಿಲಾಸ ಪ್ಯಾಲೇಸ್(1918), ಲಲಿತಮಹಲ್ ಪ್ಯಾಲೇಸ್(1921), ರಾಜೇಂದ್ರ ವಿಲಾಸ ಪ್ಯಾಲೇಸ್(1924)ಗಳನ್ನು ಹಾಗೂ ನಮ್ಮ ಕಾಲದ 200ಕ್ಕೂ ಹೆಚ್ಚು ಪಾರಂಪರಿಕ ಕಟ್ಟಡಗಳನ್ನು ನೋಡಿ ಆನಂದಿಸಿ, ಏಳು ಅರಮನೆಗಳಲ್ಲಿ, ಆರು ನನ್ನ ಆಡಳಿತಾವಧಿಯಲ್ಲಿ ನಿರ್ಮಾಣವಾಗಿದ್ದು. ಇವುಗಳನ್ನು ಹೊರತುಪಡಿಸಿ ಸುಂದರ ಮೈಸೂರು ನಗರವನ್ನು ಕಲ್ಪಿಸಿಕೊಳ್ಳಲು ಹೇಗೆ ಸಾಧ್ಯ?.

ಅಭಿವೃದ್ಧಿಗೆ ನಾನು ಎಂದಿಗೂ ವಿರೋಧಿಯಾಗಲಾರೆ. ಗ್ರೇಟರ್ ಮೈಸೂರು ಮಾಡಲೇಬೇಕೆಂಬ ಇರಾದೆ ಇದ್ದರೆ, ಯೋಜನೆಯನ್ನು ಅನುಷ್ಠಾನಗೊಳಿಸುವ ಮೊದಲು ರಾಜಕೀಯವನ್ನು ಬದಿಗಿಟ್ಟು ಪರಿಣಿತರ ಸಲಹೆ ಪಡೆದು ಆಗುಹೋಗುಗಳ ಕುರಿತು ಸಮಗ್ರವಾಗಿ ಚರ್ಚಿಸಿ ಮುಂದುವರಿಯಿರಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಉತ್ತಮವಾಗಿಯೇ ಕಾರ್ಯ ನಿರ್ವಹಿಸುತ್ತಿರುವ ನನ್ನ ಮುದ್ದು ಯದುವೀರನು ಸಮರ್ಥನಿದ್ದಾನೆ. ಮಾಡುವ ಒಳ್ಳೆಯ ಕೆಲಸಗಳಿಗೆ ನಿಮ್ಮೆಲ್ಲರ ಬೆಂಬಲ ಇರಲಿ. ಹೇಳಿದ್ದು ಸಾಕೆನಿಸುತ್ತದೆ. ಸಮಸ್ತ ನಾಗರಿಕರಿಗೆ ಚಾಮುಂಡೇಶ್ವರಿಯ ಕೃಪಾಕಟಾಕ್ಷದೊಂದಿಗೆ ಆಶೀರ್ವಾದಗಳನ್ನು ತಿಳಿಸುತ್ತಾ ವಿರಾಮ ಪಡೆಯುವೆ.

ನಾನು ನಿಮ್ಮ
ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್.

ಮೈಸೂರು ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ

ಸಶಸ್ತ್ರ ಮೀಸಲು ಪಡೆ ತಂಡಕ್ಕೆ ಸಮಗ್ರ ಪ್ರಶಸ್ತಿ

ಜಿ.ಜಿ.ರಘುನಂಧನ್, ದೀಪಾ ಪಾಳ್ಕೆ ಕ್ರಮವಾಗಿ ಉತ್ತಮ ಪುರುಷ, ಮಹಿಳಾ ಕ್ರೀಡಾಪಟು ಪ್ರಶಸ್ತಿ



ಜಿಲ್ಲಾ ಸಶಸ್ತ್ರ ಮೀಸಲು ಪಡೆ (ಡಿಎಆರ್) ತಂಡವು 'ಸಮಗ್ರ' ಪ್ರಶಸ್ತಿ ಪಡೆಯಿತು.

ಮೈಸೂರು, ನ.14(ಎಸ್‌ಪಿಎನ್)– ಮೈಸೂರಿನ ಡಿಎಆರ್ ಮೈದಾನದಲ್ಲಿ ಮೂರು ದಿನಗಳ ಕಾಲ ನಡೆದ ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಎಲ್ಲಾ ಆಟದಲ್ಲೂ ಉತ್ತಮ ಆಟ ಪ್ರದರ್ಶಿಸಿ 64 ಅಂಕ ಪಡೆದಿರುವ ಜಿಲ್ಲಾ ಸಶಸ್ತ್ರ ಮೀಸಲು ಪಡೆ ತಂಡವು(ಡಿಎಆರ್) 'ಸಮಗ್ರ' ಪ್ರಶಸ್ತಿ ಪಡೆಯಿತು.

ಗುಂಪು ಹಾಗೂ ವೈಯಕ್ತಿಕ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿದ ಡಿಎಆರ್ ತಂಡ 64 ಅಂಕದೊಂದಿಗೆ ಅಗ್ರಸ್ಥಾನ ಪಡೆಯಿತು. ಪುರುಷರ ಸಮಗ್ರ ವಿಭಾಗದಲ್ಲಿ ಡಿಎಆರ್‌ನ ಜಿ.ಜಿ.ರಘುನಂದನ, ಮಹಿಳಾ ವಿಭಾಗದಲ್ಲಿ ಕಲವಂದೆ ಠಾಣೆಯ ದೀಪಾ ಪಾಳ್ಕೆ ಉತ್ತಮ ಮಹಿಳಾ ಕ್ರೀಡಾಪಟು ಪ್ರಶಸ್ತಿ ಪಡೆದರು.

ರಘುನಂದನ 100 ಮೀ, 400 ಮೀ, 800 ಮೀಟರ್ಸ್ ಉದ್ದಜಿಗಿತ, ಎತ್ತರ ಜಿಗಿತದಲ್ಲಿ ಪ್ರಥಮ ಸ್ಥಾನ ಪಡೆದರೆ, ದೀಪಾ 100 ಮೀ, 200 ಮೀ, ಉದ್ದಜಿಗಿತದಲ್ಲಿ ಪ್ರಥಮ ಮತ್ತು ಎತ್ತರ ಜಿಗಿತದಲ್ಲಿ ದ್ವಿತೀಯ ಸ್ಥಾನ ಪಡೆದು 25 ಅಂಕಗಳಿಸಿ ಉತ್ತಮ ಪುರುಷ ಕ್ರೀಡಾಪಟು ಪ್ರಶಸ್ತಿ ಪಡೆದರು.

ಫಲಿತಾಂಶ: ಪುರುಷರ 4x100 ಮೀಟರ್ಸ್ ರಿಲೇ ಸ್ಪರ್ಧೆಯಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಪ್ರಥಮ, ಮೈಸೂರು ಗ್ರಾಮಾಂತರ ಉಪವಿಭಾಗ ದ್ವಿತೀಯ, ವಿಶೇಷ ವಿಭಾಗ ತೃತೀಯ. 4x400 ಮೀ ರಿಲೇಯಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಪ್ರಥಮ, ನಂಜನಗೂಡು ವಲಯ ದ್ವಿತೀಯ, ಮೈಸೂರು ಉಪ ವಿಭಾಗ ತೃತೀಯ ಸ್ಥಾನ ಪಡೆಯಿತು.

ಗುಂಪು ವಿಭಾಗ: ಹಗ್ಗಜಗ್ಗಾಟದಲ್ಲಿ ಡಿಎಆರ್, ಹುಣಸೂರು ಉಪವಿಭಾಗ. ಕಬಡ್ಡಿಯಲ್ಲಿ ಮೈಸೂರು ಗ್ರಾಮಾಂತರ ಉಪವಿಭಾಗ, ಡಿಎಆರ್. ವಾಲಿ ಬಾಲ್‌ನಲ್ಲಿ ಹುಣಸೂರು ಗ್ರಾಮಾಂತರ ಉಪವಿಭಾಗ, ಡಿಎಆರ್ ಕ್ರಮವಾಗಿ ಪ್ರಥಮ, ದ್ವಿತೀಯ ಸ್ಥಾನ ಪಡೆಯಿತು. ಅಧಿಕಾರಿಗಳ ವರ್ಗದ ಕ್ರಿಕೆಟ್ ಸ್ಪರ್ಧೆಯಲ್ಲಿ ಎಸ್‌ಪಿ ತಂಡ ಪ್ರಥಮ, ಆಡಿಷನಲ್ ಎಸ್‌ಪಿ ತಂಡ ಎರಡನೇ ಸ್ಥಾನ ಪಡೆಯಿತು.

ಪ್ರಶಸ್ತಿ ವಿತರಿಸಿ ಮಾತನಾಡಿದ ದಕ್ಷಿಣ ವಲಯ ಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ, ಪೊಲೀಸ್ ಇಲಾಖೆಯಲ್ಲಿ ಫಿಟ್ನೆಸ್‌ಗೆ ಪ್ರಾಮುಖ್ಯತೆ ಇದೆ. ಕ್ರೀಡೆಯು ಆರೋಗ್ಯ ವೃದ್ಧಿ ಹಾಗೂ ತಂಡವಾಗಿ ಕೆಲಸ ಮಾಡುವ ಗುಣವನ್ನು ಕಲಿಸುತ್ತದೆ. ಹೀಗಾಗಿ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಲು ಎಲ್ಲಾ ಸಿಬ್ಬಂದಿಗಳು ಆಸಕ್ತಿ ಹೊಂದಿರಬೇಕು ಎಂದು ಸಲಹೆ ನೀಡಿದರು.

ಫಿಟ್ನೆಸ್‌ಗಾಗಿ ದಿನ ಸಮಯ ಕೊಡಿ, ಆ ಮೂಲಕ ಒತ್ತಡದಿಂದ ಹೊರಬಂದು ಆರೋಗ್ಯಯುತ ಜೀವನಶೈಲಿ ರೂಢಿಸಿಕೊಳ್ಳಬೇಕು. 41 ವರ್ಷದ ರಘುನಂದನ್ ಉತ್ತಮ ಪ್ರದರ್ಶನ ನೀಡಿ, ಉತ್ತಮ ಪುರುಷ ಕ್ರೀಡಾಪಟು ಪಡೆದು ನಮಗೆ ಮಾದರಿಯಾಗಿದ್ದು, ನಿರಂತರ ಪರಿಶ್ರಮ ಹಾಗೂ ಪ್ರಯತ್ನ ಇದ್ದರೆ ನಾವೂ ಅವರಂತೆ ಉತ್ತಮ ಕ್ರೀಡಾಪಟು ಆಗಬಹುದು ಎಂದು ಹೇಳಿದರು.

ಜಿಲ್ಲಾ ಎಸ್ಪಿ ಕಚೇರಿ ಹಾಗೂ ವಲಯ ಕಚೇರಿ– ಲಿಪಿಕ ಸಿಬ್ಬಂದಿ ವರ್ಗದವರಿಗೆ ಏರ್ಪಡಿಸಿದ್ದ 100 ಮೀಟರ್ ಸ್ಪ್ರಿಂಟ್ ಸ್ಪರ್ಧೆಯಲ್ಲಿ ಎಸ್‌ಡಿಎ ಎಚ್.ಎಸ್.ನಿಶ್ಚಿತ ಪ್ರಥಮ, ಡಿ ಗ್ರೂಪ್ ಸಿಬ್ಬಂದಿ ಎಚ್.ಎನ್.ಶಿಲ್ಪ(ದ್ವಿ), ಎಫ್‌ಡಿಎ ಸುಷ್ಮಾ (ತೃ) ಬಹುಮಾನ ಪಡೆದರೆ, 100 ಮೀಟರ್ ಫಾಸ್ಟ್ ವಾಕ್(45 ವರ್ಷ ಮೇಲ್ಪಟ್ಟ) ಸ್ಪರ್ಧೆಯಲ್ಲಿ ಎಫ್‌ಡಿಎ ಸುಜಾತ (ಪ್ರ), ಎಸ್‌ಡಿಎ ಡಿ.ಎಲ್.ಗೀತಾ (ದ್ವಿ), ಡಿ.ಗ್ರೂಪ್ ಪ್ರೇಮಾ (ತೃ) ಬಹುಮಾನ ಪಡೆದಿದ್ದಾರೆ.

ಶಾಟ್‌ಪುಟ್ (45 ವರ್ಷ ಮೇಲ್ಪಟ್ಟ) ಸ್ಪರ್ಧೆಯಲ್ಲಿ ಡಿ.ಎಲ್.ಗೀತಾ (ಪ್ರ), ಶಶಿರೇಖಾ(ದ್ವಿ), ಸೆಲಿನಾ(ತೃ) ಬಹುಮಾನ ಪಡೆದರೆ, ಶಾಟ್‌ಪುಟ್(45 ವರ್ಷ ಕೆಳಪಟ್ಟವರಿಗೆ) ಸುಷ್ಮಾ(ಪ್ರ), ಎಚ್.ಎನ್.ಶಿಲ್ಪ(ದ್ವಿ), ಭಾನುಮತಿ(ತೃ) ಬಹುಮಾನ ಪಡೆದಿದ್ದಾರೆ.

ಈ ವೇಳೆ ಜಿಲ್ಲಾ ಎಸ್ಪಿ ಎನ್.ವಿಷ್ಣುವರ್ಧನ್, ಎಎಸ್‌ಪಿಗಳಾದ ಮಲ್ಲಿಕ್ ಹಾಗೂ ನಾಗೇಶ್ ಉಪಸ್ಥಿತರಿದ್ದರು. ಎಸ್‌ಐ ಸುನೀಲ್ ಮಿರ್ಲೆ ಮತ್ತು ತಂಡದವರು ಕಾರ್ಯಕ್ರಮ ನಿರೂಪಿಸಿದರು.



ಉತ್ತಮ ಪುರುಷ, ಮಹಿಳಾ ಕ್ರೀಡಾಪಟು ಪ್ರಶಸ್ತಿಗೆ ಜಿ.ಜಿ.ರಘುನಂದನ, ಕವಲಂದೆ ಠಾಣೆಯ ಸಿಬ್ಬಂದಿ ದೀಪಾ ಪಾಳ್ಕೆ ಭಾಜನರಾದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್‌ಗೆ ನಾಲ್ವರ ನಾಮನಿರ್ದೇಶನ





ಮೈಸೂರು, ನ. 14– ಸ್ವಾತಂತ್ರ್ಯ ಸೇನಾನಿ ಎಂ ಎನ್. ಜೋಯಿಸ್ ಅವರ ಮೊಮ್ಮಗ, ಜೆ.ಸಿ.ನಗರದ ಹೆಡತಲೆ ಮಂಜುನಾಥ್, ವರುಣಾ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ತೊರೆಮಾವು ಗಿರೀಶ್ ಹಾಗೂ ವಕೀಲ ಪಾಳ್ಯ ಸುರೇಶ್ ಅವರನ್ನು ಸರ್ಕಾರ ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದೆ. ಈ ಮೂರು ಮಂದಿ ಪಕ್ಷದಲ್ಲಿ ವಿವಿಧ ಹಂತದಲ್ಲಿ ಸೇವೆ ಸಲ್ಲಿಸಿದ್ದನ್ನು ಪರಿಗಣಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ನಾಮ ನಿರ್ದೇಶನ ಮಾಡಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಸರ್ದಾರ್ ವಲ್ಲಭ ಭಾಯಿ ಪಟೇಲರ ಜನ್ಮದಿನ; ಇಂದು ಏಕತಾ ಪಾದಯಾತ್ರೆ

ಮೈಸೂರು,ನ.14(ಜಿಎ)–ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರ 150ನೇ ಜನ್ಮದಿನದ ಅಂಗವಾಗಿ ನ. 15 ರಂದು ಬೆಳಗ್ಗೆ 9ಕ್ಕೆ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಜಿಲ್ಲಾ ಮಟ್ಟದ ಏಕತಾ ಪಾದಯಾತ್ರೆ ಹಮ್ಮಿಕೊಂಡಿರುವುದಾಗಿ ಮೈ ಭಾರತ್ ಜಿಲ್ಲಾ ಯುವ ಅಧಿಕಾರಿ ಪಿ. ಅಖಿಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎನ್‌ಎಸ್‌ಎಸ್ ಘಟಕಗಳು, ಸ್ಕೌಟ್ಸ್ ಅಂಡ್ ಗೈಡ್ಸ್, ಡಾ. ಗಂಗೂಬಾಯಿ ಪ್ರದರ್ಶಕ ಕಲೆಗಳ ವಿವಿ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಾಲ್ಗೊಳ್ಳಲಿದ್ದಾರೆ. ಗಣ್ಯರು ಉಪಸ್ಥಿತರಿರುವರು. ರಾಷ್ಟ್ರವ್ಯಾಪಿ ಪಾದಯಾತ್ರೆ ಹಮ್ಮಿಕೊಳ್ಳುತ್ತಿದ್ದು, ಅದರ ಅಂಗವಾಗಿ ನಗರದಲ್ಲಿಯೂ ನಡೆಯಲಿದೆ ಎಂದರು.

ಮೈಸೂರು ಜಿಲ್ಲಾ ಮಟ್ಟದ ಪಾದಯಾತ್ರೆಗೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್ ಮತ್ತಿತರರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಗ್ರಾಮಾಂತರ ಪ್ರದೇಶದಲ್ಲಿಯೂ ಏಕತಾ ಪಾದಯಾತ್ರೆ ನಡೆಯಲಿದ್ದು, ನ.21ರಂದು ಹುಣಸೂರಿನಲ್ಲಿ ಮೈಸೂರು ಜಿಲ್ಲಾ ಮಟ್ಟದ ಪಾದಯಾತ್ರೆಗೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಜಿ.ಡಿ.ಹರೀಶ್‌ಗೌಡ ಆಗಮಿಸಲಿದ್ದಾರೆ ಎಂದರು.

ಮಕ್ಕಳ ದಿನಾಚರಣೆ



ಮೈಸೂರಿನ ಮಂಚೇಗೌಡನಕೊಪ್ಪಲು ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ರವಿ ಮಂಚೇಗೌಡನಕೊಪ್ಪಲು ಅವರು ಬಹುಮಾನ ವಿತರಿಸಿದರು.

ಗ್ರಾಮೀಣ ಭಾರತದಲ್ಲಿ ಸಹಕಾರಿ ಚಳವಳಿ ಲಕ್ಷಾಂತರ ಕುಟುಂಬಗಳ ಆರ್ಥಿಕ ಮೂಲ

• ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ • ಸಹಕಾರ ಸಪ್ತಾಹಕ್ಕೆ ಚಾಲನೆ; 'ಸಹಕಾರ ರತ್ನ' ಪ್ರಶಸ್ತಿ ಪ್ರದಾನ



ಬೆಂಗಳೂರಿನಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ 79 ಸಹಕಾರಿಗಳಿಗೆ 'ಸಹಕಾರ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರು, ನ. 14(ಕೆಎಂಶಿ)–ಸಹಕಾರ ಕ್ಷೇತ್ರ ಗಟ್ಟಿಯಾದರೆ ಆರ್ಥಿಕ, ಸಾಮಾಜಿಕ ಚೈತನ್ಯ ಹೆಚ್ಚಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

72ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟಿಸಿ, 'ಸಹಕಾರ ರತ್ನ' ಪ್ರಶಸ್ತಿ ವಿತರಿಸಿ ಮಾತನಾಡಿದ ಅವರು, ಗ್ರಾಮೀಣ ಭಾರತದಲ್ಲಿ ಸಹಕಾರಿ ಚಳವಳಿ ಲಕ್ಷಾಂತರ ಕುಟುಂಬಗಳ ಆರ್ಥಿಕ ಮೂಲವಾಗಿದೆ ಎಂದರು.

ಏಷ್ಯಾದಲ್ಲೇ ಮೊದಲ ಬಾರಿಗೆ ಸಹಕಾರಿ ಬ್ಯಾಂಕ್ ಸ್ಥಾಪನೆಯಾದ ಕರ್ನಾಟಕ ಭಾರತದ ಸಹಕಾರ ಕ್ಷೇತ್ರದ ರಾಜಧಾನಿ. ಗ್ರಾಮ ಅಭಿವೃದ್ಧಿ ಹೊಂದಲು ಒಂದು ಶಾಲೆ, ಒಂದು ಸಹಕಾರಿ ಸಂಘ, ಒಂದು ಆಸ್ಪತ್ರೆ ಇರಬೇಕು ಎನ್ನುವ ಕಲ್ಪನೆ ಗುರಿಯಾಗಿಸಿಕೊಂಡು ಸಹಕಾರ ಚಳವಳಿಗೆ ಜವಹರಲಾಲ್ ನೆಹರು ಮತ್ತು ಮಹಾತ್ಮ ಗಾಂಧಿ ಶಕ್ತಿ ತುಂಬಿದರು.

ರಾಜ್ಯದಲ್ಲಿ ಸಹಕಾರಿ ಕ್ಷೇತ್ರದ ವಾರ್ಷಿಕ ವಹಿವಾಟು 25,000 ಕೋಟಿ ರೂ.ಗಳಾಗಿದೆ. ದಿನವೊಂದಕ್ಕೆ ಒಂದು ಕೋಟಿ ಲೀಟರ್ ಹಾಲು ಉತ್ಪಾದನೆ ಆಗುತ್ತಿದ್ದು, ಹಾಲು ಮಹಾ ಮಂಡಳಗಳ ಮಹತ್ವದ ಸಾಧನೆಯಾಗಿದೆ.

ಹಾಲು ಉತ್ಪಾದಕರ ಸಂಘಗಳ ಚಳವಳಿ ರೂಪ ಪಡೆದು ಮಧ್ಯವರ್ತಿಗಳ ಹಾವಳಿ ಇಲ್ಲದೆ ಹಾಲನ್ನು ನೇರ ಉತ್ಪಾದಕರ ಸಂಘಗಳಿಗೆ ಸರಬರಾಜು ಮಾಡುವಂತಾಯಿತು. ಸಹಕಾರ ಕ್ಷೇತ್ರದಿಂದಾಗಿ ಕೃಷಿ ಸೇರಿದಂತೆ ಹಲವು ಕ್ಷೇತ್ರಗಳಿಗೆ ದೊಡ್ಡ ಚೈತನ್ಯ ಸಿಕ್ಕಿದೆ. ಲಕ್ಷಾಂತರ ಕುಟುಂಬಗಳ ಬದುಕಿಗೆ ಆಸರೆಯಾಗಿದೆ.


ಮುಖ್ಯಮಂತ್ರಿಯಾಗಿ ಹಾಲಿನ ಪ್ರೋತ್ಸಾಹ ಮೊತ್ತವನ್ನು ಲೀಟರ್‌ಗೆ 3 ರೂ.ನಿಂದ 5 ರೂ.ಗೆ ಹೆಚ್ಚಿಸಿ, ಪ್ರತಿದಿನ 5 ಕೋಟಿ ರೂ. ಸಹಾಯಧನವನ್ನು ಹಾಲು ಉತ್ಪಾದಕರಿಗೆ ನೀಡಲಾಗುತ್ತಿದೆ. 40 ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ ಸಹಾಯಧನ ಜಮೆ ಆಗುತ್ತಿದೆ, ಇದಕ್ಕೆಲ್ಲಾ ಹಾಲು ಮಹಾ ಮಂಡಳ ತಾಯಿಬೇರು ಇದ್ದ ಹಾಗೆ ಎಂದರು.

ನಾಳೆ ಕನಕದಾಸ ಪತ್ತಿನ ಸಹಕಾರ ಸಂಘದ ಚುನಾವಣೆ

ಮೈಸೂರು,ನ.14(ಜಿಎ)–ಮೈಸೂರಿನ ಜಗನ್ಮೋಹನ ಅರಮನೆ ಬಳಿ ಇರುವ ಕನಕದಾಸ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನ.16 ರಂದು ಹಾರ್ಡ್ವಿಕ್ ವಿದ್ಯಾ ಸಂಸ್ಥೆಯಲ್ಲಿ ನಡೆಯಲಿದ್ದು, ಸಂಘದ ಏಳಿಗೆಗಾಗಿ ಮತದಾರರು ತಮ್ಮ ಬಣದ ಅಭ್ಯರ್ಥಿಗಳಿಗೆ ಮತ ಹಾಕಬೇಕೆಂದು ಸಂಸ್ಥಾಪಕ ನಿರ್ದೇಶಕ ಎಂ.ಮಧು ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಬಣದಿಂದ ನಿರ್ದೇಶಕರ ಸ್ಥಾನಕ್ಕೆ ಚೇತನ್ ಪುಟ್ಟಣ್ಣ, ಎಂ. ದೀಪಾ, ಆರ್. ನವೀನ್, ಮನಸು (ಮನು), ಟಿ.ಎ. ರಕ್ಷಿತಾ, ಕೆ. ರಾಜಶೇಖರ್, ಜೆ. ರಾಜೇಶ್, ಎಂ.ಎನ್. ಶಶಿರಾಜ್, ಪಿ. ಶಾರದಾ ಸ್ಪರ್ಧಿಸಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಅಧ್ಯಕ್ಷ ಕುಮಾರಸ್ವಾಮಿ, ಪ್ರೊ.ಕೆ.ಮೂರ್ತಿ, ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಸಾಲು ಮರದ ತಿಮ್ಮಕ್ಕ ನಿಧನಕ್ಕೆ ಸುತ್ತೂರು ಶ್ರೀಗಳ ಸಂತಾಪ



ಸಾಲುಮರದ ತಿಮ್ಮಕ್ಕನವರನ್ನು 2020ರಲ್ಲಿ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಸನ್ಮಾನಿಸುತ್ತಿರುವ ಸಂದರ್ಭದ ಚಿತ್ರ.

ಮೈಸೂರು, ನ.14(ಎಸ್‌ಪಿಎನ್)– ಪದ್ಮಶ್ರೀ ಪುರಸ್ಕೃತರಾದ ಸಾಲುಮರದ ತಿಮ್ಮಕ್ಕನವರ ನಿಧನ ಪರಿಸರ ಪ್ರೇಮಿಗಳಿಗೆಲ್ಲ ಅತೀವ ದುಃಖದ ಸಂಗತಿ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.

ಶತಾಯುಷಿಗಳಾಗಿದ್ದ ಸಾಲುಮರದ ತಿಮ್ಮಕ್ಕನವರು ಲೌಕಿಕ ಅರ್ಥದಲ್ಲಿ ಹೆಚ್ಚು ಅಧ್ಯಯನ ಮಾಡದಿದ್ದರೂ ಅವರ ಅಂತರಂಗದಲ್ಲಿ ನಿಸರ್ಗ ಪ್ರೀತಿ ಸದಾ ಜಾಗೃತವಾಗಿತ್ತು ಪರಿಸರ ಸಂಬಂಧಿ ಕಾಳಜಿಗಳ ಬಗ್ಗೆ ಯಾರೂ ಚಿಂತಿಸದೆ ಇದ್ದಂಥ ಕಾಲದಲ್ಲೇ ಅವರು ವೃಕ್ಷಪ್ರೀತಿಯನ್ನು ಮೆರೆದು ಲಕ್ಷಾಂತರ ಗಿಡಗಳನ್ನು ನೆಟ್ಟರು, ಬೆಳೆಸಿದರು. ಅವುಗಳಿಗೆ ತಾಯಿಪ್ರೀತಿ ತೋರಿಸಿದರು. ಇತ್ತೀಚಿನ ದಿನಮಾನಗಳಲ್ಲಿ ಅವರೊಬ್ಬ ಆದರ್ಶ ಪರಿಸರವಾದಿಯ ಪ್ರತೀಕವಾಗಿದ್ದರು.

ಇವರ ಪರಿಸರ ಪ್ರೀತಿಯನ್ನು ಗುರುತಿಸಿ ಕೇಂದ್ರ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಮೊದಲುಗೊಂಡು ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದ್ದರೂ ಬಹುಶಃ ಅವುಗಳನ್ನು ಕುರಿತಂತೆ ಯಾವುದೇ ವ್ಯಾಮೋಹ ವ್ಯಕ್ತಪಡಿಸಿದವರಲ್ಲ. ಶ್ರೀಮಠದಿಂದ 2020ರಲ್ಲಿ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಸನ್ಮಾನಿಸಿದ ಪ್ರಸಂಗ ನಮ್ಮ ನೆನಪಿನಲ್ಲಿ ಇನ್ನೂ ಹಸಿರಾಗಿಯೇ ಇದೆ. ಈ ನೆಲದ ಮಣ್ಣಿನ ಮಗಳಾಗಿದ್ದ ಅವರು ನಿಜವಾದ ಅರ್ಥದಲ್ಲಿ ಕಾಯಕಯೋಗಿಗಳಾಗಿದ್ದರು. ಅವರ ಅಗಲುವಿಕೆಯಿಂದ ಕರ್ನಾಟಕದ ಪರಿಸರ ಕ್ಷೇತ್ರ ಬಡವಾಗಿದೆಯೆಂದರೆ ಅತಿಶಯೋಕ್ತಿಯಲ್ಲ.

ಸಾಲುಮರದ ತಿಮ್ಮಕ್ಕನವರ ಆತ್ಮಕ್ಕೆ ಶಾಂತಿಯನ್ನು, ಕುಟುಂಬ ವರ್ಗದವರಿಗೆ ಹಾಗೂ ಅವರ ಅಗಲಿಕೆಯಿಂದ ದುಃಖಿತರಾಗಿರುವ ಅಸಂಖ್ಯಾತ ಪರಿಸರ ಪ್ರೇಮಿಗಳಿಗೆ ಈ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಆ ಭಗವಂತನು ನೀಡಲಿ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತೀವ್ರ ಸಂತಾಪ ಸೂಚಿಸಿದ್ದಾರೆ.

ಕೆ.ಆರ್.ಆಸ್ಪತ್ರೆ ವೈದ್ಯಶಾಸ್ತ್ರ ವಿಭಾಗದಲ್ಲಿ ಮಧುಮೇಹ ದಿನಾಚರಣೆ



ಪ್ರೊ.ಡಾ.ಎ. ಮಂಜುಳ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಮೈಸೂರು, ನ.14(ವಿವಿಹೆಚ್)– ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ, ಕೆ.ಆರ್.ಆಸ್ಪತ್ರೆಯ ವೈದ್ಯಶಾಸ್ತ್ರ ವಿಭಾಗದಿಂದ ವಿಶ್ವ ಮಧುಮೇಹ ದಿನಾಚರಣೆ ಆಚರಿಸಲಾಯಿತು.

ಈ ವೇಳೆ ವೈದ್ಯಶಾಸ್ತ್ರ ವಿಭಾಗದ ಪ್ರೊಫೆಸರ್ ಮತ್ತು ಮುಖ್ಯಸ್ಥರೂ ಆದ ಪ್ರೊ.ಎ. ಮಂಜುಳಾ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿ, ಭಾರತವು ಮಧುಮೇಹದ ರಾಜಧಾನಿಯಾಗಿದೆ. ಸುಮಾರು 100 ಮಿಲಿಯನ್‌ಗಿಂತಲೂ ಹೆಚ್ಚು ಭಾರತೀಯರು ಈಗ ಮಧುಮೇಹದಿಂದ ಬಳಲುತ್ತಿದ್ದಾರೆ. ಲಕ್ಷಾಂತರ ಜನರು ಇನ್ನೂ ರೋಗ ನಿರ್ಣಯಕ್ಕೆ ಒಳಗಾಗಿಲ್ಲ ಎಂಬ ಅಂಕಿ ಅಂಶಗಳನ್ನು ತೆರೆದಿಟ್ಟರು.

ಯುವಕರಲ್ಲಿ ಮಧುಮೇಹದ ತೀವ್ರ ಏರಿಕೆಯು ಅತ್ಯಂತ ಅಪಾಯಕಾರಿ ಬೆಳವಣಿಗೆ ಆಗಿದೆ. ಇದು ನಮ್ಮ ರಾಷ್ಟ್ರ ಭವಿಷ್ಯಕ್ಕೆ ಮಾರಕವಾದ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿಯಾಗಿದೆ ಎಂದು ಹೇಳಿದರು.

ವ್ಯಾಯಾಮ, ನಡಿಗೆಯನ್ನು ತಪ್ಪದೇ ಮಾಡುವುದು, ಹೃದಯಾಘಾತ, ಮೂತ್ರಪಿಂಡ ವೈಫಲ್ಯ, ಕುರುಡುತನದಂತಹ ಗಂಭೀರ ತೊಂದರೆಗಳನ್ನು ತಪ್ಪಿಸಲು ಆರಂಭಿಕ ಪತ್ತೆ ಹಚ್ಚುವಿಕೆ ಮುಖ್ಯವಾಗಿದೆ ಎಂದು ತಿಳಿಸಿದರು. ಜೊತೆಗೆ 35 ವರ್ಷ ಮೇಲ್ಪಟ್ಟ ಎಲ್ಲಾ ವಯಸ್ಕರು ಪರೀಕ್ಷೆಗೆ ಒಳಗಾಗುವಂತೆ ಸಲಹೆ ನೀಡಿದರು.

ರಕ್ತದಲ್ಲಿನ ಸಕ್ಕರೆ ಅಂಶವನ್ನು ಮಾತ್ರವಲ್ಲದೆ ರಕ್ತದೊತ್ತಡ, ಮತ್ತು ಕೆಟ್ಟ ಕೊಬ್ಬಿನ ಅಂಶವನ್ನು ಸಹ ನಿಯಂತ್ರಿಸುವುದು ನಮ್ಮ ಗುರಿಯಾಗಿದೆ. ಈ ವಿಶ್ವ ಮಧುಮೇಹ ದಿನದಂದು ಪ್ರತಿಯೊಬ್ಬರೂ ತಮ್ಮ ಆರೋಗ್ಯವನ್ನು ಅರಿಯಬೇಕು, ಪರೀಕ್ಷೆಗೊಳಪಡಬೇಕು ಮತ್ತು ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಾಳೆ 'ಸೇ ನೋ ಟು ಡ್ರಗ್' ಪ್ರಬಂಧ, ವ್ಯಂಗ್ಯ ಚಿತ್ರ ರಚನೆ ಸ್ಪರ್ಧೆ

ಮೈಸೂರು, ನ.14(ವಿವಿಹೆಚ್)– ಸಮರಿಟನ್ಸ್ ಆಫ್ ಮಂಡ್ಯ ಮತ್ತು ಸಿರೋ ಮಲಬಾರ್ ಯೂತ್ ಮೂವ್‌ಮೆಂಟ್ ಜಂಟಿಯಾಗಿ ಶಾಲಾ ವಿದ್ಯಾರ್ಥಿಗಳಿಗಾಗಿ ನ.16 ರಂದು 'ಸೇ ನೋ ಟು ಡ್ರಗ್ಸ್' ಘೋಷಣೆಯೊಂದಿಗೆ ಪ್ರಬಂಧ ಮತ್ತು ವ್ಯಂಗ್ಯಚಿತ್ರ ಸ್ಪರ್ಧೆ ಆಯೋಜಿಸಿದೆ.

ಭಾನುವಾರ ಹಿನಕಲ್‌ನ ಇನ್ಫೆಂಟ್ ಜೀಸಸ್ ಕ್ಯಾಥೆಡ್ರಲ್ ಆವರಣದಲ್ಲಿ ಮಂಡ್ಯ ಡಯಾಸಿಸ್‌ನ ವಿಕಾರ್ ಜನರಲ್ ವಂದನೀಯ ಥೋಮಸ್ ತೆನ್ನಾಟ್ಟಿಲ್ ಅಗಸ್ತಿ ಅವರು ಬೆಳಿಗ್ಗೆ 10.30 ಗಂಟೆಗೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮಂಡ್ಯ ಡಯಾಸಿಸ್‌ನ ಕುಲಪತಿ ಫಾದರ್ ಜೊಮೋನ್ ಕೋಲಂಚೇರಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ವಿಚಾರಣೆಯ ಸಹಾಯಕ ಗುರುಗಳಾದ ಫಾದರ್ ಅಮಲ್ ಎಡತಿಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಸ್ಪರ್ಧೆಯು ಮೂರು ವಿಭಿನ್ನ ವಿಭಾಗಗಳಲ್ಲಿ ನಡೆಯಲಿದೆ. 11ನೇ ತರಗತಿ ಮತ್ತು 12 ನೇ ತರಗತಿ (ವರ್ಗ–1) ವಿದ್ಯಾರ್ಥಿಗಳಿಗೆ 'ಮಾದಕ ದ್ರವ್ಯ ಮುಕ್ತವಾಗಿರಲು ಆರೋಗ್ಯಕರ ಆಯ್ಕೆಗಳು ಉತ್ತಮ' ವಿಷಯದಡಿ, 8 ರಿಂದ 10 ನೇ ತರಗತಿ (ವರ್ಗ–2) 'ಗೆಳೆತನ ಮಾದಕ ದ್ರವ್ಯಗಳ ವಿರುದ್ಧದ ತಡೆಗೋಡೆ', 5 ರಿಂದ 7ನೇ ತರಗತಿ (ವರ್ಗ–3). ವಿದ್ಯಾರ್ಥಿಗಳಿಗೆ 'ಮಾದಕ ವಸ್ತುಗಳನ್ನಲ್ಲ: ಕನಸುಗಳನ್ನು ಬೆನ್ನಟ್ಟಿರಿ' ವಿಷಯದಡಿ ಪ್ರಬಂಧ ಮತ್ತು ವ್ಯಂಗ್ಯ ಚಿತ್ರ ಬರವಣಿಗೆ ಇರಲಿದೆ.

ಪ್ರತಿ ವಿಭಾಗದ ವಿಜೇತರಿಗೆ ನಗದು ಬಹುಮಾನಗಳು, ಟ್ರೋಫಿಗಳು ಮತ್ತು ಪ್ರಶಸ್ತಿ ಪ್ರಮಾಣ ಪತ್ರಗಳನ್ನು ನೀಡಲಾಗುತ್ತದೆ.

ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಶಾಲಾ ಅಧಿಕಾರಿಗಳ ಮೂಲಕ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕೆಂದು ಜನರಲ್ ಕನ್ವೀನರ್ ಅನಿಲ್ ಜೋಸ್ ಮತ್ತು ಕನ್ವೀನರ್ ಲಾರ್ಲಿ ಟೋಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗಾಗಿ 9845055462/ 8105950870/ 9900043355/ 9845528131 ಸಂಪರ್ಕಿಸಬಹುದಾಗಿದೆ.

ಕರಕುಶಲ ವಸ್ತುಗಳ ಪ್ರದರ್ಶನ, ಮಾರಾಟ ಮೇಳ; ಗಾಂಧಿ ಶಿಲ್ಪ ಬಜಾರ್‌ಗೆ ಚಾಲನೆ

ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್ ಉದ್ಘಾಟನೆ



150ನೇ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ: ಗಾಂಧಿ ಶಿಲ್ಪ ಬಜಾರ್‌ಗೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಶುಕ್ರವಾರ ಭೇಟಿ ನೀಡಿ, ಕರಕುಶಲ ವಸ್ತುಗಳ ವೀಕ್ಷಣೆ ಮಾಡಿದರು.

ಈ ಕರಕುಶಲ ಪ್ರದರ್ಶನ ಹಾಗೂ ಮಾರಾಟ ನ. 14 ರಿಂದ 20 ರವರೆಗೆ ಬೆಳಿಗ್ಗೆ 10.30 ರಿಂದ ರಾತ್ರಿ 9 ರವರೆಗೆ ತೆರೆಯಲಿದ್ದು, ಉಚಿತ ಪ್ರವೇಶವಿದೆ.

ಮೈಸೂರು, ನ.14(ಎಸ್‌ಪಿಎನ್)– ಏಳು ದಿನಗಳ 150ನೇ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ: ಗಾಂಧಿ ಶಿಲ್ಪ ಬಜಾರ್‌ಗೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಶುಕ್ರವಾರ ಚಾಲನೆ ನೀಡಿದರು.

ಮೈಸೂರು ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ, ಕೇಂದ್ರ ಜವಳಿ ಮಂತ್ರಾಲಯ ಸಹಯೋಗದೊಂದಿಗೆ ಇಂದಿ(ನ.14)ನಿಂದ ನ.20ರವರೆಗೆ ಆಯೋಜಿಸಲಾಗಿದೆ.

ಗಾಂಧಿ ಶಿಲ್ಪ ಬಜಾರ್ ಮೇಳದಲ್ಲಿ ದೇಶದ ನಾನಾ ಭಾಗದಿಂದ 50ಕ್ಕೂ ಹೆಚ್ಚು ಕರಕುಶಲ ಕರ್ಮಿಗಳು ತಮ್ಮ ಮಳಿಗೆಗಳನ್ನು ಸ್ಥಾಪಿಸಿದ್ದು, ಮರದ ಕೆತ್ತನೆ, ಶಿಲಾ ಶಿಲ್ಪ, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಮಣ್ಣಿನ ಮಡಿಕೆಗಳು, ಪೇಪರ್, ರತ್ನಗಂಬಳಿ, ಹತ್ತಿ ಜಮಕಾನ, ಇಮಿಟೇಷನ್ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬಾಟಿಕ್, ಕಲಾಕಾರಿ ಚಿತ್ರಕಲೆ, ಚರ್ಮದ ಆಕರ್ಷಕ ವಸ್ತುಗಳು, ಕಲಾತ್ಮಕ ಚರ್ಮದ ಚಪ್ಪಲಿಗಳು ಸೇರಿದಂತೆ ಇತರೆ ಕರಕುಶಲ ವಸ್ತುಗಳು, ಕಾಟನ್ ಸೀರೆ, ಜಮ್ಖಾನ ಸೇರಿದಂತೆ ಇತರೆ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಏಳು ದಿನ ಇರಲಿದೆ ಎಂದು ಮಾಹಿತಿ ನೀಡಿದರು.

ಮಧ್ಯಪ್ರದೇಶದ ಮಹೇಶ್ವರಿ, ಚಂದೇರಿ ಸೀರೆ, ಬಿಹಾರ್‌ನ ಮಧುಬನಿ ಚಿತ್ರಕಲೆ, ಒಡಿಶಾ ರಾಜ್ಯದ ಚಿಕನ್ ಎಂಬ್ರಾಯ್ಡರಿ, ಕಲಾತ್ಮಕ ಕಲ್ಲಿನ ವಸ್ತುಗಳು, ಪಂಜಾಬ್‌ನ ಫುಲ್ಕಾರಿ ಬಟ್ಟೆಗಳು, ಪಶ್ಚಿಮ ಬಂಗಾಳ ಕಾಂತಾ ಸೀರೆಗಳು, ಬೆಳ್ಳಿಯ ಸೂಕ್ಷ್ಮ ವಿನ್ಯಾಸ ವಸ್ತುಗಳು, ಅಸ್ಸಾಂ ವಸ್ತುಗಳು ಗ್ರಾಹಕರಿಗೆ ರಿಯಾಯತಿ ದರದಲ್ಲಿ ಸಿಗುತ್ತವೆ. ಅಲ್ಲದೆ, ಗ್ರಾಹಕರು ಜೆಎಸ್‌ಎಸ್ ಅರ್ಬನ್ ಹಾತ್‌ಗೆ ಭೇಟಿ ನೀಡಿ, ಖರೀದಿಸುವುದರಿಂದ ದೇಶಿಯ ಉತ್ಪನ್ನಗಳಿಗೆ ಮಾರುಕಟ್ಟೆ, ಕಲೆಗೆ ಉತ್ತಮ ಅವಕಾಶ ಕಲ್ಪಿಸಿದಂತಾಗುತ್ತದೆ ಎಂದು ತಿಳಿಸಿದರು.



ಕೇಂದ್ರ ಜವಳಿ ಮಂತ್ರಾಲಯದ ಕರಕುಶಲ ಕೇಂದ್ರದ ಸಹಾಯಕ ನಿರ್ದೇಶಕ ಎಸ್.ವಿನೋದ್ ಕುಮಾರ್ ಮಾತನಾಡಿ, ಕೇಂದ್ರ ಸರ್ಕಾರ ದೇಶಿಯ ಕರಕುಶಲ ಕಲೆಯನ್ನು ಉತ್ತೇಜಿಸಲು ಇಂತಹ ಪ್ರದರ್ಶನ ಮತ್ತು ಮಾರಾಟವನ್ನು ದೇಶದ ವಿವಿಧೆಡೆ 100ಕ್ಕೂ ಹೆಚ್ಚು ಸ್ಥಳದಲ್ಲಿ ಆಯೋಜಿಸುತ್ತಾರೆ. ಮೈಸೂರಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಎರಡು ಬಾರಿ ಗಾಂಧಿ ಶಿಲ್ಪ ಬಜಾರ್ ಮೇಳವನ್ನು ಆಯೋಜಿಸಿದೆ. ರಾಜ್ಯದಲ್ಲಿ ಐದು ಬಾರಿ ಆಯೋಜಿಸಲಾಗಿದೆ. ಪ್ರದರ್ಶನ ಮತ್ತು ಮಾರಾಟದ ಒಂದು ಮೇಳಕ್ಕೆ ಕೇಂದ್ರ ಸರ್ಕಾರ 7.50 ಲಕ್ಷ ಬಜೆಟ್ ನಿಗಧಿಪಡಿಸಿದೆ ಎಂದು ಮಾಹಿತಿ ನೀಡಿದರು. ಈ ವೇಳೆ ಜೆಎಸ್‌ಎಸ್ ಅರ್ಬನ್ ಹಾತ್ ಸಂಯೋಜನಾಧಿಕಾರಿ ಎ.ರಾಕೇಶ್ ರೈ ಸೇರಿದಂತೆ ಇತರರಿದ್ದರು.


ಮೈಸೂರಿನ ಖ್ಯಾತ ಉದ್ಯಮಿ ಹಾಗೂ ಕಾಂಗ್ರೆಸ್ ಮುಖಂಡ ಅಬ್ದುಲ್ ಅಜೀಜ್ (ಅಬ್ದುಲ್ಲಾ) ಹುಟ್ಟುಹಬ್ಬ





ಕಾಂಗ್ರೆಸ್ ಮುಖಂಡ ಹಾಗೂ ಖ್ಯಾತ ಉದ್ಯಮಿ ಅಬ್ದುಲ್ ಅಜೀಜ್ (ಅಬ್ದುಲ್ಲಾ) ಅವರು ತಮ್ಮ ಹುಟ್ಟುಹಬ್ಬವನ್ನು ಶುಕ್ರವಾರ ಮೈಸೂರಿನ ಸಾಯಿರಂಗ ವಿದ್ಯಾಸಂಸ್ಥೆಯ ವಿಶೇಷ ಮಕ್ಕಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಿಕೊಂಡರು. ಬಳಿಕ ಅವರನ್ನು ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಶಾಸಕರಾದ ಕೆ. ಹರೀಶ್‌ಗೌಡ, ಮುಖಂಡರಾದ ಸ್ವೀಟ್ ಮಹೇಶ್, ಪ್ರದೀಪ್, ಮಾರ್ಕೆಟ್ ದಿನೇಶ್, ಮಾಜಿ ಉಪಮೇಯರ್ ಸಿದ್ದರಾಜು, ಅಜಯ್ ಇತರರು ಅಭಿನಂದಿಸಿ ಶುಭಾಶಯ ಕೋರಿದರು.



ಶುಕ್ರವಾರ ಹುಟ್ಟುಹಬ್ಬ ಆಚರಿಸಿಕೊಂಡ ಕಾಂಗ್ರೆಸ್ ಮುಖಂಡ ಹಾಗೂ ಹೆಸರಾಂತ ಉದ್ಯಮಿ ಅಬ್ದುಲ್ ಅಜೀಜ್ (ಅಬ್ದುಲ್ಲಾ) ಅವರನ್ನು ಮಾಜಿ ಶಾಸಕ ಎಲ್. ನಾಗೇಂದ್ರ, ಬಿಜೆಪಿ ಮುಖಂಡರಾದ ಸಂದೇಶ್‌ಸ್ವಾಮಿ, ದಿನೇಶ್‌ಗೌಡ, ಮುಖಂಡರಾದ ಪಾಲಹಳ್ಳಿ ದೇವರಾಜ್, ಗಫೂರ್, ರಾಜೇಶ್, ಕುರುಬಾರಹಳ್ಳಿ ಪ್ರಕಾಶ್, ನಗರ ಕಾಂಗ್ರೆಸ್ ಅಧ್ಯಕ್ಷ ಮೂರ್ತಿ, ದಿ ಕಾರ್ಸ್ ಗ್ಯಾಲಕ್ಸಿ ಗ್ರೂಪ್‌ನ ಪ್ರದೀಪ್‌ಗೌಡ, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯ್‌ಕುಮಾರ್ ಇತರರು ಸನ್ಮಾನಿಸಿ, ಶುಭಾಶಯ ಕೋರಿದರು.

ಸೋಮನಹಳ್ಳಿ ಪಿಎಸ್‌ಸಿಸಿಎಸ್‌ಗೆ ಮಧುಸೂಧನ್ ಅಧ್ಯಕ್ಷ, ಶಿವಪ್ಪ ಉಪಾಧ್ಯಕ್ಷ



ಅಧ್ಯಕ್ಷ, ಉಪಾಧ್ಯಕ್ಷರನ್ನು ನಿರ್ದೇಶಕರುಗಳು ಅಭಿನಂದಿಸಿದರು.

ಕೆಆರ್.ಪೇಟೆ,ನ.14– ತಾಲೂಕಿನ ಸೋಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಅಂಬಿಗರಹಳ್ಳಿ ಎ.ಪಿ.ಮಧುಸೂಧನ್, ಉಪಾಧ್ಯಕ್ಷರಾಗಿ ಪುರ ಪಿ.ಎಂ.ಶಿವಪ್ಪ ಆಯ್ಕೆಯಾಗಿದ್ದಾರೆ.

ಸಂಘದ ಈ ಹಿಂದಿನ ಅಧ್ಯಕ್ಷ ಸೋಮನಹಳ್ಳಿ ಎಸ್.ಸಿ.ಬೋಜರಾಜು ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಇಂದು ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನ ಬಯಸಿ ಎ.ಪಿ.ಮಧುಸೂಧನ್ ಹೊರತುಪಡಿಸಿ ಉಳಿದ ಯಾವುದೇ ನಿರ್ದೇಶಕರು ನಾಮಪತ್ರ ಸಲ್ಲಿಸದೇ ಇರುವ ಕಾರಣ ಚುನಾವಣಾಧಿಕಾರಿಯಾದ ಸಂಘದ ಕಾರ್ಯನಿರ್ವಹಣಾಧಿಕಾರಿ ಎಸ್.ಹೆಚ್.ಮಂಜೇಗೌಡ ಅವರು ಸಂಘದ ನೂತನ ಅಧ್ಯಕ್ಷರಾಗಿ ಎ.ಪಿ.ಮಧುಸೂಧನ್ ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಘೋಷಿಸಿದರು.

ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಯ್ಕೆ ಘೋಷಣೆ ಆಗುತ್ತಿದ್ದಂತೆಯೇ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಸಂಘದ ಆವರಣದಲ್ಲಿ ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಸಂಗಾಪುರ ಎಸ್.ಕೆ.ಸಿದ್ದೇಗೌಡ, ಸೋಮನಹಳ್ಳಿ ಎಸ್.ಪಿ.ಬಸವರಾಜು, ಈರೇಗೌಡ, ಅಂಬಿಗರಹಳ್ಳಿ ನಾರಾಯಣಗೌಡ, ಪುರ ಪಿ.ಪಿ.ಶಶಿಕುಮಾರ್, ಪುರ ರತ್ನಮ್ಮ, ಸೋಮನಹಳ್ಳಿ ಭಾಗ್ಯ, ಸುಮ, ಎಸ್.ಪಿ.ಮದನ್ ಕುಮಾರ್, ಸಂಘದ ಮೇಲ್ವಿಚಾರಕ ಡಿಸಿಸಿ ಬ್ಯಾಂಕ್ ಅಧಿಕಾರಿ ಆರ್.ಜಲೇಂದ್ರ ಸಂಘದ ಸಿಇಓ ಎಸ್.ಹೆಚ್.ಮಂಜೇಗೌಡ ಇದ್ದರು.

ಮಂಡ್ಯದಲ್ಲಿ ಬಿಜೆಪಿ ಸಂಭ್ರಮಾಚರಣೆ


ನಗರದ ಮಹಾವೀರ ವೃತ್ತದಲ್ಲಿ ಜಿಲ್ಲಾ ಬಿಜೆಪಿ ಕಾರ್ಯಕರ್ತರು ಸಂಭ್ರಮಿಸಿದರು.

ಮಂಡ್ಯ: ಬಿಹಾರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟ ಜಯಭೇರಿ ಭಾರಿಸಿದ ಹಿನ್ನೆಲೆಯಲ್ಲಿ ಶುಕ್ರವಾರ ಮಧ್ಯಾಹ್ನ ಮಂಡ್ಯದಲ್ಲಿ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು. ನೂರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರು ಪಕ್ಷದ ದ್ವಜವನ್ನು ಹಿಡಿದು ಜಯಕಾರ ಕೂಗಿದರಲ್ಲದೆ ಕುಣಿದು ಕುಪ್ಪಳಿಸಿದರು. ಜೊತೆಗೆ ಪರಸ್ಪರ ಸಿಹಿ ತಿನಿಸುವ ಮೂಲಕ ವಿಜಯೋತ್ಸವ ಆಚರಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಬಿಜೆಪಿ ಮುಖಂಡ ಎಚ್.ಆರ್.ಅರವಿಂದ್ 243 ವಿಧಾನಸಭಾ ಕ್ಷೇತ್ರಗಳಲ್ಲಿ 200ಕ್ಕೂ ಹೆಚ್ಚು ಎನ್‌ಡಿಎ ಒಕ್ಕೂಟದ ಅಭ್ಯರ್ಥಿಗಳು ಗೆಲುವು ಸಾಧಿಸಿ, ವಿಪಕ್ಷಗಳ ಮಹಾಘಟ ಬಂಧನ್‌ಗೆ ಮತದಾರರು ದೊಡ್ಡಮಟ್ಟದಲ್ಲಿ ತಕ್ಕ ಉತ್ತರ ನೀಡಿದ್ದಾರೆ ಎಂದರು.

ಬಹುಮತದ 122 ಸ್ಥಾನಗಳಿಗೆ ಮತದಾರರು ಎನ್‌ಡಿಎ ಒಕ್ಕೂಟಕ್ಕೆ 200 ಅಭ್ಯರ್ಥಿಗಳನ್ನು ಗೆಲ್ಲಿಸಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಡಳಿತ ವೈಖರಿಗೆ ಆಶೀರ್ವಾದ ಮಾಡಿದ್ದಾರೆ, ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಆಡಳಿತಕ್ಕೆ ದೊಡ್ಡಮಟ್ಟದಲ್ಲಿ ಗೆಲುವು ನೀಡಿದ್ದಾರೆ ಎಂದರು.

ಕಾಂಗ್ರೆಸ್ ಮತ್ತು ರಾಹುಲ್‌ಗಾಂಧಿ ಅವರ ಹೇಳಿಕೆ ಮತಗಳ್ಳತನದ ಸುಳ್ಳು ಹೇಳಿಕೆಗೆ ತಕ್ಕ ಉತ್ತರ ನೀಡಿದ್ದಾರೆ, ಇನ್ನಾದರೂ ಕಾಂಗ್ರೆಸ್ ಬುದ್ದಿ ಕಲಿಯದಿದ್ದರೆ, ಮುಂದಿನ ದಿನಗಳಲ್ಲಿ ದೊಡ್ಡಮಟ್ಟದಲ್ಲಿ ತನ್ನ ಅಸ್ತಿತ್ವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ನಗರ ಘಟಕ ಅಧ್ಯಕ್ಷ ವಸಂತಕುಮಾರ್, ಕಾರ್ಯದರ್ಶಿ ವಿವೇಕ್, ಗ್ರಾಮಾಂತರ ಘಟಕ ಅಧ್ಯಕ್ಷ ಭೀಮೇಶ್, ಹೊಸಹಳ್ಳಿ ಶಿವು, ಶಿವಕುಮಾರ್‌ಆರಾಧ್ಯ ಒಬಿಸಿ ಆನಂದ್, ಸಿ.ಟಿ.ಮಂಜುನಾಥ್ ಮತ್ತಿತರರಿದ್ದರು.

ಸಾಲಬಾಧೆ, ಬೆಳೆ ನಷ್ಟದಿಂದ ವಿಷ ಸೇವಿಸಿ ರೈತ ಆತ್ಮಹತ್ಯೆ



ಪಾಂಡವಪುರ: ಒಂದೆಡೆ ಸಾಲಗಾರರ ಕಾಟ ಮತ್ತೊಂದೆಡೆ ಬೆಳೆ ನಷ್ಟದಿಂದ ಕಂಗಾಲಾದ ರೈತ ತನ್ನ ಜಮೀನಿನ ಬಳಿ ವಿಷ ಕುಡಿದು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲೂಕಿನ ಬೇವಿನಕುಪ್ಪೆ ಗ್ರಾಮದಲ್ಲಿ ಸಂಭವಿಸಿದೆ.

ಬೇವಿನಕುಪ್ಪೆ ಗ್ರಾಮದ ಹೊನ್ನೇಗೌಡರ ಪುತ್ರ ಗೋವಿಂದ (58) ಆತ್ಮಹತ್ಯೆಗೆ ಶರಣಾದ ರೈತ. ಮೃತರಿಗೆ ಪತ್ನಿ ರತ್ನಮ್ಮ, ಪುತ್ರಿ ಅರ್ಪಿತ ಹಾಗೂ ಪುತ್ರ ಪುನೀತ್ ಇದ್ದಾರೆ.

ಆರು ಮಂದಿ ಸಹೋದರರಲ್ಲಿ ನಾಲ್ಕನೆಯವರಾದ ಗೋವಿಂದ ಅವರು ಒಟ್ಟು ಕುಟುಂಬದ 10 ಎಕರೆ ಜಮೀನಿನಲ್ಲಿ ವ್ಯವಸಾಯ ಕೈಗೊಂಡಿದ್ದರು. ಇತ್ತೀಚೆಗೆ ಪುತ್ರಿಯ ಮದುವೆ ಕೂಡ ನಿಶ್ಚಯವಾಗಿ 8 ಲಕ್ಷ ರೂ. ಸಾಲ ಮಾಡಿಕೊಂಡಿದ್ದರಲ್ಲದೆ, ಮೈಕ್ರೋ ಫೈನಾನ್ಸ್, ಕೈ ಸಾಲ, ಬ್ಯಾಂಕ್ ಸಾಲ ಸೇರಿ ಸುಮಾರು 22 ಲಕ್ಷ ರೂ. ಸಾಲದ ಹೊರೆ ಭರಿಸಲಾಗದಷ್ಟು ಹೆಚ್ಚಾಗಿತ್ತು ಎಂದು ತಿಳಿದುಬಂದಿದೆ.

ಇದರೊಂದಿಗೆ 1 ಎಕರೆ 6 ಗುಂಟೆ ಜಾಗದಲ್ಲಿ ಟೊಮೋಟೊ ಬೆಳೆ ಹಾಕಿದ್ದ ಗೋವಿಂದ ಅವರು ಇದಕ್ಕೂ ಕೈಸಾಲ ಮಾಡಿದ್ದರೆನ್ನಲಾಗಿದ್ದು, ಈ ಫಸಲೂ ಬಾರದೆ ಕೈಸುಟ್ಟುಕೊಂಡಿದ್ದರು. ಇದರಿಂದ ಸತತ ಸಾಲಗಾರರ ಒತ್ತಡ ಹೆಚ್ಚಾದ ಪರಿಣಾಮ ಬುಧವಾರ ರಾತ್ರಿ ತಮ್ಮ ಜಮೀನಿನ ಬಳಿ ಕ್ರಿಮಿನಾಶಕ ಸೇವಿಸಿ ಒದ್ದಾಡುತ್ತಿದ್ದಾಗ ಅದೇ ಮಾರ್ಗದಲ್ಲಿ ಬಂದ ಗೋವಿಂದ ಅವರ ಚಿಕ್ಕಪ್ಪ ಅವರು ತಿಳಿಸಿದ್ದು, ಕೂಡಲೇ ಕುಟುಂಬದವರು ಗೋವಿಂದ ಅವರನ್ನು ಪಾಂಡವಪುರ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ತಡರಾತ್ರಿ 3 ಗಂಟೆಯಲ್ಲಿ ಕೊನೆಯುಸಿರೆಳೆದರೆಂದು ತಿಳಿದುಬಂದಿದ್ದು, ಗೋವಿಂದ ಅವರ ಪುತ್ರ ಪುನೀತ್ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮಾಜಿ ಸಚಿವರಿಂದ ಅಭಿನಂದನೆ


ಇತ್ತೀಚೆಗೆ ನಡೆದ ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಚುನಾವಣೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಸ್ಥಾನಕ್ಕೆ ಆಯ್ಕೆಯಾದ ಹಿರಿಯ ಪತ್ರಕರ್ತ ಕೆ.ಎನ್.ನಾಗೇಗೌಡ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು.

ಕೋತಿಗಳ ಹಿಡಿಯುವ ಕಾರ್ಯಾಚರಣೆ

ಮೇಲುಕೋಟೆ: ನಾಗರೀಕರು ಮತ್ತು ಭಕ್ತರಿಗೆ ಕೋತಿಗಳ ಹಾವಳಿಯಿಂದ ಮುಕ್ತಿ ನೀಡಲು ಚೆಲುವನಾರಾಯಣಸ್ವಾಮಿ ದೇವಾಲಯ ಮತ್ತು ಗ್ರಾಮ ಪಂಚಾಯಿತಿ ಕೊನೆಗೂ ಮುಂದಾಗಿದ್ದು ಕೋತಿ ಹಿಡಿಯುವ ಕಾರ್ಯಾಚರಣೆ ಆರಂಭಿಸಿದೆ.


ಬೋನಿನಲ್ಲಿ ಹಿಡಿದ ಕೋತಿಗಳು. ದೇವಾಲಯದ ಇಒ ಶೀಲಾ ಹಾಗೂ ಗ್ರಾ.ಪಂ ಪಿಡಿಒ ರಾಜೇಶ್ವರ್ ಇದ್ದಾರೆ.

ಮೇಲುಕೋಟೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚಿರುವ ಕೋತಿಗಳು ಆಹಾರ ಸಿಗದ ಕಾರಣ ಭಕ್ತರ ಮೇಲೆ ದಾಳಿ ಮಾಡುತ್ತಿದ್ದವು ಮೇಲುಕೋಟೆಯ ಮನೆಗಳ ಬಳಿಗೆ ಬಂದು ಅಪಾರ ಆಸ್ತಿಪಾಸ್ತಿ ಹಾಳು ಮಾಡುತ್ತಿದ್ದವು. ಸುತ್ತಮುತ್ತಲ ತೋಟಗಳಿಗೆ ನುಗ್ಗಿ ಬೆಳೆ ಹಾನಿ ಮಾಡುತ್ತಿದ್ದವು. ನಾಗರೀಕರು ಕೋತಿಗಳನ್ನು ಹಿಡಿಯಬೇಕೆಂದು ಒತ್ತಾಯಿಸಿ ಗ್ರಾಮಸಭೆಯಲ್ಲಿ ನಿರ್ಣಯ ಮಾಡಿಸಿದ್ದರು.

ಕೋತಿ ದಾಳಿಗಳ ಬಗ್ಗೆ ಗಮನ ಸೆಳೆಯುವ ವರದಿಗಳು ಮಾಧ್ಯಮಗಳಲ್ಲಿ ಪ್ರಕಟವಾಗಿದ್ದವು. ಇದೀಗ ಸ್ಥಳೀಯ ಗ್ರಾಪಂ ಮತ್ತು ದೇವಾಲಯದ ಆಡಳಿತ ಕೋತಿಗಳನ್ನು ಹಿಡಿಯುವ ಕಾರ್ಯಕ್ಕೆ ಜಂಟಿ ಸಹಭಾಗಿತ್ವದಲ್ಲಿ ಚಾಲನೆ ನೀಡಿವೆ. ಎರಡು ದಿನಗಳ ಕಾರ್ಯಾಚರಣೆಯಲ್ಲಿ 85ಕ್ಕೂ ಹೆಚ್ಚು ಕೋತಿಗಳನ್ನು ಹಿಡಿದು ಬೋನಿನಲ್ಲಿ ಹಾಕಲಾಗಿದೆ. ಉಪರಾಷ್ಟ್ರಪತಿಗಳ ಭೇಟಿಯ ದಿನದಂದೂ ಸಹ ಕೋತಿಗಳ ಹಾವಳಿ ತಪ್ಪಿಸಲು ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯರಿಗೆ ಮನವಿ ಮಾಡಲಾಗಿತ್ತು.

ಮೇಲುಕೋಟೆಯಲ್ಲಿ ಮಂಗಗಳನ್ನು ಹಿಡಿಯುವ ಕಾರ್ಯಾಚರಣೆಯ ಮಾಹಿತಿ ನೀಡಿದ ಪಿಡಿಓ ರಾಜೇಶ್ವರ್ ಮತ್ತು ದೇವಾಲಯದ ಇಒ ಶೀಲಾ, ನಾಗರೀಕರು ಮತ್ತು ಭಕ್ತರ ಮನವಿಯ ಮೇರೆಗೆ ಕೋತಿಗಳ ಹಿಂಡನ್ನು ಸೆರೆ ಹಿಡಿಯಲಾಗುತ್ತಿದೆ ಕೋತಿಗಳ ಕಾಟವಿಲ್ಲದೆ ದರ್ಶನ ಮಾಡುವ ವಾತಾವರಣ ನಿರ್ಮಿಸಲು ಗ್ರಾಪಂ ಸಂಕಲ್ಪ ಮಾಡಿದೆ ಎಂದಿದ್ದಾರೆ.

ಕಾಯಕ ಗ್ರಾಮ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಪಂ ಸಿಇಓ

ಗ್ರಾ.ಪಂ.ನ ಇ-ಸ್ವತ್ತು ದಾಖಲೆಗಳು ಮತ್ತು ಅಭಿಲೇಖಾಲಯ ನಿರ್ವಹಣೆಗೆ ಮೆಚ್ಚುಗೆ


ಕಾಯಕ ಗ್ರಾಮ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಪಂ ಸಿಇಓ ನಂದಿನಿ.

ಮಂಡ್ಯ, ನ.14–ಆಯವ್ಯಯ ಘೋಷಣೆಯಂತೆ ಜಾರಿಗೊಳಿಸಲಾಗಿರುವ ಕಾಯಕ ಗ್ರಾಮ ಯೋಜನೆಗೆ ಶ್ರೀರಂಗಪಟ್ಟಣ ತಾಲೂಕಿನ ಚಿಕ್ಕಂಕನಹಳ್ಳಿ ಗ್ರಾಮ ಪಂಚಾಯತ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಂಡ್ಯ ಜಿಪಂ ಸಿಇಓ ಕೆ.ಆರ್.ನಂದಿನಿ ಚಾಲನೆ ನೀಡಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಹಿಂದುಳಿದಿರುವ ಗ್ರಾಮ ಪಂಚಾಯತ್‌ಗಳನ್ನು ಜಿಲ್ಲಾ ಮತ್ತು ತಾಲೂಕು ಮಟ್ಟದ ಹಿರಿಯ ಅಧಿಕಾರಿಗಳು ದತ್ತು ಪಡೆದು ಸಮಗ್ರವಾಗಿ ಅಭಿವೃದ್ಧಿಪಡಿಸಲು ಕ್ರಮವಹಿಸುವಂತೆ ಸರ್ಕಾರವು ಸುತ್ತೋಲೆ ಹೊರಡಿಸಿರುವ ಹಿನ್ನೆಲೆಯಲ್ಲಿ ಶುಕ್ರವಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾಯಕ ಗ್ರಾಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದೂರದೃಷ್ಟಿ ಕ್ರಿಯಾಯೋಜನೆಗಳನ್ನು ಸಿದ್ಧಪಡಿಸುವುದು, ಕಾಲ ಕಾಲಕ್ಕೆ ಸಭೆಗಳನ್ನು ಆಯೋಜಿಸುವುದು, ಕುಡಿಯುವ ನೀರು ಪೂರೈಕೆ, ಮೂಲ ಸೌಕರ್ಯ ಅಭಿವೃದ್ಧಿ, ಬೀದಿ ದೀಪಗಳ ನಿರ್ವಹಣೆ, ತೆರಿಗೆ ವಸೂಲಾತಿ, ಸಕಾಲದಲ್ಲಿ ಸೇವೆಗಳ ವಿತರಣೆ, ಕೂಸಿನ ಮನೆ ಮತ್ತು ಗ್ರಾಮ ಪಂಚಾಯತ್ ಗ್ರಂಥಾಲಯಗಳು ಹಾಗೂ ಅರಿವು ಕೇಂದ್ರಗಳ ಪ್ರಾರಂಭ, ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಅಭಿವೃದ್ಧಿ, ಮಹಿಳಾ ಸಬಲೀಕರಣ ಹಾಗೂ ಅಭಿವೃದ್ಧಿ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ, ಆರೋಗ್ಯ ನೈರ್ಮಲ್ಯ ಸೇರಿದಂತೆ 19 ಅಂಶಗಳ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಗ್ರಾಮ ಪಂಚಾಯತ್ ಕಚೇರಿಯ ದಾಖಲೆ ನಿರ್ವಹಣೆಗೆ ಮೆಚ್ಚುಗೆ: ಚಿಕ್ಕಂಕನಹಳ್ಳಿ ಗ್ರಾಮ ಪಂಚಾಯತ್ ಕಚೇರಿಗೆ ಭೇಟಿ ನೀಡಿದ ಜಿ.ಪಂ. ಸಿಇಓ ನಂದಿನಿ ಕೆ.ಆರ್. ಅವರು ಗ್ರಾಮ ಪಂಚಾಯತ್ ಅಭಿಲೇಖಾಲಯಕ್ಕೆ ಭೇಟಿ ನೀಡಿದರು. ಇ–ಸ್ವತ್ತು ವಿತರಣೆಗೆ ಸಂಬಂಧಿಸಿದಂತೆ ಕಡತಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಿರುವ ಗ್ರಾ.ಪಂ. ಸಿಬ್ಬಂದಿಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಇದೇ ಮಾದರಿಯಲ್ಲಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿಯೂ ದಾಖಲೆಗಳ ರಕ್ಷಣೆಗೆ ಕ್ರಮವಹಿಸಬೇಕು ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ದಾಖಲೆಗಳನ್ನು ಡಿಜಿಟಲೀ ಕರಣಗೊಳಿಸಲು ಕ್ರಮವಹಿಸುವಂತೆ ಪಿಡಿಓಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಶ್ರೀರಂಗಪಟ್ಟಣ ತಾಪಂ ಇಓ ಎ.ಬಿ.ವೇಣು, ಕ್ಷೇತ್ರ ಶಿಕ್ಷಣಾಧಿಕಾರಿ ನಂದೀಶ್, ಚಿಕ್ಕಂಕನಹಳ್ಳಿ ಗ್ರಾಪಂ ಅಧ್ಯಕ್ಷೆ ಚನ್ನಮ್ಮ, ಗ್ರಾಪಂ ಸದಸ್ಯರುಗಳು ಹಾಗೂ ಅಧಿಕಾರಿಗಳು ಹಾಜರಿದ್ದರು.

ನಂಜಮ್ಮ ನಿಧನ

ನಾಗಮಂಗಲ, ನ.14–ತಾಲೂಕಿನ ಸುಬ್ಬರಾಯನಕೊಪ್ಪಲು (ಹೊನ್ನಾವರ) ಗ್ರಾಮದ ಶ್ರೀಮತಿ ನಂಜಮ್ಮ ಚೆನ್ನೇಗೌಡ (82) ಶುಕ್ರವಾರ ನಿಧನರಾದರು.



ಮೃತರು ನಾಗಮಂಗಲ ತಾ. ಮೈಸೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವಿಶ್ವ ಮಂಜುಸ್ವಾಮಿ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗದವರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಾಳೆ (ನ.15) ಬೆಳಗ್ಗೆ 10 ಗಂಟೆಗೆ ಸುಬ್ಬರಾಯನಕೊಪ್ಪಲು (ಹೊನ್ನಾವರ) ಗ್ರಾಮದ ಅವರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಎನ್.ಕಿರಣ್



ಕೆ.ಆರ್.ಪೇಟೆ: ಪುರಸಭೆಯ ಮಾಜಿ ಅಧ್ಯಕ್ಷ ನಾಗರಾಜು ಅವರ ಪುತ್ರ ಕೆ.ಎನ್.ಕಿರಣ್ ಅನಾರೋಗ್ಯದಿಂದ ಇಂದು ಮುಂಜಾನೆ ನಿಧನರಾಗಿದ್ದಾರೆ. ಅವರಿಗೆ ಸುಮಾರು 28ವರ್ಷ ವಯಸ್ಸಾಗಿತ್ತು. ಕೆ.ಆರ್.ಪೇಟೆ ಪಟ್ಟಣದ ಈದ್ಗಾ ಮೈದಾನದ ಹಿಂಭಾಗದಲ್ಲಿರುವ ರಾಮಯ್ಯ ಕಾಲೋನಿಯಲ್ಲಿ ಸಾರ್ವಜನಿಕರ ದರ್ಶನಕ್ಕಾಗಿ ಪಾರ್ಥಿವ ಶರೀರವನ್ನು ಇಡಲಾಗಿತ್ತು. ಮಧ್ಯಾಹ್ನ ಪಟ್ಟಣದ ಸಾರ್ವಜನಿಕ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ಒಂದನೇ ಪುಟದಿಂದ

ಈ ಗೆಲುವು ಐಕ್ಯತೆ ಪ್ರತಿಬಿಂಬಿಸುತ್ತದೆ

ಬಹುಮತವನ್ನು ನೀಡುವ ಮೂಲಕ ನಮ್ಮ ಸರ್ಕಾರದ ಮೇಲೆ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ರಾಜ್ಯದ ಎಲ್ಲಾ ಗೌರವಾನ್ವಿತ ಮತದಾರರಿಗೆ ನಾನು ಹೃತ್ಪೂರ್ವಕ ಕೃತಜ್ಞತೆ ಮತ್ತು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿ ಜೀ ಅವರಿಂದ ಪಡೆದ ಬೆಂಬಲಕ್ಕಾಗಿ ನಾನು ಅವರಿಗೆ ವಿಶೇಷವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದು ಸಿಎಂ ನಿತೀಶ್ ಕುಮಾರ್ ಹೇಳಿದ್ದಾರೆ. ಈ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಸಂಪೂರ್ಣ ಏಕತೆಯನ್ನು ಪ್ರದರ್ಶಿಸುವ ಮೂಲಕ ಭಾರೀ ಬಹುಮತವನ್ನು ಸಾಧಿಸಿದೆ. ಈ ಬೃಹತ್ ಗೆಲುವಿಗೆ, ಎನ್‌ಡಿಎ ಮೈತ್ರಿಕೂಟದ ಎಲ್ಲಾ ಪಾಲುದಾರರಾದ ಚಿರಾಗ್ ಪಾಸ್ವಾನ್, ಜಿತನ್ ರಾಮ್ ಮಾಂಝಿ ಮತ್ತು ಉಪೇಂದ್ರ ಕುಶ್ವಾಹ ಅವರಿಗೆ ಧನ್ಯವಾದಗಳು ಮತ್ತು ಕೃತಜ್ಞತೆಗಳು ಎಂದು ಹೇಳಿದ್ದಾರೆ.

ಚುನಾವಣಾ ಫಲಿತಾಂಶ ರಾಜ್ಯಕ್ಕೆ ದಿಕ್ಸೂಚಿ

ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಒಗ್ಗಟ್ಟಾಗಿದ್ದೇವೆ. ನಾವೆಲ್ಲಾ ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ಕೆಲಸ ಮಾಡುತ್ತಿದ್ದು, ಮುಂದಿನ ಚುನಾವಣೆಯಲ್ಲಿ ಬಿಹಾರದ ದಾಖಲೆ ಮುರಿಯುವ ಫಲಿತಾಂಶ ತರುತ್ತೇವೆ ಎಂದು ತಿಳಿಸಿದರು.

ವೋಟ್ ಚೋರಿ ಎಂಬ ಸುಳ್ಳು ಪ್ರಚಾರ ಮಾಡುತ್ತಿದ್ದ ಕಾಂಗ್ರೆಸ್‌ಗೆ ಬಿಹಾರದ ಜನರು ತಕ್ಕ ಪಾಠ ಕಲಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ನಂಬಿಕೆ ಕಳೆದುಕೊಳ್ಳುವಂತೆ ಮಾಡಿದ ಅಪಪ್ರಚಾರಕ್ಕೆ ಅಲ್ಲಿನ ಜನರು ಕಿವಿಗೊಡಲಿಲ್ಲ. ಈ ಮೂಲಕ ಕಾಂಗ್ರೆಸ್‌ಗೆ ಕಪಾಳ ಮೋಕ್ಷ ಮಾಡಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದರು.

ನರೇಂದ್ರ ಮೋದಿ ಅವರ ಅಭಿವೃದ್ಧಿ ಪರ ಆಡಳಿತ ಹಾಗೂ 2047ರ ವಿಕಸಿತ ಭಾರತ ಸಾಕಾರಗೊಳಿಸುವ ದೃಢ ಸಂಕಲ್ಪಕ್ಕೆ ಬಿಹಾರ ಜನರು ಅಭೂತಪೂರ್ವ ಬೆಂಬಲ ನೀಡಿದ್ದಾರೆ ಎಂದರು.

ನರೇಂದ್ರ ಮೋದಿ ಅವರೊಂದಿಗೆ ಮೈತ್ರಿಕೂಟದ ಜಯಕ್ಕಾಗಿ ಅವಿರತ ಶ್ರಮಿಸಿದ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವರಾದ ಚಿರಾಗ್ ಪಾಸ್ವಾನ್ ಹಾಗೂ ಜಿತಿನ್ ಕುಮಾರ್ ಮಾಂಜಿ ಅವರನ್ನು ಅಭಿನಂದಿಸುತ್ತೇನೆ ಎಂದು ಕುಮಾರಸ್ವಾಮಿ ತಿಳಿಸಿದರು.

ಅರ್ಜಿ ಸಲ್ಲಿಕೆಗೆ ನಾಳೆ ಕೊನೆಯ ದಿನ

ಅದಕ್ಕಿಂತ ಹೆಚ್ಚು ಪರ್ಸೆಂಟೈಲ್ ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಮಾತ್ರ ನೋಂದಣಿ ಮಾಡಿಕೊಳ್ಳಲು ಅರ್ಹರಿರುತ್ತಾರೆ. ನೊಂದಣಿ ಶುಲ್ಕ, ದಾಖಲಾತಿ ಪರಿಶೀಲನೆಯ ವಿವರಗಳು, ದಾಖಲಾತಿ ಪರಿಶೀಲನೆಗೆ ಸಲ್ಲಿಸಬೇಕಾದ ಮೂಲ ದಾಖಲಾತಿಗಳು, ಇತರ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ದಾಖಲೆಗಳ ಪರಿಶೀಲನೆಗೆ ನ.17ರಂದು (ಬೆ.11ರಿಂದ ಮ.2) ಕೆಇಎ ಕಚೇರಿಗೆ ಮೂಲ ದಾಖಲೆಗಳೊಂದಿಗೆ ಹಾಜರಾಗಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಮಾಹಿತಿ ನೀಡಿದ್ದಾರೆ.

ಪಿಜಿಸಿಇಟಿ: ಎಂ.ಬಿ.ಎ, ಎಂ.ಸಿ.ಎ, ಎಂ.ಇ, ಎಂ.ಟೆಕ್ ಮತ್ತು ಎಂ.ಆರ್ಕ್ ಕೋರ್ಸ್‌ಗಳ ಪ್ರವೇಶಕ್ಕೆ ಮೂರನೇ ಹಾಗೂ ಅಂತಿಮ ಸುತ್ತಿನಲ್ಲಿ ಸೀಟು ಹಂಚಿಕೆಯಾದ ಅಭ್ಯರ್ಥಿಗಳಿಗೆ ಶುಲ್ಕ ಪಾವತಿ ಹಾಗೂ ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಳ್ಳಲು ನ.15ರಂದು ಮಧ್ಯಾಹ್ನ 3 ಗಂಟೆವರೆಗೆ ವಿಸ್ತರಿಸಲಾಗಿದೆ. ಅದೇ ದಿನ ಸಂಜೆ 5.30ರೊಳಗೆ ಕಾಲೇಜಿಗೆ ಪ್ರವೇಶ ಪಡೆಯಬೇಕು ಎಂದು ಪ್ರಸನ್ನ ಹೇಳಿದ್ದಾರೆ.

ರಾಜ್ಯ ಸರ್ಕಾರ ಆದೇಶ

ನೋಂದಣಿಯಾಗದ ಅಥವಾ ನಕಲಿ ವೈದ್ಯರ ವಿರುದ್ಧ ತಪಾಸಣೆ ಮತ್ತು ಕ್ರಮ ಕೈಗೊಳ್ಳಲು ವಿಶೇಷ ಕಾರ್ಯಪಡೆಯನ್ನು ರಚಿಸಲಾಗಿದೆ. ಕಾರ್ಯಪಡೆಯಲ್ಲಿ ಉಪ ಆಯುಕ್ತರು, ಹಿರಿಯ ಪೊಲೀಸ್ ಅಧಿಕಾರಿ, ಜಿಲ್ಲಾ ಆಯುಷ್ ಅಧಿಕಾರಿ, ಕರ್ನಾಟಕ ಆಯುರ್ವೇದ ಮತ್ತು ಯುನಾನಿ ಮಂಡಳಿಯ ರಿಜಿಸ್ಟ್ರಾರ್, ಜಿಲ್ಲಾ ಮಟ್ಟದ ನಾಮನಿರ್ದೇಶಿತ ವಕೀಲರು ಮತ್ತು ನಾಮನಿರ್ದೇಶಿತ ಸಮಾಜ ಸೇವಕರು ಇರಲಿದ್ದಾರೆ. ಅಪರಾಧಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವುದು ಮತ್ತು ರಾಜ್ಯ ಸರ್ಕಾರಕ್ಕೆ ಮಾಸಿಕ ವರದಿಗಳನ್ನು ಸಲ್ಲಿಸುವುದು ಈ ಕಾರ್ಯಪಡೆಯ ಕರ್ತವ್ಯವಾಗಿದೆ.

ಅರ್ಹ ವೈದ್ಯರು ಅಥವಾ ಅರೆ ವೈದ್ಯಕೀಯ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ವೈದ್ಯಕೀಯ ಸಂಸ್ಥೆಗಳ ವಿರುದ್ಧ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ, 2007 ರ ಅಡಿಯಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು. ಅಂತಹ ಸಂಸ್ಥೆಗಳು ತಕ್ಷಣ ಬಂದ್, ಮೂರು ವರ್ಷಗಳವರೆಗೆ ಜೈಲು ಶಿಕ್ಷೆ, 1 ಲಕ್ಷ ರೂ.ವರೆಗೆ ದಂಡ ಎದುರಿಸಲಿವೆ ಎಂದು ತಿಳಿಸಲಾಗಿದೆ. ಜಿಲ್ಲಾಧಿಕಾರಿ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯು ನಿಯಮ ಉಲ್ಲಂಘಿಸುವವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಬಿಹಾರದಲ್ಲಿ ಎನ್‌ಡಿಎ ಪಾರುಪತ್ಯ

ಪಕ್ಷವಾಗಿ ಹೊರ ಹೊಮ್ಮಿದ್ದು, ಮುಖ್ಯಮಂತ್ರಿ ನಿತಿಶ್‌ಕುಮಾರ್ ಅವರ ಜೆಡಿಯು 85 ಸ್ಥಾನಗಳಲ್ಲಿ ಜಯಗಳಿಸಿದೆ. ಇದೇ ಮೈತ್ರಿಕೂಟದಲ್ಲಿರುವ ದಿವಂಗತ ರಾಮ ವಿಲಾಸ್ ಪಾಸ್ವಾನ್ ಅವರ ಪುತ್ರ ಹಾಗೂ ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ರವರ ಎಲ್‌ಜೆಪಿ 19 ಸ್ಥಾನಗಳನ್ನು ಗೆದ್ದಿದ್ದರೆ, ಹೆಚ್‌ಎಎಂ ಐದು ಮತ್ತು ಆರ್‌ಎಲ್‌ಎಂ ನಾಲ್ಕು ಸ್ಥಾನ ಸೇರಿ ಎನ್‌ಡಿಎ 202 ಸ್ಥಾನಗಳಲ್ಲಿ ಗೆದ್ದು ಬೀಗಿದೆ.

2020ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ 74, ಜೆಡಿಯು 43 ಸೇರಿದಂತೆ ಎನ್‌ಡಿಎ ಮೈತ್ರಿ ಕೂಟ 125 ಸ್ಥಾನಗಳನ್ನು ಪಡೆದು ಸರ್ಕಾರ ರಚಿಸಿತ್ತು. ಆದರೆ, ಈ ಬಾರಿ ಬಿಜೆಪಿ ಮತ್ತು ಜೆಡಿಯು ತಮ್ಮ ಕ್ಷೇತ್ರಗಳನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿವೆ. ವಿಶೇಷವೆಂದರೆ 2020ರಲ್ಲಿ ಎನ್‌ಡಿಎಯಿಂದ ಹೊರಗಿದ್ದು, ಸ್ಪರ್ಧಿಸಿದ್ದ ಚಿರಾಗ್ ಪಾಸ್ವಾನ್ ನೇತೃತ್ವದ ಎಲ್‌ಜೆಪಿ ಕೇವಲ ಒಂದೇ ಒಂದು ಸ್ಥಾನ ಪಡೆದಿತ್ತು. ಆದರೆ, ಈ ಬಾರಿ 19 ಸ್ಥಾನಗಳನ್ನು ಪಡೆದು ಬೀಗುತ್ತಿದೆ.

2020ರ ಚುನಾವಣೆಯಲ್ಲಿ 75 ಸ್ಥಾನಗಳನ್ನು ಪಡೆದಿದ್ದ ಆರ್‌ಜೆಡಿ, ಈ ಬಾರಿ ಕೇವಲ 25 ಸ್ಥಾನಕ್ಕೆ ಕುಸಿದಿದೆ. ಅದೇ ವೇಳೆ 19 ಸ್ಥಾನ ಪಡೆದಿದ್ದ ಕಾಂಗ್ರೆಸ್ ಕೇವಲ ಆರು ಸ್ಥಾನಗಳೊಂದಿಗೆ ಹೀನಾಯವಾಗಿ ಸೋಲನನುಭವಿಸಿದೆ. ಈ ಮೈತ್ರಿಕೂಟದಲ್ಲಿದ್ದ ಎಡಪಕ್ಷಗಳು 4 ಸ್ಥಾನಗಳಲ್ಲಿ ಗೆಲುವು ಸಾಧಿಸಿದರು.

ಬಿಹಾರದಲ್ಲಿ ವಿಐಪಿ ಪಕ್ಷದ ಮುಖ್ಯಶ್ ಸಾಹ್ನಿ ಅವರನ್ನು ಉಪ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಮಹಾಘಟಬಂಧನ್ ಘೋಷಿಸಿತ್ತು. ಆದರೆ, ಈ ಪಕ್ಷ ಸ್ಪರ್ಧಿಸಿದ್ದ 12 ಕ್ಷೇತ್ರಗಳಲ್ಲೂ ಸೋಲನನುಭವಿಸಿದೆ. ಅದೇ ವೇಳೆ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸಲ್ಪಟ್ಟ ತೇಜಸ್ವಿ ಯಾದವ್, ಪ್ರಯಾಸದಿಂದ ಗೆಲುವು ಸಾಧಿಸಿದ್ದಾರೆ.

> ನಾವು ಬಿಹಾರದ ಜನರ ನಿರ್ಧಾರವನ್ನು ಗೌರವಿಸುತ್ತೇವೆ ಮತ್ತು ಸಾಂವಿಧಾನಿಕ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವಲ್ಲಿ ತೊಡಗಿರುವ ಶಕ್ತಿಗಳ ವಿರುದ್ಧ ನಮ್ಮ ಹೋರಾಟವನ್ನು ಮುಂದುವರಿಸುತ್ತೇವೆ. ಚುನಾವಣಾ ಫಲಿತಾಂಶಗಳ ಕೂಲಂಕುಷ ಅಧ್ಯಯನವನ್ನು ನಡೆಸುತ್ತೇವೆ ಮತ್ತು ಫಲಿತಾಂಶಗಳ ಕಾರಣಗಳನ್ನು ಅರ್ಥಮಾಡಿಕೊಂಡ ನಂತರ ವಿವರವಾದ ದೃಷ್ಟಿಕೋನವನ್ನು ಪ್ರಸ್ತುತಪಡಿಸುತ್ತೇವೆ. ಮಹಾಮೈತ್ರಿಕೂಟವನ್ನು ಬೆಂಬಲಿಸಿದ ಬಿಹಾರದ ಮತದಾರರಿಗೆ ನಾವು ಕೃತಜ್ಞರಾಗಿರುತ್ತೇವೆ. ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತರಿಗೂ ನಾನು ಹೇಳುವುದೇನೆಂದರೆ, ನೀವು ನಿರುತ್ಸಾಹಗೊಳ್ಳುವ ಅಗತ್ಯವಿಲ್ಲ. ನಮ್ಮ ಹೆಮ್ಮೆ, ಗೌರವ ಮತ್ತು ಕೀರ್ತಿ. ನಿಮ್ಮ ಕಠಿಣ ಪರಿಶ್ರಮವೇ ನಮ್ಮ ಶಕ್ತಿ. ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ನಾವು ಯಾವುದೇ ಅವಕಾಶವನ್ನು ಬಿಟ್ಟುಕೊಡುವುದಿಲ್ಲ. ಜನರ ನಡುವೆಯೇ ಉಳಿಯುವ ಮೂಲಕ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸುವ ಹೋರಾಟವನ್ನು ಮುಂದುವರಿಸುತ್ತೇವೆ.
>
> -ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಈ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದಲ್ಲಿ ಬಿಜೆಪಿ, ಮುಖ್ಯಮಂತ್ರಿ ನಿತೀಶ್‌ಕುಮಾರ್ ನೇತೃತ್ವದ ಜೆಡಿಯು, ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಅವರ ಎಲ್‌ಜೆಪಿ, ಕೇಂದ್ರ ಸಚಿವ ಜಿತನ್ ರಾಂ ಮಾಂಝಿ ಅವರ ಹೆಚ್‌ಎಎಂ, ರಾಜ್ಯಸಭಾ ಸದಸ್ಯ ಉಪೇಂದ್ರ ಕುಶ್ವಾಹ ಅವರ ಆರ್‌ಎಲ್‌ಎಂ ಒಳಗೊಡರೆ, ಮತ್ತೊಂದೆಡೆ ಮಹಾಘಟಬಂಧನ್ ಕಾಂಗ್ರೆಸ್, ಆರ್‌ಜೆಡಿ, ವಿಐಪಿ, ಸಿಪಿಐ–ಎಂಎಲ್, ಸಿಪಿಐಎಂ, ಸಿಪಿಐ ಒಳಗೊಂಡಿತ್ತು.

ಎನ್‌ಡಿಎ ಪರವಾಗಿ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಮಹಾಘಟಬಂಧನ್ ಪರವಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬಿರುಸಿನ ಪ್ರಚಾರ ನಡೆಸಿದ್ದರು. ರಾಹುಲ್ ಗಾಂಧಿ, ಬಿಹಾರದ 25 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ 110 ಕ್ಷೇತ್ರಗಳಲ್ಲಿ ಪ್ರಚಾರ ಮಾಡಿದ್ದರು. ವಿಚಿತ್ರವೆಂದರೆ ಅವರ ಪ್ರಚಾರ ಮಾಡಿದ ಯಾವುದೇ ಕ್ಷೇತ್ರದಲ್ಲೂ ಕಾಂಗ್ರೆಸ್ ಗೆಲುವು ಸಾಧಿಸಿಲ್ಲ. ಅವರು ಒಟ್ಟು 1300 ಕಿಲೋಮೀಟರ್ ಪ್ರವಾಸ ಮಾಡಿದ್ದರು.

ಎನ್‌ಡಿಎ ಕೈಹಿಡಿದ ಗ್ಯಾರಂಟಿ: ಬಿಹಾರ ಚುನಾವಣೆಯಲ್ಲಿ ಕರ್ನಾಟಕ ಕಾಂಗ್ರೆಸ್ ಮಾಡೆಲ್ ಎನ್‌ಡಿಎ ಅನುಸರಿಸಿತ್ತು.. 2023ರಲ್ಲಿ ಪಂಚ ಗ್ಯಾರಂಟಿಗಳನ್ನು ನೀಡಿ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರದ ಗದ್ದುಗೆ ಹಿಡಿದಿತ್ತು. ವಿಶೇಷವೆಂದರೆ, ಇದೇ ಗ್ಯಾರಂಟಿಗಳನ್ನು ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟ ಜಾರಿಗೆ ತರುವ ಮೂಲಕ ಮತದಾರರನ್ನು ತನ್ನತ್ತ ಸೆಳೆದಿದೆ.

ಹಾಲಿ ಮುಖ್ಯಮಂತ್ರಿ ನಿತೀಶ್‌ಕುಮಾರ್ ಅವರು ತಮ್ಮ ಸರ್ಕಾರದಿಂದ ಬಿಹಾರದ ಮಹಿಳೆಯರ ಖಾತೆಗಳಿಗೆ ಒಮ್ಮೆಲೇ 10 ಸಾವಿರ ರೂ. ಜಮೆ ಮಾಡಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡಿದ್ದರೆ, ಬಿಹಾರದಲ್ಲಿ ನಿತೀಶ್ ಕುಮಾರ್ ಪ್ರತಿ ಮನೆಗೆ 125 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುವ ಭರವಸೆ ಕೊಟ್ಟಿದ್ದಲ್ಲದೇ, ವೃದ್ಧರಿಗೆ ಪಿಂಚಣಿ 4 ಸಾವಿರದಿಂದ ಐದು ಸಾವಿರ ರೂಗಳಿಗೆ ಹೆಚ್ಚಿಸುವ ಭರವಸೆ ನೀಡಿದ್ದರು.

30 ವರ್ಷದಿಂದ ನಿತೀಶ್ ಕುಮಾರ್ ವಿಧಾನಸಭಾಗೆ ಸ್ಪರ್ಧಿಸಿಲ್ಲ!

ನವದೆಹಲಿ, ನ.14– ಬಿಹಾರದ ಅತ್ಯಂತ ದೀರ್ಘಾವಧಿಯ ಮುಖ್ಯಮಂತ್ರಿ ನಿತೀಶ್ ಕುಮಾರ್ ಅಚ್ಚರಿ ಎನ್ನುವಂತೆ ವಿಧಾನಸಭಾ ಚುನಾವಣೆಗಳಿಂದ ದೂರ ಉಳಿದಿದ್ದಾರೆ. ಅವರು ಕೊನೆಯ ಬಾರಿಗೆ 1985ರಲ್ಲಿ ಶಾಸಕರಾಗಿ ಸೇವೆ ಸಲ್ಲಿಸಿದರು ಮತ್ತು ಅಂದಿನಿಂದ ಒಮ್ಮೆ ಮಾತ್ರ ವಿಧಾನಸಭಾ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ. 1995ರಲ್ಲಿ ಹರ್ನೌತ್‌ನಲ್ಲಿನ ಆ ಸ್ಥಾನವನ್ನು ಉಳಿಸಿಕೊಳ್ಳಲಿಲ್ಲ, ಬದಲಿಗೆ ಲೋಕಸಭಾ ಸಂಸದರಾಗಿ ಮುಂದುವರಿಯಲು ಆಯ್ಕೆ ಮಾಡಿಕೊಂಡರು. ಸುಮಾರು ಮೂರು ದಶಕಗಳಿಂದ ಅವರು ರಾಜ್ಯ ವಿಧಾನಸಭೆಯ ಸದಸ್ಯರಾಗಿ ಉಳಿಯಲು ನಿರಂತರವಾಗಿ ವಿಧಾನ ಪರಿಷತ್ತಿನ ಮಾರ್ಗವನ್ನು ಆರಿಸಿಕೊಂಡಿರುವುದು ಅಚ್ಚರಿ ಮೂಡಿಸಿದೆ.



ಬಿಹಾರ ವಿಧಾನಸಭೆಯ ಯಾವುದೇ ಸದನದ ಸದಸ್ಯರಾಗದೆಯೇ 2000ರಲ್ಲಿ ನಿತೀಶ್ ಮೊದಲ ಬಾರಿಗೆ ಮುಖ್ಯಮಂತ್ರಿಯಾದರು. ಸಕಾಲದಲ್ಲಿ ಸ್ಥಾನ ಪಡೆಯಲು ಸಾಧ್ಯವಾಗದೆ ಎಂಟು ದಿನಗಳಲ್ಲಿ ರಾಜೀನಾಮೆ ನೀಡಿದರು. 2005ರಲ್ಲಿ ಅವರು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸದೆಯೇ ಮತ್ತೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು. ನಂತರ ವಿಧಾನ ಪರಿಷತ್ತಿನ ಸದಸ್ಯರಾದರು. ಅಂದಿನಿಂದ ಅವರು ಈ ಮಾದರಿಯನ್ನು ಅನುಸರಿಸುತ್ತಿದ್ದಾರೆ.

ಜನವರಿ 2012ರಲ್ಲಿ ಪರಿಷತ್ತಿನ ಶತಮಾನೋತ್ಸವದ ಸಂದರ್ಭದಲ್ಲಿ ಮಾತನಾಡಿದ ನಿತೀಶ್, ನಾನು ಎಂಎಲ್‌ಸಿ ಆಗಲು ಆಯ್ಕೆ ಮಾಡಿಕೊಂಡಿದ್ದು ಯಾವುದೇ ಬಲವಂತದಿಂದಲ್ಲ, ಬದಲಾಗಿ ಸ್ವಂತ ಇಚ್ಛೆಯಿಂದ. ಮೇಲ್ಮನೆ ಗೌರವಾನ್ವಿತ ಸಂಸ್ಥೆಯಾಗಿದೆ. ಪರಿಷತ್ತಿಗೆ ಮರುಚುನಾವಣೆಗೆ ಪ್ರಯತ್ನಿಸುವುದನ್ನು ಮುಂದುವರಿಸುವುದಾಗಿಯೂ ಹೇಳಿದರು. 2015ರ ಚುನಾವಣೆಗೆ ಮುನ್ನ, ಅವರು ತಮ್ಮ ಗಮನವನ್ನು ಒಂದೇ ಕ್ಷೇತ್ರಕ್ಕೆ ಸೀಮಿತಗೊಳಿಸಲು ಬಯಸದ ಕಾರಣ ಅವರು ವಿಧಾನಸಭಾ ಸ್ಥಾನಕ್ಕೆ ಸ್ಪರ್ಧಿಸುವುದಿಲ್ಲ ಎಂದು ಮತ್ತೊಮ್ಮೆ ಸ್ಪಷ್ಟಪಡಿಸಿದರು. ನಿತೀಶ್ ಕುಮಾರ್ 2018ರಲ್ಲಿ ಸತತ ಮೂರನೇ ಅವಧಿಗೆ ವಿಧಾನ ಪರಿಷತ್ತಿಗೆ ಮರಳಿದರು, ಆ ಅವಧಿ 2024ರಲ್ಲಿ ಕೊನೆಗೊಂಡಿತು. ಅವರು ಮಾರ್ಚ್ 2024ರಲ್ಲಿ ಮತ್ತೊಂದು ಅವಧಿಯನ್ನು ಪಡೆದುಕೊಂಡರು, ಪರಿಷತ್ತಿನಲ್ಲಿ ಅವರ ಸದಸ್ಯತ್ವ ಮೇ 2030ಕ್ಕೆ ಅಂತ್ಯಗೊಳ್ಳುತ್ತದೆ.

ಗೆದ್ದು ಸೋತ ತೇಜಸ್ವಿ ಯಾದವ್: ಲಾಲು ಮತ್ತೊಬ್ಬ ಪುತ್ರನಿಗೆ ಸೋಲಿನ ಕಹಿ

ಪಾಟ್ನಾ (ಬಿಹಾರ): ಆರ್‌ಜೆಡಿ ಪಕ್ಷದ ನಾಯಕ, ಮಹಾಘಟಬಂಧನ ಮೈತ್ರಿ ಕೂಟದ ಸಿಎಂ ಅಭ್ಯರ್ಥಿ ತೇಜಸ್ವಿ ಯಾದವ್ ಬಿಹಾರ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ. ರಘೋಪೂರ್ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ತೇಜಸ್ವಿ ಯಾದವ್, ಬಿಜೆಪಿ ಅಭ್ಯರ್ಥಿ ಸತೀಶ್‌ಕುಮಾರ್ ವಿರುದ್ಧ 13 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.


ತೇಜಸ್ವಿ ಯಾದವ್

ಸಿಎಂ ಅಭ್ಯರ್ಥಿಗೆ ಭಾರೀ ಮುಖಭಂಗ: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಅಭೂತಪೂರ್ವ ಗೆಲುವು ಸಾಧಿಸುವ ಮೂಲಕ ಮತ್ತೊಮ್ಮೆ ಬಿಹಾರದ ಗದ್ದುಗೆ ಹಿಡಿದಿದೆ. ಮಹಾಘಟಬಂಧನ ಮೈತ್ರಿಕೂಟ ಸಿಎಂ ಅಭ್ಯರ್ಥಿ ಹರಸಹಾಸಪಟ್ಟು 13,880 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಚುನಾವಣೆಗೂ ಮುನ್ನ ಈ ಚುನಾವಣೆಯಲ್ಲಿ ಗೆದ್ದರೇ ಸರ್ಕಾರ ರಚಿಸುತ್ತೇವೆ ಎಂದಿದ್ದ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್‌ಗೆ ಬಿಹಾರ ಜನರು ನೀಡಿದ ತೀರ್ಪು ನುಂಗಲಾರದ ತುತ್ತಾಗಿ ಪರಿಣಮಿಸಿದ್ದು, ತೀವ್ರ ಮುಖಭಂಗ ಅನುಭವಿಸಿ ಮೌನಕ್ಕೆ ಶರಣಾಗಿದ್ದಾರೆ.


ತೇಜ್ ಪ್ರತಾಪ್

ಕುಟುಂಬ ತೊರೆದಿದ್ದ ತೇಜ್‌ಪ್ರತಾಪ್ ಸೋಲು: ವೈಯಕ್ತಿಕ ಕಾರಣಗಳಿಂದ ಕುಟುಂಬದಿಂದ ಬೇರೆಯಾಗಿ ಹೊಸ ಪಕ್ಷ ಕಟ್ಟಿ ಚುನಾವಣೆ ಅಖಾಡಕ್ಕೆ ಇಳಿದಿದ್ದ ಲಾಲೂ ಪ್ರಸಾದ್ ಯಾದವ್ ಮತ್ತೊಬ್ಬ ಪುತ್ರ ತೇಜ್‌ಪ್ರತಾಪ್ ಯಾದವ್ ಸೋಲು ಅನುಭವಿಸಿದ್ದಾರೆ. ಕುಟುಂಬದಿಂದ ಬೇರ್ಪಟ್ಟ ನಂತರ ಜನಶಕ್ತಿ ಜನತಾ ಪಾರ್ಟಿ ಸ್ಥಾಪಿಸಿ ಮಹುವಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ತೇಜ್‌ಪ್ರತಾಪ್ ಯಾದವ್ ಅವರು ಭಾರೀ ಅಂತರಗಳಿಂದ ಸೋಲು ಕಂಡಿದ್ದಾರೆ.

ಸಾಲುಮರದ ತಿಮ್ಮಕ್ಕ ಇನ್ನಿಲ್ಲ

ಅಕ್ಟೋಬರ್ 3ರಂದು ಅಪೋಲೋ ಆಸ್ಪತ್ರೆಗೆ ಸಾಲುಮರದ ತಿಮ್ಮಕ್ಕರನ್ನು ದಾಖಲಿಸಲಾಗಿತ್ತು. ಅಲ್ಲಿಂದಲೂ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಪ್ರಶಸ್ತಿಗಳು: ರಾಷ್ಟ್ರೀಯ ಪೌರ ಪ್ರಶಸ್ತಿ (1995), ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ (1997), ವೀರಚಕ್ರ ಪ್ರಶಸ್ತಿ (1997), ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಮಾನ್ಯತೆ ಪಡೆದ ಪ್ರಮಾಣ ಪತ್ರ, ಭಾರತೀಯ ವೃಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು ಇವರಿಂದ ಶ್ಲಾಘನೆಯ ಪ್ರಮಾಣ ಪತ್ರ, ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ (2000), ಗಾಡ್‌ಫ್ರಿ ಫಿಲಿಪ್ಸ್ ಧೀರತೆ ಪ್ರಶಸ್ತಿ (2009), ಪಂಪಾಪತಿ ಪರಿಸರ ಪ್ರಶಸ್ತಿ, ಬಾಬಾಸಾಹೇಬ್ ಅಂಬೇಡ್ಕರ್ ಪ್ರಶಸ್ತಿ, ವನಮಾತೆ ಪ್ರಶಸ್ತಿ, ಮಾಗಡಿ ವ್ಯಕ್ತಿ ಪ್ರಶಸ್ತಿ, ಶ್ರೀಮಾತಾ ಪ್ರಶಸ್ತಿ, ಹೆಚ್. ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿ ಕರ್ನಾಟಕ ಪರಿಸರ ಪ್ರಶಸ್ತಿ, ಮಹಿಳಾ ರತ್ನ ಪ್ರಶಸ್ತಿ, ನ್ಯಾಷನಲ್ ಸಿಟಿಜನ್ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಹೂವಿನಹೊಳೆ ಪ್ರತಿಷ್ಠಾನ ವೇಬ್ಯಾಕ್ ಮೆಷಿನ್‌ನಲ್ಲಿ. ದ ವಿಶ್ವಾತ್ಮ ಪುರಸ್ಕಾರ (2015), ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಿಂದ ವಿಶಾಲಾಕ್ಷಿ ಪ್ರಶಸ್ತಿ, 'ನಾಡೋಜ' ಪ್ರಶಸ್ತಿ (2010), ಪದ್ಮಶ್ರೀ ಪ್ರಶಸ್ತಿ (2016), ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ (2020).

ಯುವಜನರು ಎಂಬ ಹೊಸ ಸೂತ್ರ ನೀಡಿದೆ

ಸ್ಥಾನಗಳಲ್ಲಿ ಸುಮಾರು 202 ಸ್ಥಾನಗಳನ್ನು ಗೆಲ್ಲುತ್ತದೆ ಮತ್ತು ತೇಜಸ್ವಿ ಯಾದವ್ ನೇತೃತ್ವದ ಮಹಾಘಟಬಂಧನ್ ಅನ್ನು 35 ಸ್ಥಾನಕ್ಕೆ ಸೀಮಿತಗೊಳಿಸುವುದರೊಂದಿಗೆ ರಾಜ್ಯದಲ್ಲಿ ಮತ್ತೊಮ್ಮೆ ಎನ್‌ಡಿಎ ಸರ್ಕಾರ ರಚನೆಗೆ ಸಜ್ಜಾಗಿದೆ.

ಈ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಮೋದಿ, 'ನಾನು ಜಂಗಲ್ ರಾಜ್ ಮತ್ತು ಕಟ್ಟಾ ಸರ್ಕಾರ್ ಬಗ್ಗೆ ಮಾತನಾಡುತ್ತಿದ್ದಾಗ, ಆರ್‌ಜೆಡಿ ಪಕ್ಷವು ಯಾವುದೇ ಆಕ್ಷೇಪಣೆಗಳನ್ನು ವ್ಯಕ್ತಪಡಿಸಲಿಲ್ಲ. ಆದರೆ, ಇದು ಕಾಂಗ್ರೆಸ್ ಅನ್ನು ಅಸಮಾಧಾನಗೊಳಿಸಿತು. ಇಂದು, ಕಟ್ಟಾ ಸರ್ಕಾರ ಎಂದಿಗೂ ಬಿಹಾರಕ್ಕೆ ಹಿಂತಿರುಗುವುದಿಲ್ಲ ಎಂದು ನಾನು ಪುನರುಚ್ಚರಿಸಲು ಬಯಸುತ್ತೇನೆ' ಎಂದಿದ್ದಾರೆ. 'ಬಿಹಾರದ ಜನರು ಅಭಿವೃದ್ಧಿ ಹೊಂದಿದ ಬಿಹಾರಕ್ಕೆ ಮತ ಹಾಕಿದ್ದಾರೆ, ಅವರು ಸಮೃದ್ಧ ಬಿಹಾರಕ್ಕೆ ಮತ ಹಾಕಿದ್ದಾರೆ. ಚುನಾವಣಾ ಪ್ರಚಾರದ ಸಮಯದಲ್ಲಿ, ನಾನು ಬಿಹಾರದ ಜನರನ್ನು ದಾಖಲೆಯ ಮತದಾನಕ್ಕಾಗಿ ಒತ್ತಾಯಿಸಿದ್ದೆ. ಅದಕ್ಕೆ ಬೆಂಬಲಿಸಿದ ಜನರು ಎಲ್ಲಾ ದಾಖಲೆಗಳನ್ನು ಮುರಿದಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು' ಎಂದು ಮೋದಿ ಹೇಳಿದ್ದಾರೆ. 'ನಾವು ಜನರ ಸೇವಕರು. ನಮ್ಮ ಕಠಿಣ ಪರಿಶ್ರಮದ ಮೂಲಕ ಜನರ ಹೃದಯಗಳನ್ನು ಗೆಲ್ಲುತ್ತಲೇ ಇದ್ದೇವೆ, ಅದಕ್ಕಾಗಿಯೇ ಇಡೀ ಬಿಹಾರವು 'ಫಿರ್ ಏಕ್ ಬಾರ್ ಎನ್‌ಡಿಎ ಸರ್ಕಾರ್' (ಮತ್ತೊಂದು ಬಾರಿ ಎನ್‌ಡಿಎ ಸರ್ಕಾರ) ಎಂದು ಹೇಳಿದೆ' ಎಂದು ಮೋದಿ ಹೇಳಿದ್ದಾರೆ.

ಮೊಕಾಮಾದಲ್ಲಿ ಕೊಲೆ ಆರೋಪಿ ಅನಂತ್ ಸಿಂಗ್ ಭರ್ಜರಿ ಗೆಲುವು



ಪಾಟ್ನಾ, ನ.14– ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಪಾಟ್ನಾದ ಮೊಕಾಮಾ ಸ್ಥಾನದಲ್ಲಿ ಜನತಾ ದಳ ಯುನೈಟೆಡ್ (ಜೆಡಿಯು) ಅಭ್ಯರ್ಥಿ ಅನಂತ್ ಸಿಂಗ್ ಗೆಲುವು ಸಾಧಿಸಿದ್ದಾರೆ.

ಪ್ರಮುಖ ಪ್ರತಿಸ್ಪರ್ಧಿ, ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಅಭ್ಯರ್ಥಿ ವೀಣಾ ದೇವಿ ವಿರುದ್ಧ 28,206 ಮತಗಳಿಂದ ಅನಂತ್ ಸಿಂಗ್ ಗೆಲುವು ಸಾಧಿಸಿದ್ದಾರೆ. ವೀಣಾ ದೇವಿ ಅನಂತ್‌ಸಿಂಗ್ ಅವರ ಪ್ರತಿಸ್ಪರ್ಧಿ 'ಬಾಹುಬಲಿ' ಸೂರಜ್ ಭನ್ ಸಿಂಗ್ ಅವರ ಪತ್ನಿಯಾಗಿದ್ದಾರೆ.

ಚುನಾವಣಾ ಆಯೋಗದ ಪ್ರಕಾರ ಅನಂತ್‌ಸಿಂಗ್ 91,416 ಮತಗಳನ್ನು ಗಳಿಸುವಲ್ಲಿ ಯಶಸ್ವಿಯಾದರೆ, ದೇವಿ 63,210 ಮತಗಳನ್ನು ಗಳಿಸಿದರು. ಜನ ಸುರಾಜ್ ಪಕ್ಷದ (ಜೆಎಸ್‌ಪಿ) ಬೆಂಬಲಿಗನ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾದ ನಂತರ ಜೆಡಿಯು ನಾಯಕ ಅನಂತ್ ಸಿಂಗ್ ಜೈಲಿನಲ್ಲಿದ್ದಾರೆ. ಸಿಂಗ್ ಮತ್ತು ದೇವಿ ನಂತರ ಅಗ್ರ ಮೂರು ಅಭ್ಯರ್ಥಿಗಳಲ್ಲಿ ಒಬ್ಬರಾದ ಜೆಎಸ್‌ಪಿಯ ಪ್ರಿಯದರ್ಶಿ ಪಿಯೂಷ್ 19,365 ಮತಗಳೊಂದಿಗೆ ಮೂರನೇ ಸ್ಥಾನ ಪಡೆದಿದ್ದಾರೆ.

ಸಿಂಗ್ ಅವರ ಬಿಡುಗಡೆಯನ್ನು ನಿರೀಕ್ಷಿಸುತ್ತಿರುವ ಅವರ ಕ್ಷೇತ್ರದಲ್ಲಿ ಜೈಲ್ ಕಾ ಫಾಟಕ್ ಟೂಟೇಗಾ, ಹಮಾರಾ ಶೇರ್ ಚೂಟೇಗಾ (ಜೈಲು ದ್ವಾರಗಳು ಮುರಿಯುತ್ತವೆ, ನಮ್ಮ ಸಿಂಹವನ್ನು ಬಿಡುಗಡೆ ಮಾಡಲಾಗುತ್ತದೆ) ಎಂಬ ಪೋಸ್ಟರ್‌ಗಳು ಕಾಣಿಸಿಕೊಂಡಿವೆ.

ಐದು ಬಾರಿ ಮೊಕಾಮಾ ಸ್ಥಾನವನ್ನು ಗೆದ್ದಿರುವ ಸಿಂಗ್, 2005ರಲ್ಲಿ ವಿಧಾನಸಭೆಗೆ ಪಾದಾರ್ಪಣೆ ಮಾಡಿದರು. ಜೆಡಿಯು ಪಕ್ಷದಿಂದ ಸ್ಪರ್ಧಿಸಿದ ಸಿಂಗ್, 2010ರಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಂಡರು. ಆದರೆ ಐದು ವರ್ಷಗಳ ನಂತರ ಪಕ್ಷವನ್ನು ತೊರೆದರು. 2015ರಲ್ಲಿ, ಅವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜೆಡಿಯು ಅಭ್ಯರ್ಥಿಯನ್ನು ಸೋಲಿಸಿದರು. 2020ರ ಚುನಾವಣೆಗೆ ಮೊದಲು ಅವರು ಆರ್‌ಜೆಡಿಗೆ ಬದಲಾದರು ಮತ್ತು ಮತ್ತೆ ತಮ್ಮ ಸ್ಥಾನವನ್ನು ಉಳಿಸಿಕೊಂಡರು.

ಸಿಂಗ್ ವಿರುದ್ಧ 28 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದು, ಶಸ್ತ್ರಾಸ್ತ್ರ ಪ್ರಕರಣದಲ್ಲಿ ಶಿಕ್ಷೆಗೊಳಗಾದ ನಂತರ 2022ರಲ್ಲಿ ತಮ್ಮ ವಿಧಾನಸಭಾ ಸದಸ್ಯತ್ವವನ್ನು ಕಳೆದುಕೊಂಡರು. ಅವರ ಪತ್ನಿ ನೀಲಂ ದೇವಿ ಉಪಚುನಾವಣೆಯಲ್ಲಿ ಸ್ಪರ್ಧಿಸಿ ಮೊಕಾಮಾವನ್ನು ಉಳಿಸಿಕೊಂಡರು. ನ.2ರಂದು ದರೋಡೆಕೋರರಿಂದ ರಾಜಕಾರಣಿಯಾಗಿ ಬದಲಾದ ದುಲಾರ್ ಚಂದ್ ಯಾದವ್ ಅವರ ಹತ್ಯೆಗೆ ಸಂಬಂಧಿಸಿದಂತೆ ಅನಂತ್‌ಸಿಂಗ್ ಅವರನ್ನು ಬಂಧಿಸಲಾಯಿತು. ಪ್ರಶಾಂತ್ ಕಿಶೋರ್ ಅವರ ಜೆಎಸ್‌ಪಿಯಿಂದ ಸ್ಪರ್ಧಿಸುತ್ತಿರುವ ಪ್ರಿಯದರ್ಶಿ ಪಿಯೂಷ್ ಪರ ಪ್ರಚಾರ ಮಾಡುವಾಗ ಅವರು ಕೊಲ್ಲಲ್ಪಟ್ಟರು.

ಮೈಸೂರಲ್ಲಿ 40.69 ಕೋಟಿಗೂ ಅಧಿಕ ವಿದ್ಯುತ್ ಬಿಲ್ ಬಾಕಿ

ತುರ್ತು ಸೇವೆ ಹೊರತುಪಡಿಸಿ ಉಳಿದ ಬಾಕಿದಾರರ ಕರೆಂಟ್ ಕಟ್

ಮೈಸೂರು, ನ.14(ಪಿಎಂ)– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚೆಸ್ಕಾಂ), ವಿದ್ಯುತ್ ಬಿಲ್ ಬಾಕಿ ವಸೂಲಿಗಾಗಿ ವಿಶೇಷ ಅಭಿಯಾನ ಆರಂಭಿಸಿದ್ದು, 5 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಶುಕ್ರವಾರ (ನ.14)ಬೆಳಿಗ್ಗೆ 8 ಗಂಟೆಯಿಂದ ವಿದ್ಯುತ್ ಬಿಲ್ ಬಾಕಿ ವಸೂಲಿಗಿಳಿದಿದ್ದಾರೆ ಎಂದು ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್‌ರಾಜು ತಿಳಿಸಿದ್ದಾರೆ.

ಒಟ್ಟು 8,053 ಸಂಪರ್ಕಗಳಿಂದ ಬರೋಬ್ಬರಿ 40.69 ಕೋಟಿಗೂ ಅಧಿಕ ಬಿಲ್ ಬಾಕಿ ಇದ್ದು, ಇವುಗಳಲ್ಲಿ ಗೃಹ, ವಾಣಿಜ್ಯ, ಕೈಗಾರಿಕಾ ಗ್ರಾಹಕರು ಅಲ್ಲದೆ ಸರ್ಕಾರಿ ವಿವಿಧ ಇಲಾಖೆಗಳೂ ಸೇರಿವೆ. 2025ರ ಅಕ್ಟೋಬರ್ ಅಂತ್ಯದ ವೇಳೆಗೆ ಸಂಸ್ಥೆಯ ಸರಾಸರಿ ಆದಾಯ ವಸೂಲಿ ದಕ್ಷತೆ 94.10 ಶೇಕಡ ದಾಖಲಾಗಿದೆ. ಹಿಂದಿನ ಅವಧಿಗೆ ಹೋಲಿಸಿದರೆ ಶೇ. 0.82ರಷ್ಟು ಕುಸಿತವಾಗಿದೆ. ವಾರ್ಷಿಕ ಬೇಡಿಕೆಯ ಕೇವಲ ಶೇ. 97ರಷ್ಟು ಮಾತ್ರ ವಸೂಲಿ ಆಗುತ್ತಿರುವುದರಿಂದ ಪ್ರತಿ ವರ್ಷ 150 ರೂ ಕೋಟಿ ರೂನಿಂದ 175 ಕೋಟಿ ರೂವರೆಗೆ ಕೊರತೆ ಉಂಟಾಗುತ್ತಿದೆ ಈ ನಿಟ್ಟಿನಲ್ಲಿ ನಿಗಮದಿಂದ ಬಾಕಿ ವಸೂಲಿಗಾಗಿ ವಿಶೇಷ ಅಭಿಯಾನ ನಡೆಸಲಾಗುತ್ತಿದೆ ಎಂದರು.

ನಿಯಮಾನುಸಾರ, ಅಗತ್ಯ ಸೇವೆಗಳನ್ನು ಹೊರತುಪಡಿಸಿ, ಬಾಕಿ ಪಾವತಿಸದೆ ಇರುವ ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತವೆ. ಗ್ರಾಹಕರು ಬಿಲ್ ಬಾಕಿ ಶೀಘ್ರದಲ್ಲೇ ಪಾವತಿಸಿ ಅಧಿಕಾರಿಗಳಿಗೆ ಸಹಕರಿಸಬೇಕು ಎಂದು ಅವರು ಮನವಿ ಮಾಡಿದರು.

ಚೆಸ್ಕಾಂನ ಮುಖ್ಯ ಹಣಕಾಸು ಅಧಿಕಾರಿ ರೇಣುಕಾ ಮಾತನಾಡಿ, ನೋಟಿಸ್ ನೀಡಿದರೂ, ಜಾಗೃತಿ ಅಭಿಯಾನ ನಡೆಸಿದರೂ ಬಹು ಸಂಖ್ಯೆಯ ಗ್ರಾಹಕರು ಬಿಲ್ ಪಾವತಿಸಿಲ್ಲ. ಮೂರು ತಿಂಗಳಿಗಿಂತ ಹೆಚ್ಚು ಕಾಲದ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರ ಮೇಲೆ ವಿಶೇಷ ಕಣ್ಗಾವಲು ಇದೆ. ಪ್ರತಿಯೊಂದು ವಸೂಲಿ ತಂಡದಲ್ಲಿ 3 ರಿಂದ 4 ಸಿಬ್ಬಂದಿ ಮನೆ ಮನೆಗೆ ತೆರಳಿ ಬಿಲ್ ಪಾವತಿಸುವಂತೆ ಅರಿವು ಮೂಡಿಸಿ, 1,000 ರೂ.ಕ್ಕಿಂತ ಹೆಚ್ಚು ಬಾಕಿ ಇರುವ ಕಡೆ ಪ್ರತ್ಯೇಕ ವಸೂಲಿ ಪ್ರಕ್ರಿಯೆ ಕೈಗೊಳ್ಳಲಿದ್ದಾರೆ ಎಂದರು.

ನಮ್ಮ ಸಿಬ್ಬಂದಿ, ಗ್ರಾಹಕರಿಗೆ ವಸ್ತುಸ್ಥಿತಿ ಮನವರಿಕೆ ಮಾಡಿಕೊಟ್ಟು ಬಿಲ್ ಬಾಕಿ ಕಟ್ಟುವಂತೆ ಮನವೊಲಿಸಿ, ಬಾಕಿ ವಸೂಲಿ ಮಾಡುತ್ತಿದ್ದಾರೆ. ಸ್ಥಳದಲ್ಲೇ ಪಾವತಿಸಲು ಅವಕಾಶವಿದ್ದು, ಅಲ್ಲದಿದ್ದರೆ ಗ್ರಾಹಕರು ಸಮೀಪದ ಚೆಸ್ಕಾಂ ಕಿಯೋಸ್ಕ್‌ಗಳಲ್ಲಿ ಪಾವತಿಸಬಹುದು. ಬಿಲ್ ಬಾಕಿ ಪಾವತಿಸದಿದ್ದರೆ ಅಂತಿಮವಾಗಿ ವಿದ್ಯುತ್ ಸಂಪರ್ಕ ಕಡಿತಗೊಳ್ಳಲಿದೆ ಎಂದು ತಿಳಿಸಿದರು.


ಜ್ಯೋತಿನಗರ ಉಪವಿಭಾಗದಿಂದ 24 ತಂಡಗಳನ್ನು ರಚಿಸಲಾಗಿದ್ದು, ಜೂನಿಯರ್ ಲೈನ್‌ಮನ್, ತಾಂತ್ರಿಕ ಸಿಬ್ಬಂದಿ, ಆಡಳಿತ ಲೆಕ್ಕಾಧಿಕಾರಿಗಳು, ಆಂತರಿಕ ಆಡಿಟ್ ಸಿಬ್ಬಂದಿ, ಎಲ್ಲಾ ರೆವೆನ್ಯೂ 'ಇನ್ಸ್‌ಪೆಕ್ಟರ್‌'ಗಳು ಹಾಗೂ ಹಣಕಾಸು ತಂಡದ ಸದಸ್ಯರು ಬಾಕಿ ಇರುವ ಮನೆಗಳಿಗೆ ಭೇಟಿ ನೀಡುತ್ತಿದ್ದಾರೆ. ಇಂದು ಸಂಗ್ರಹಗೊಂಡ ಬಿಲ್ ಮೊತ್ತದ ಸಂಪೂರ್ಣ ವಿವರ ನಾಳೆ ದೊರೆಯಲಿದೆ ಎಂದರು.



ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡ ಗ್ರಾಹಕರ ವಿದ್ಯುತ್ ಸಂಪರ್ಕವನ್ನು ಚೆಸ್ಕಾಂ ಸಿಬ್ಬಂದಿ ಕಡಿತಗೊಳಿಸಿದರು

ಬದ್ಧತೆಯಿಂದ ಕೆಲಸ ಮಾಡಿದರೆ ಕಾಂಗ್ರೆಸ್ ನಿಮ್ಮನ್ನು ಗುರುತಿಸಿ ಅಧಿಕಾರ ನೀಡುತ್ತದೆ

ಕಾರ್ಯಕರ್ತರಿಗೆ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಮುರಳಿ ಅಶೋಕ ಸಾಲಪ್ಪ ಸಲಹೆ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ದಿವಂಗತ ಮಾಜಿ ಪ್ರಧಾನಿ ಪಂಡಿತ್ ಜವಾಹರ ಲಾಲ್ ನೆಹರು ಜನ್ಮ ದಿನಾಚರಣೆ ಆಚರಿಸಲಾಯಿತು.

ಮೈಸೂರು, ನ.14(ಬಿಎಲ್‌ಎಲ್)– ಬದ್ಧತೆಯಿಂದ ಕೆಲಸ ಮಾಡಿದರೆ ಪಕ್ಷ ನಿಮ್ಮನ್ನು ಗುರುತಿಸಿ ಅಧಿಕಾರ ನೀಡುತ್ತದೆ ಎಂದು ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಮುರಳಿ ಅಶೋಕ ಸಾಲಪ್ಪ ಹೇಳಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ಮೈಸೂರು ನಗರ ಕಾಂಗ್ರೆಸ್ ಸಫಾಯಿ ಕರ್ಮಚಾರಿ ವಿಭಾಗದ ಅಧ್ಯಕ್ಷ ಚಿತ್ರಶ್ರೀನಿವಾಸ್ ಅವರ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಪಕ್ಷಕ್ಕೆ ಬಂದ ಕೂಡಲೇ ಅಧಿಕಾರಕ್ಕಾಗಿ ಆಸೆ ಪಡದೆ ಪಕ್ಷವನ್ನು ಶಕ್ತಿಯುತವಾಗಿ ಸಂಘಟಿಸಿ. ಮುಂದಿನ ವರ್ಷವೂ ಅಧಿಕಾರಕ್ಕೆ ತರಬೇಕು ಎಂದು ಸಲಹೆ ನೀಡಿದರು.

ಮುಂದಿನ ವರ್ಷವೂ ಕಾಂಗ್ರೆಸ್ ಪಕ್ಷ ಅಧಿಕಾರ ತರಲು ಇಂದಿನಿಂದಲೇ ಕಂಕಣಬದ್ಧರಾಗಿ ದುಡಿಯಬೇಕು. ಬದ್ಧತೆಯಿಂದ ಕೆಲಸ ಮಾಡಿದ ಕಾರ್ಯಕರ್ತರನ್ನು ಪರಿಶ್ರಮ ಗುರುತಿಸಿ ಅಧಿಕಾರ ನೀಡುತ್ತಾರೆ ಎಂದರು.

ಸಫಾಯಿ ಕರ್ಮಚಾರಿಗಳಿಗೆ ಜೀವನ ಕಟ್ಟಿಕೊಟ್ಟವರು ಡಿ.ದೇವರಾಜ ಅರಸ್. 1972ರಲ್ಲಿ ಐಎಡಿ ಹಾಲಪ್ಪ ಅವರಿಗೆ ಚುನಾವಣೆಯಲ್ಲಿ ಟಿಕೆಟ್ ಸಿಗದ ಕಾರಣ ಅವರನ್ನು ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಿ ನೇಮಕ ಮಾಡಿದರು. ರಾಜ್ಯದ್ಯಂತ ಪ್ರವಾಸ ಮಾಡಿದ ಹಾಲಪ್ಪ ಅವರು ಪೌರ ಕಾರ್ಮಿಕರ ಸ್ಥಿತಿ ಗತಿ ಬಗ್ಗೆ ಅಧ್ಯಯನ ಮಾಡಿದರು. ಪೌರ ಕಾರ್ಮಿಕರ ಬದುಕು ಸುಧಾರಣೆಯಾಗಲು 56 ಅಂಶಗಳ ವರದಿಯನ್ನು ಸರ್ಕಾರಕ್ಕೆ ನೀಡಿದರು. ಇದರಲ್ಲಿ 36 ಶಿಫಾರಸ್ಸನ್ನು ಸರ್ಕಾರ ಜಾರಿಗೆ ತಂದಿತು. ಇದರ ಫಲವಾಗಿ ಇಂದು ಪೌರ ಕಾರ್ಮಿಕರಿಗೆ ಹಲವು ಸೌಲಭ್ಯ ದೊರೆಯುತ್ತಿದೆ ಎಂದು ಮುರಳಿ ಅಶೋಕ ಸಾಲಪ್ಪ ಹೇಳಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮೈಸೂರು ನಗರ ಪಾಲಿಕೆ ಖಾಯಂ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘದ ಉಪಾಧ್ಯಕ್ಷ ಎಂ.ರಾಜೇಶ್, ಮುಖಂಡರಾದ ನಾರಾಯಣ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಪ್ರಧಾನಿ ಮೋದಿ ನಾಯಕತ್ವವೇ ಬೇಕೆಂದು ಬಿಹಾರ ಜನತೆ ಸಂದೇಶ

ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್ ಪ್ರತಿಕ್ರಿಯೆ



ಬೆಂಗಳೂರು, ನ.14(ಕೆಎಂಶಿ)– ಪ್ರಧಾನ ಮಂತ್ರಿ ನರೇಂದ್ರಮೋದಿ ನಾಯಕತ್ವ ಮುಂದುವರಿಯಬೇಕೆಂಬ ಸಂದೇಶವನ್ನು ಬಿಹಾರದ ಜನತೆ ನೀಡಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಬಿಜೆಪಿ ಪರವಾಗಿ ಬಿಹಾರದ ಜನತೆಗೆ ಧನ್ಯವಾದ ಸಲ್ಲಿಸುತ್ತೇನೆ. ಪ್ರಧಾನಿ ಮೋದಿ ನಾಯಕತ್ವ ಮುಂದುವರಿಯಬೇಕು ಹಾಗೂ ಬಿಹಾರಕ್ಕೆ ರೌಡಿಗಳ ಆಡಳಿತ ಬೇಡ ಎಂಬುದು ಮತದಾರರ ಸಂದೇಶವಾಗಿದೆ ಎಂದರು.

ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್ ಕುಟುಂಬ ಸರ್ಕಾರದ ಹಾಗೂ ಲೂಟಿ ಮಾಡಿ ಬಂದವರು ಹುಡಿಯಿಂದ ಆಡಳಿತ ನಡೆಸಿದ್ದಕ್ಕೆ ಮತದಾರರು ತಕ್ಕ ಪಾಠ ಕಲಿಸಿದ್ದಾರೆ. ಕರ್ನಾಟಕದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಸ್ಲಿಮರ ಓಲೈಕೆ ಮಾಡುವ ಮೂಲಕ ಜನರಿಗೆ ಟೋಪಿ ಹಾಕಿದ್ದು, ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಥಿತಿಯೂ ಮಹಾಘಟಬಂಧನ್‌ನಂತೆಯೇ ಆಗಲಿದೆ. ಐರನ್ ಲೆಗ್ ರಾಹುಲ್ ಗಾಂಧಿ ಎಲ್ಲ ಚುನಾವಣೆಗಳನ್ನು ಸೋತಿದ್ದಾರೆ. ಫಲಿತಾಂಶ ಎಲ್ಲರಿಗೂ ತೀವ್ರವಾಗಿ ಹರಿದ್ದಾರೆ. ಬಿಹಾರ ಚುನಾವಣಾ ಫಲಿತಾಂಶದಿಂದ ಕೇಂದ್ರ ಸರ್ಕಾರ ಇನ್ನಷ್ಟು ಬಲಿಷ್ಠವಾಗಿ ಕಾರ್ಯನಿರ್ವಹಿಸಲಿದೆ.

ಕಾಂಗ್ರೆಸ್‌ನವರು ಮತಗಳ್ಳತನ, ಇವಿಎಂ ಸರಿ ಇಲ್ಲ ಎಂಬುದನ್ನೇ ಪುನರುಚ್ಚರಿಸುತ್ತಿದ್ದಾರೆ. ಕಾಂಗ್ರೆಸ್ ಗೆದ್ದಾಗ ಸರಿ ಇದ್ದ ಮತಯಂತ್ರಗಳು ಈಗ ಸರಿ ಇಲ್ಲ ಎಂದರೆ ಹೇಗೆ, ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕ ಮತ ಪಡೆದು ಗೆದ್ದಾಗ ಮತಗಳ್ಳತನ ನಡೆದಿರಲಿಲ್ಲ. ಸೋತಾಗ ಮತಗಳ್ಳತನ ನಡೆದಿದೆ ಎಂಬ ಆರೋಪ ಮಾಡುತ್ತಾರೆ.

ಜೈಲಿನಲ್ಲಿ ಕೈದಿಗಳ ಕೈಗೆ ಮೊಬೈಲ್ ಸಿಗುತ್ತಿದೆ. ಎಲ್ಲ ತೆರಿಗೆಗಳು ಏರಿಕೆಯಾಗಿದೆ. ಆದ್ದರಿಂದ ಸರ್ಕಾರವನ್ನು ಜನರು ತಿರಸ್ಕರಿಸುತ್ತಾರೆ ಎಂಬ ಸುಳಿವು ಹೇಳಿದ್ದಾರೆ ಎಂದು ವ್ಯಂಗ್ಯವಾಡಿದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ನ.14– ನಂಜನಗೂಡು ಉಪವಿಭಾಗ–2ರ ತಗಡೂರು ಶಾಖೆ ಮತ್ತು ಬದನವಾಳು ಶಾಖಾ ವ್ಯಾಪ್ತಿ ನಿರ್ವಹಣಾ ಕಾಮಗಾರಿ ನಿಮಿತ್ತ ನ.15 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಅಳಗಂಚಿ, ಅಳಗಂಚಿಪುರ, ಮಲ್ಲೂಪುರ, ಮಡುವಳ್ಳಿ, ಗೋಣಹಳ್ಳಿ, ಕೋಣನೂರು, ಚಿಕ್ಕಹೊಲದೆ, ದೊಡ್ಡಹೊಲದೆ, ಗುಮಚನಹಳ್ಳಿ, ಗುಬ್ಬಾಡಿ, ಹಗಿನವಾಳು, ಕೆ.ಆರ್.ಪುರ, ಹೆಗ್ಗಡಹಳ್ಳಿ, ದೇವನೂರು, ಚುಂಚನಹಳ್ಳಿ, ನಂಜನಹಳ್ಳಿ, ವರಹಳ್ಳಿ, ವೀರದೇವನಪುರ, ವೀರೇಗೌಡನಹುಂಡಿ, ಬಿಂಡಿಗನ ಗ್ರಾಮಗಳು ಹಾಗೂ ಬದನವಾಳು, ಚಿನ್ನದಗುಡಿಹುಂಡಿ ಮತ್ತು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗುವುದು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಸಾಲುಮರದ ತಿಮ್ಮಕ್ಕ ನಿಧನಕ್ಕೆ ಸಂತಾಪ



ಮೈಸೂರು, ನ.14(ಬಿಎಲ್‌ಯು)– ವೃಕ್ಷ ಮಾತೆ ಸಾಲು ಮರದ ತಿಮ್ಮಕ್ಕ ಅವರ ನಿಧನಕ್ಕೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ತೀವ್ರ ಸಂತಾಪ ಸೂಚಿಸಿದ್ದಾರೆ.

ತಿಮ್ಮಕ್ಕ ಅವರು ನೂರಾರು ಗಿಡಗಳನ್ನು ಬೆಳೆಸಿ, ಅವುಗಳ ಹೆಮ್ಮರವಾಗಿ ಮಾಡಿದ್ದಾರೆ. ಪರಿಸರ ಸಂರಕ್ಷಣೆ, ಕೃಷಿ ಹಾಗೂ ಅರಣ್ಯ ವಿಕಾಸದಲ್ಲಿ ಅವರು ನೀಡಿದ ಕೊಡುಗೆ ಅವಿಸ್ಮರಣೀಯ. ತಮ್ಮ ನಿಸ್ವಾರ್ಥ ಸೇವೆಯ ಮೂಲಕ ಸಾಲು ಮರದ ತಿಮ್ಮಕ್ಕ ಅವರು ಮಾದರಿಯಾಗಿದ್ದಾರೆ ಎಂದು ಹೇಳಿದ್ದಾರೆ.

ತಮ್ಮ ಇಳಿ ವಯಸ್ಸಿನಲ್ಲಿ ಅವರಿಗಿದ್ದ ಪ್ರಕೃತಿ ಪ್ರೇಮ ಇತರರಿಗೆ ಆದರ್ಶ. ಪ್ರಾಣಿ, ಪಕ್ಷಿಗಳನ್ನು ಉಳಿಸಲು ಅವರು ಮಾಡಿದ ಕಾರ್ಯ ಶ್ಲಾಘನೀಯ. ಸಾಲು ಮರದ ತಿಮ್ಮಕ್ಕ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಲಿಂಗರಾಜು ಅವರು ತಿಳಿಸಿದ್ದಾರೆ.

ಮೋದಿ–ನಿತೀಶ್ ಜೋಡಿ ಜುಗಲ್‌ಬಂದಿಗೆ

ಮಹಾಘಟಬಂಧನ್ ಧೂಳೀಪಟ

ಸಂಸದ ಯದುವೀರ್ ಸಂತಸ



ಮೈಸೂರು, ನ.14– ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಅಭಿವೃದ್ಧಿಪರ ಆಡಳಿತವನ್ನು ಮೆಚ್ಚಿ ಬಿಹಾರದ ಜನತೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟಕ್ಕೆ ಅಭೂತಪೂರ್ವ ಜಯದ ಹಾರ ತೊಡಿಸಿದ್ದಾರೆ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದ್ದಾರೆ.

ಬಿಹಾರ ವಿಧಾನಸಭಾ ಚುನಾವಣೆ ಫಲಿತಾಂಶದ ಬಗ್ಗೆ ಪತ್ರಿಕಾ ಪ್ರಕಟಣೆ ಮೂಲಕ ಪ್ರತಿಕ್ರಿಯಿಸಿರುವ ಅವರು, ವಿಕಸಿತ ಭಾರತಕ್ಕೆ ಮೋದಿ ಅವರ ದೃಢ ಸಂಕಲ್ಪ ಮತ್ತು ಬಿಹಾರದಲ್ಲಿ ಕೈಗೊಂಡ ಅಭಿವೃದ್ಧಿ ಪರ ಯೋಜನೆಗಳು ಬಿಜೆಪಿಗೆ ಕೈ ಹಿಡಿದಿವೆ. ಬಿಜೆಪಿ ನೇತೃತ್ವದ ಮೈತ್ರಿ ಕೂಟದ ದಾಖಲೆಯ ಗೆಲುವು ಸ್ವಾಗತಾರ್ಹವಾಗಿದ್ದು, ಬಿಜೆಪಿ ಪರವಾಗಿ ನಾನು ಬಿಹಾರ ಜನರನ್ನು ಅಭಿನಂದಿಸುತ್ತೇನೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಪಕ್ಷವು ಮತಚೋರಿ ಎಂಬ ಸುಳ್ಳಿನ ಕಥೆ ಹೇಳಿಕೊಂಡು ಕಾಲ ಕಳೆಯುತ್ತಿತ್ತು. ಆದರೆ ಬಿಜೆಪಿ–ಜೆಡಿಯು ಮೈತ್ರಿ ಜನಪರ ಕೆಲಸಗಳನ್ನು ಕೈಗೊಳ್ಳುತ್ತಿತ್ತು. ಇದೇ ನಮ್ಮ ಎನ್‌ಡಿಎ ಮೈತ್ರಿಕೂಟ ಹಾಗೂ ಮಹಾಘಟ್ ಬಂಧನಕ್ಕೂ ಇರುವ ವ್ಯತ್ಯಾಸ. ದೇಶದಲ್ಲಿ ನರೇಂದ್ರ ಮೋದಿ ಪರ ಅಲೆ ಹೇಗಿದೆ ಎಂಬುದು ಈ ಫಲಿತಾಂಶದಿಂದ ಮತ್ತೊಮ್ಮೆ ಸಾಬೀತಾಗುತ್ತದೆ. ನಮ್ಮ ಬಿಜೆಪಿ ಸರ್ಕಾರದಿಂದ ದೇಶಕ್ಕೆ ಇನ್ನಷ್ಟು ಹೊಸ ಹೊಸ ಕೊಡುಗೆಗಳು ದೊರೆಯಲಿದೆ. ಕರ್ನಾಟಕದಲ್ಲೂ ಮುಂದಿನ ದಿನಗಳಲ್ಲಿ ಕೇಸರಿ ಅಲೆ ಏಳಲಿದೆ ಎಂದು ಯದುವೀರ್ ಒಡೆಯರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಕ್ಕಳಿಗೆ ಐಸ್ ಕ್ರೀಂ ವಿತರಣೆ



ಮಕ್ಕಳ ದಿನಾಚರಣೆ ಅಂಗವಾಗಿ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಮಕ್ಕಳಿಗೆ ಐಸ್ ಕ್ರೀಂ ವಿತರಣೆ ಮಾಡಲಾಯಿತು. ಈ ವೇಳೆ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಬ್ಯಾಂಕ್ ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎಸ್.ಯೋಗಾನಂದ್, ವಸಂತ ಮುನೀಶ್, ಕಾರ್ಯದರ್ಶಿ ಕೆ. ಹರ್ಷಿತ್ ಗೌಡ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಪ್ರತಿಭಾ ಪುರಸ್ಕಾರ

ಮೈಸೂರು, ನ.14–28ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ನ.16ರಂದು ಸಂಜೆ 4 ಗಂಟೆಗೆ ಕಲಾಮಂದಿರದಲ್ಲಿ ದಿನೇಶ್ ಕೋಚಿಂಗ್ ಸೆಂಟರ್ ವತಿಯಿಂದ ಹಮ್ಮಿಕೊಳ್ಳಲಾಗಿದೆ. ಗದಗ–ವಿಜಯಪುರ ಶ್ರೀ ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷ ಶ್ರೀ ನಿರ್ಭಯಾನಂದ ಸರಸ್ವತಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ನಾರ್ವೆಯ ಶ್ರೀ ಸ್ವಯಂ ಪ್ರಕಾಶ ಸರಸ್ವತಿ ಪ್ರೌಢ ಶಾಲೆಯ ನಿವೃತ್ತ ಮುಖ್ಯಶಿಕ್ಷಕ ಎ.ಎಸ್. ಜನಾರ್ದನ ಉಪಸ್ಥಿತರಿರಲಿದ್ದಾರೆ.

ನಾಳೆ 'ನಾರ್ಥ್–ಈಸ್ಟ್ ಕಾಲಿಂಗ್' ಕಾರ್ಯಕ್ರಮ

ಮೈಸೂರು, ನ.14– ಭಾರತೀಯ ಭಾಷಾ ಸಂಸ್ಥೆ, ಉನ್ನತ ಶಿಕ್ಷಣ ಇಲಾಖೆ ವತಿಯಿಂದ ಕನ್ಯಾಕುಮಾರಿಯ ವಿವೇಕಾನಂದ ಕೇಂದ್ರದ ಕರ್ನಾಟಕ ಪ್ರಾಂತ್ಯ, ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಅಧೀನ ಸಂಸ್ಥೆಯಾದ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ (ಭಾ.ಭಾ.ಸಂ.) ಸಹಯೋಗದೊಂದಿಗೆ 'ನಾರ್ಥ್–ಈಸ್ಟ್ ಕಾಲಿಂಗ್' ಕಾರ್ಯಕ್ರಮವನ್ನು ನ.16 ರಂದು ಬೆಳಿಗ್ಗೆ 10.30 ಗಂಟೆಗೆ ಭಾರತೀಯ ಭಾಷಾ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಪಿಯು ಮಕ್ಕಳಿಗೂ ಬಿಸಿಯೂಟಕ್ಕೆ ಚಿಂತನೆ: ಮಧು ಬಂಗಾರಪ್ಪ

ಮುಂದಿನ ವರ್ಷದಿಂದ ಕರ್ನಾಟಕ ಪಬ್ಲಿಕ್ ಶಾಲೆಯ 11 ಮತ್ತು 12ನೇ ತರಗತಿಗೆ ಸೌಲಭ್ಯ



ಬೆಂಗಳೂರು: ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಕರ್ನಾಟಕ ಪಬ್ಲಿಕ್ ಶಾಲೆಯ 11 ಮತ್ತು 12ನೇ ತರಗತಿ ಮಕ್ಕಳಿಗೆ ವಿಸ್ತರಿಸಲು ಕ್ರಮಕೈಗೊಳ್ಳಲಾಗುವುದು. ಪಿಯು ವಿದ್ಯಾರ್ಥಿಗಳಿಗೂ ಸೌಲಭ್ಯ ಒದಗಿಸುವ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ಆಯೋಜಿಸಿದ್ದ ರಾಜ್ಯಮಟ್ಟದ ಮಕ್ಕಳ ದಿನಾಚರಣೆ ಹಾಗೂ ಪೋಷಕ–ಶಿಕ್ಷಕರ ಸಭೆಯಲ್ಲಿ ನಡೆದ ಸಂವಾದದಲ್ಲಿ ಬೆಳಗಾವಿ ಜಿಲ್ಲೆ ಬೈಲಹೊಂಗಲದ ಸರ್ಕಾರಿ ಪಿಯು ಕಾಲೇಜಿನ ವಿದ್ಯಾರ್ಥಿ ರಾಕೇಶ್ ಪ್ರಶ್ನೆಗೆ ಉತ್ತರಿಸಿದ ಅವರು, ಪಿಯು ವಿದ್ಯಾರ್ಥಿಗಳಿಗೂ ಮಧ್ಯಾಹ್ನದ ಬಿಸಿಯೂಟ ಒದಗಿಸಬೇಕೆಂದು ಬೇಡಿಕೆಯಿಟ್ಟಿದ್ದು, ಶೀಘ್ರವೇ ತೀರ್ಮಾನ ತೆಗೆದುಕೊಳ್ಳಲಾಗುವುದು. ಈ ಕುರಿತು ಚರ್ಚಿಸಲಾಗುವುದು ಎಂದರು.

ರಾಕೇಶ್ ಹೇಳಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ತರಗತಿಗಳು ನಡೆಯುತ್ತವೆ. ಮನೆಗಳಿಂದ ಬೆಳಿಗ್ಗೆ ಬೇಗನೆ ಹೊರಡುತ್ತಾರೆ. ಹಾಗಾಗಿ, ಪಿಯು ಕಾಲೇಜುಗಳಿಗೂ ಮಧ್ಯಾಹ್ನದ ಬಿಸಿಯೂಟವನ್ನು ವಿಸ್ತರಿಸಬೇಕು ಎಂಬ ಬೇಡಿಕೆ ಸೂಕ್ತವಾಗಿದೆ. ಮೊದಲು 8ನೇ ತರಗತಿಯವರೆಗೆ ಇದ್ದ ಮೊಟ್ಟೆ ವಿತರಣೆಯನ್ನು 9 ಮತ್ತು 10ನೇ ತರಗತಿಗೆ ವಿಸ್ತರಿಸಿದ್ದೇವೆ. ಮುಂದಿನ ಶೈಕ್ಷಣಿಕ ವರ್ಷದಿಂದ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳ ಎಲ್ಲ ವಿದ್ಯಾರ್ಥಿಗಳಿಗೂ ಮಧ್ಯಾಹ್ನದ ಬಿಸಿಯೂಟ ಜಾರಿಗೆ ಸಿದ್ಧತೆ ಮಾಡಿಕೊಂಡಿದ್ದೇವೆ ಎಂದು ಹೇಳಿದರು.

ಮೈಸೂರು ಜಿಲ್ಲೆಯ ಪುಟ್ಟೇಗೌಡನ ಹುಂಡಿಯ ವಿದ್ಯಾರ್ಥಿ ಪಿ.ಟಿ.ಲೋಕೇಶ್ ಹೇಳಿದಂತೆ ಕೆಎಸ್ಆರ್‌ಟಿಸಿ ಬಸ್‌ಗಳಲ್ಲಿ ಹೆಣ್ಣು ಮಕ್ಕಳಿಗೆ ಉಚಿತ ಪ್ರಯಾಣದ ಸೌಲಭ್ಯವಿದೆ. ಹುಡುಗರಿಗೂ ವಿಸ್ತರಿಸುವ ಕುರಿತು ಮುಖ್ಯಮಂತ್ರಿ ಜತೆ ಚರ್ಚಿಸಲಾಗುವುದು. ಈಗ ಎಲ್ಲರಿಗೂ ರಿಯಾಯಿತಿ ಬಸ್‌ಪಾಸ್‌ಗಳನ್ನು ಕೊಡಲಾಗುತ್ತಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ ಕೆಪಿಎಸ್ ವಿದ್ಯಾರ್ಥಿಗಳಿಗೆ ಉಚಿತ ಬಸ್ ವ್ಯವಸ್ಥೆ ಮಾಡಲಾಗುವುದು ಎಂದರು.

10ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮೌಲ್ಯಗಳನ್ನು ಅಳವಡಿಸುವ ಮಹತ್ವಾಕಾಂಕ್ಷೆಯ 'ಮೌಲ್ಯ ಶಿಕ್ಷಣ' ವಿದ್ಯಾರ್ಥಿ ಚಟುವಟಿಕಾ ಪುಸ್ತಕಗಳ ಡಿಜಿಟಲ್ ಆವೃತ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಜೆಇಇ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಸಂಕೇತ್ ರಾಜ್‌ಗೆ 1 ಲಕ್ಷ, ಕೊಂಬೆಟ್ಟು ಸರ್ಕಾರಿ ಪಿಯು ಕಾಲೇಜಿನ ಪಿಯುಸಿ ವಿದ್ಯಾರ್ಥಿ ಅರುಣ್‌ಕುಮಾರ್ ವಿ. ಅವರು ಮಾಡಿದ ವಿಶಿಷ್ಟ ಆವಿಷ್ಕಾರಕ್ಕಾಗಿ 15,000 ಹಾಗೂ ಎಸ್ಎಸ್ಎಲ್‌ಸಿ ಪ್ರಥಮ ರ‍್ಯಾಂಕ್ ವಿದ್ಯಾರ್ಥಿಗಳಿಗೆ ತಲಾ 50,000 ನಗದು ಬಹುಮಾನ ನೀಡಿ, ಪ್ರೋತ್ಸಾಹಿಸಲಾಯಿತು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ವಿಧಾನಪರಿಷತ್ ಸದಸ್ಯೆ ಬಲ್ಕೀಸ್ ಬಾನು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ, ಶಾಸಕರಾದ ವಿಜಯಾನಂದ ಕಾಶಪ್ಪನವರ್, ಬಿ.ಟಿ.ಚಿಮ್ಮನಕಟ್ಟಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಯಾದ ನಸೀರ್ ಅಹಮದ್, ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಉಪಸ್ಥಿತರಿದ್ದರು.

ದೇಶ – ವಿದೇಶ

ಇಸ್ಲಾಮಾಬಾದ್ ಬಾಂಬ್ ಸ್ಫೋಟ: ಶ್ರೀಲಂಕಾ ಕ್ರಿಕೆಟ್ ತಂಡಕ್ಕೆ ಸೇನಾ ಭದ್ರತೆ ಒದಗಿಸಿದ ಪಾಕ್ ಸರ್ಕಾರ

ರಾವಲ್ಪಿಂಡಿ: ಇಸ್ಲಾಮಾಬಾದ್‌ನಲ್ಲಿ ನಡೆದ ಸರಣಿ ಬಾಂಬ್ ಸ್ಫೋಟಗಳ ನಂತರ ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಅವರ ಮಧ್ಯಸ್ಥಿಕೆಯ ಮೇರೆಗೆ ಪ್ರವಾಸ ಮುಂದುವರಿಸಲು ಒಪ್ಪಿಕೊಂಡ ನಂತರ, ಸರ್ಕಾರವು ಶ್ರೀಲಂಕಾ ಕ್ರಿಕೆಟ್ ತಂಡದ ಭದ್ರತೆಯನ್ನು ಪಾಕಿಸ್ತಾನ ಮಿಲಿಟರಿ ಪಡೆಗಳಿಗೆ ಹಸ್ತಾಂತರಿಸಿದೆ.

ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಮುಖ್ಯಸ್ಥ ಮತ್ತು ಫೆಡರಲ್ ಆಂತರಿಕ ಸಚಿವರೂ ಆಗಿರುವ ಮೊಹ್ಸಿನ್ ನಖ್ವಿ, ಸದ್ಯ ಇಲ್ಲಿಗೆ ಭೇಟಿ ನೀಡುವ ಎಲ್ಲಾ ವಿದೇಶಿ ತಂಡಕ್ಕೆ ರಾಜ್ಯ ಮಟ್ಟದ ಭದ್ರತೆ ಒದಗಿಸಲಾಗುತ್ತದೆ. ಆದರೆ, ಶ್ರೀಲಂಕಾ ಕ್ರಿಕೆಟ್ ತಂಡದ ಭದ್ರತೆಯನ್ನು ಪೊಲೀಸರೊಂದಿಗೆ ಸೇನೆ ಮತ್ತು ರೇಂಜರ್‌ಗಳು ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು.

ಗುರುವಾರ ರಾತ್ರಿ ರಾವಲ್ಪಿಂಡಿಯಲ್ಲಿ ಪಾಕಿಸ್ತಾನ ಮತ್ತು ಶ್ರೀಲಂಕಾ ಆಟಗಾರರನ್ನು ಕ್ರೀಡಾಂಗಣದಲ್ಲಿ ಭೇಟಿಯಾದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ನಖ್ವಿ, ಶ್ರೀಲಂಕಾ ಸರ್ಕಾರ ಮತ್ತು ಕ್ರಿಕೆಟ್ ಮಂಡಳಿಯು ಪಾಕಿಸ್ತಾನ ಪ್ರವಾಸವನ್ನು ಮುಂದುವರಿಸಲು ನಿರ್ಧರಿಸುವ ಮೂಲಕ ಉತ್ತಮ ಬೆಂಬಲ ನೀಡಿವೆ ಎಂದು ಅವರು ಹೇಳಿದರು.

ಉಪಚುನಾವಣೆ: ರಾಜಸ್ಥಾನದಲ್ಲಿ ಕಾಂಗ್ರೆಸ್, ಮಿಜೋರಾಂನಲ್ಲಿ ಎಮ್ಎನ್ಎಫ್ ಗೆಲುವು



ಜೈಪುರ: ರಾಜಸ್ಥಾನದ ಬರನ್ ಜಿಲ್ಲೆಯ ಅಂತಾ ವಿಧಾನಸಭೆಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಮೋದ್ ಜೈನ್ ಭಾಯಾ 69,571 ಮತಗಳನ್ನು ಪಡೆದು ತಮ್ಮ ಹತ್ತಿರದ ಪ್ರತಿಸ್ಪರ್ಧಿ, ಬಿಜೆಪಿ ಅಭ್ಯರ್ಥಿ ಮೋರ್ಪಾಲ್ ಸುಮನ್ ಅವರ ವಿರುದ್ಧ 15,612 ಮತಗಳ ಅಂತರದ ಗೆಲುವು ದಾಖಲಿಸಿದ್ದಾರೆ.

ಬಿಜೆಪಿ ಅಭ್ಯರ್ಥಿ ಉಪಚುನಾವಣೆಯಲ್ಲಿ 53,959 ಮತಗಳನ್ನು ಪಡೆದುಕೊಂಡರು. ಭಾಯಾ ಅವರು ಮತ ಎಣಿಕೆ ಆರಂಭವಾದಾಗಿನಿಂದಲೂ ಮುನ್ನಡೆ ಹಿಡಿದಿಟ್ಟುಕೊಂಡಿದ್ದರು. ಉಪಚುನಾವಣೆಯಲ್ಲಿ ಒಟ್ಟು 15 ಅಭ್ಯರ್ಥಿಗಳು ಕಣದಲ್ಲಿದ್ದರು.

ಮಿಜೋರಾಂನ ಡಂಪಾ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಉಪ ಚುನಾವಣೆಯಲ್ಲಿ ಅಲ್ಲಿನ ವಿರೋಧ ಪಕ್ಷವಾದ ಮಿಜೋ ನ್ಯಾಷನಲ್ ಫ್ರಂಟ್ (ಎಮ್ಎನ್ಎಫ್) ನಾಯಕ ಹಾಗೂ ಮಾಜಿ ಸಚಿವ ಆರ್. ಲಾಲ್ತಂಗ್ಲಿಯಾನಾ ಅವರು 562 ಮತಗಳಿಂದ ಝಡ್‌ಪಿಎಮ್ ಅಭ್ಯರ್ಥಿ ವಿರುದ್ಧ ಗೆಲುವು ಸಾಧಿಸಿದ್ದಾರೆ.

ಹೈದರಾಬಾದ್ ಜುಬಿಲಿ ಹಿಲ್ಸ್ ವಿಧಾನಸಭಾ ಕ್ಷೇತ್ರ ಉಪ ಚುನಾವಣೆ: ಕಾಂಗ್ರೆಸ್ ಜಯಭೇರಿ



ಹೈದರಾಬಾದ್: ತೆಲಂಗಾಣದ ಹೈದರಾಬಾದ್ ನಗರದ ಪ್ರತಿಷ್ಠಿತ ಬಡಾವಣೆಗಳನ್ನು ಒಳಗೊಂಡಿರುವ ಜುಬಿಲಿ ಹಿಲ್ಸ್ ವಿಧಾನಸಭಾ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಜಯಭೇರಿ ಬಾರಿಸಿದೆ.

ಕಾಂಗ್ರೆಸ್‌ನ ವಿ. ನವೀನ್ ಯಾದವ್ ಅವರು ಬಿಆರ್‌ಎಸ್ ಅಭ್ಯರ್ಥಿ ಮಾಗಂಟಿ ಸುನೀತಾ ವಿರುದ್ಧ 24 ಸಾವಿರಕ್ಕೂ ಅಧಿಕ ಮತಗಳನ್ನು ಪಡೆದು ವಿಧಾನಸಭೆ ಪ್ರವೇಶಿಸಿದರು.

ನವೀನ್ ಯಾದವ್ ಅವರು 98,988 ಮತಗಳನ್ನು ಪಡೆದರೆ, ಬಿಆರ್‌ಎಸ್ ಅಭ್ಯರ್ಥಿ ಮಾಗಂಟಿ ಸುನೀತಾ 74,259 ಮತಗಳನ್ನು ಪಡೆದರು. ಬಿಜೆಪಿಯ ಲಂಕಾಲ ದೀಪಕ್ ರೆಡ್ಡಿ ಅವರು 17,061 ಮತಗಳನ್ನು ಪಡೆದು ಠೇವಣಿ ಕಳೆದುಕೊಂಡಿದ್ದಾರೆ. ಬಿಆರ್‌ಎಸ್‌ನಿಂದ ಜುಬಿಲಿ ಹಿಲ್ಸ್ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಶಾಸಕ ಮಾಗಂಟಿ ಗೋಪಿನಾಥ್ ಅವರು ಕಳೆದ ಜೂನ್‌ನಲ್ಲಿ ನಿಧನರಾಗಿದ್ದರಿಂದ ಉಪಚುನಾವಣೆ ನಡೆಸಲಾಯಿತು.

ಚೆನ್ನೈನಲ್ಲಿ ವಾಯುಪಡೆಯ ವಿಮಾನ ಪತನ; ಪೈಲಟ್ ಪಾರು



ಚೆನ್ನೈ: ಭಾರತೀಯ ವಾಯುಪಡೆಯ ವಿಮಾನ ತಮಿಳುನಾಡಿನ ಚೆನ್ನೈನಲ್ಲಿ ಪತನವಾಗಿದೆ. ತರಬೇತಿ ಕಾರ್ಯಚರಣೆಯ ಸಮಯದಲ್ಲಿ ಚೆನ್ನೈ ತಾಂಬರಂ ಬಳಿ ಐಎಎಫ್ ಪಿಲಾಟಸ್ ಪಿಸಿ–7 ತರಬೇತಿ ವಿಮಾನ ಪತನಗೊಂಡಿದೆ. ಆದರೆ ಪೈಲಟ್ ಸುರಕ್ಷಿತವಾಗಿ ಹೊರಗೆ ಹಾರಿದ್ದಾರೆ.

ವಿಮಾನವು ಅರಣ್ಯ ಪ್ರದೇಶದಲ್ಲಿ ನೆಲಕ್ಕೆ ಅಪ್ಪಳಿಸುವ ಮೊದಲು ಪೈಲಟ್ ಸುರಕ್ಷಿತವಾಗಿ ಹೊರಗೆ ಹಾರಿಕೊಂಡಿದ್ದಾರೆ. ಈ ಅಪಘಾತದ ಕಾರಣವನ್ನು ತನಿಖೆ ಮಾಡಲು ವಾಯುಪಡೆಯು ವಿಚಾರಣಾ ನ್ಯಾಯಾಲಯಕ್ಕೆ ಆದೇಶಿಸಿದೆ. ಪೈಲಟ್ ಗಾಯವಿಲ್ಲದೆ ಪಾರಾಗಿದ್ದಾರೆ ಎಂದು ಐಎಎಫ್ ದೃಢಪಡಿಸಿದೆ.

ಈ ವರ್ಷದ ಆರಂಭದಲ್ಲಿ ವರದಿಯಾದ ಸರಣಿ ಐಎಎಫ್ ವಿಮಾನ ಅಪಘಾತಗಳ ನಂತರ ಈ ಇತ್ತೀಚಿನ ಘಟನೆ ಸಂಭವಿಸಿದೆ. ಜುಲೈನಲ್ಲಿ ತರಬೇತಿ ಹಾರಾಟದ ಸಮಯದಲ್ಲಿ ರಾಜಸ್ಥಾನದ ಚುರು ಜಿಲ್ಲೆಯ ಭಾನುದಾ ಗ್ರಾಮದ ಬಳಿ ಜಾಗ್ವಾರ್ ಯುದ್ಧ ವಿಮಾನವು ಹೊಲಕ್ಕೆ ಅಪ್ಪಳಿಸಿ ಇಬ್ಬರು ಐಎಎಫ್ ಪೈಲಟ್‌ಗಳು ಸಾವನ್ನಪ್ಪಿದ್ದರು.

ದೆಹಲಿ–ಮುಂಬೈ ಎಕ್ಸ್‌ಪ್ರೆಸ್ ವೇಯಲ್ಲಿ ಕಂದಕಕ್ಕೆ ಬಿದ್ದ ಕಾರು: 5 ಮಂದಿ ಸಾವು



ನವದೆಹಲಿ: ನಿಯಂತ್ರಣ ತಪ್ಪಿದ ಕಾರು ಕಂದಕಕ್ಕೆ ಬಿದ್ದ ಪರಿಣಾಮ ಐವರು ಸಾವನ್ನಪ್ಪಿರುವ ಘಟನೆ ದೆಹಲಿ–ಮುಂಬೈ ಎಕ್ಸ್‌ಪ್ರೆಸ್ ವೇನಲ್ಲಿ ನಡೆದಿದೆ.

ಮೃತರನ್ನು ಮುಂಬೈನ ಕುರ್ಲಾದ ಗುಲಾಮ್ ರಸೂಲ್ (70), ಅಬ್ದುಲ್ ಗುಲಾಮ್ (35), ಹ್ಯಾರಿಸ್ (15), ದುರ್ಗೇಶ್ ಪ್ರಸಾದ್ (35) ಹಾಗೂ ವಡೋದರಾದ ಖಾಲಿಸ್ (35) ಎಂದು ಗುರುತಿಸಲಾಗಿದೆ.

ನ.13ರಂದು ಬೆಳಗ್ಗೆ 7ಗಂಟೆ ಸುಮಾರಿಗೆ ದೆಹಲಿ ಹಾಗೂ ಮುಂಬೈ ಎಕ್ಸ್‌ಪ್ರೆಸ್ ವೇಯಲ್ಲಿನ ಛಾಮುಪುರ ಗ್ರಾಮದ ಬಳಿ ಈ ಅಪಘಾತ ಸಂಭವಿಸಿದೆ. ಕಾರು ದೆಹಲಿಯಿಂದ ಗುಜರಾತ್ ಕಡೆಗೆ ಪ್ರಯಾಣಿಸುತ್ತಿತ್ತು. ಈ ವೇಳೆ ಚಾಲಕನ ನಿಯಂತ್ರಣ ತಪ್ಪಿದ್ದು, ಪರಿಣಾಮ ಕಾರು ಕಂದಕಕ್ಕೆ ಬಿದ್ದಿದೆ.

ಪರಿಣಾಮ ಕಾರಿನ ಮುಂಭಾಗ ಹಾಗೂ ಮೇಲ್ಛಾವಣಿ ಸಂಪೂರ್ಣ ಜಖಂಗೊಂಡಿದೆ, ನಂಬರ್ ಪ್ಲೇಟ್ ಅಪಘಾತದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಪತ್ತೆಯಾಗಿದೆ. ಅವಘಡದಲ್ಲಿ ಓರ್ವ ಬಾಲಕ ಸೇರಿ ಐವರು ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಮೃತದೇಹಗಳನ್ನು ಹೊರತೆಗೆಯಲು ಸ್ಥಳೀಯರು ಪೊಲೀಸರಿಗೆ ಸಹಾಯ ಮಾಡಿದ್ದು, ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ.

ರಸ್ತೆ ದುರಸ್ತಿ ಕಾಮಗಾರಿಗೆ ಶಾಸಕರಿಂದ ಭೂಮಿಪೂಜೆ



ರಸ್ತೆ ದುರಸ್ತಿ ಕಾಮಗಾರಿಗೆ ಶಾಸಕ ಡಾ.ಮಂತರ್ ಗೌಡ ಭೂಮಿಪೂಜೆ ನೆರವೇರಿಸಿದರು.

ಮಡಿಕೇರಿ, ನ.14–ಅತಿಯಾದ ಮಳೆಯಿಂದ ಹದಗೆಟ್ಟಿದ್ದ ಮಡಿಕೇರಿ–ಗಾಳಿಬೀಡು–ಕಡಮಕಲ್ಲು 3.50 ಕೋಟಿ ರೂ. ವೆಚ್ಚದ ರಸ್ತೆ ದುರಸ್ತಿ ಕಾಮ ಗಾರಿಗೆ ಶಾಸಕ ಡಾ.ಮಂತರ್ ಗೌಡ ಭೂಮಿಪೂಜೆ ನೆರವೇರಿಸಿದರು.

ವಿಧಾನಸಭಾ ಕ್ಷೇತ್ರದ ಗಾಳಿಬೀಡು ರಸ್ತೆ ದುರಸ್ತಿ ಪಡಿಸುವಂತೆ ಚುನಾವಣೆಗೂ ಮುನ್ನ ಗ್ರಾಮಸ್ಥರು ಮನವಿ ಮಾಡಿದ್ದರು. ಅದರಂತೆ ಸು. 3.50 ಕೋಟಿ ರೂ. ವೆಚ್ಚದಲ್ಲಿ 3.45 ಕಿ.ಮೀ ರಸ್ತೆ ದುರಸ್ಥಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಗಿದೆ. ಮುಂದಿನ ಹಂತದಲ್ಲಿ ಹೆಚ್ಚುವರಿಯಾಗಿ 3 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಈ ಅನುದಾನದಲ್ಲಿ ಗ್ರಾ. ಪಂ.ನಿಂದ 6ರಿಂದ 10 ಕಿ.ಮೀ.ವರೆಗೆ ರಸ್ತೆ ದುರಸ್ಥಿ ಕಾಮಗಾರಿ ಕೈಗೊಳ್ಳ ಲಾಗುವುದು. ಈ ಕಾಮಗಾರಿ ಮುಂದಿನ ಮಾರ್ಚ್–ಏಪ್ರಿಲ್ ಒಳಗೆ ಪೋಷಕರು ಪೂರ್ಣಗೊಳ್ಳಲಿದೆ ಎಂದರು

ರಸ್ತೆ ದುರಸ್ತಿ ಕಾಮಗಾರಿಯನ್ನು ಗುಣಮಟ್ಟದಿಂದ ನಿರ್ವಹಿಸುವಂತೆ ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಚಿಸಿ, ಕೆಲವು ಕಡೆ ತೋಟಗಳ ಬೇಲಿ ರಸ್ತೆಯನ್ನು ಅತಿಕ್ರಮಿಸಿಕೊಂಡಿದೆ. ಗ್ರಾಮ ಸ್ಥರು ಬೇಲಿಯನ್ನು ತೆರವುಗೊಳಿಸುವ ಮೂಲಕ ರಸ್ತೆ ಅಗಲೀಕರಣಕ್ಕೆ ಸಹಕರಿಸುವಂತೆ ಶಾಸಕ ಡಾ. ಮಂತರ್ ಗೌಡ ಹೇಳಿದರು. ಗ್ರಾಮಸ್ಥರ ಅಹವಾಲನ್ನು ಆಲಿಸಿದರು. ಶಾಸಕರ ಹುಟ್ಟು ಹಬ್ಬದ ಅಂಗವಾಗಿ ಗ್ರಾಮದ ವಿಶೇಷ ಚೇತನರಿಗೆ ಆಹಾರ ಕಿಟ್‌ಗಳನ್ನು ವಿತರಿಸಲಾಯಿತು.

ಗಾಳಿಬೀಡು ವಲಯ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ. ಸುಭಾಷ್ ಆಳ್ವ, ಮಾಜಿ ಅಧ್ಯಕ್ಷ ಕೋಳುಮುಡಿಯನ ಅನಂತಕುಮಾರ್, ಜಿಲ್ಲಾ ಕಾಂಗ್ರೆಸ್ ಸದಸ್ಯ ಐಲಪಂಡ ಪುಷ್ಪ ಪೂಣಚ್ಚ, ಅಕ್ರಮ ಸಕ್ರಮ ಸಮಿತಿ ಸದಸ್ಯ ಹರಿಪ್ರಸಾದ್ ಕೋಚನ, ವಲಯ ಕಾಂಗ್ರೆಸ್ ಸದಸ್ಯರಾದ ಮದನ್ ಕೊಂಬಾರನ ಹಾಗೂ ಗಣಪತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎ.ಹಂಸ, ಪ್ರಮುಖರಾದ ತೆನ್ನಿರಾ ಮೈನ, ಅಪ್ಪು, ರವೀಂದ್ರ, ಜಯಂತಿ ಶೆಟ್ಟಿ, ಟಿ.ಎಂ.ಅಯ್ಯಪ್ಪ, ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ನಾಪೋಕ್ಲು ಹೋಬಳಿ ವ್ಯಾಪ್ತಿ ಮಕ್ಕಳ ದಿನಾಚರಣೆ



ಮಕ್ಕಳ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಂದ ವೇಷ– ಭೂಷಣ ಸ್ಪರ್ಧೆ.

ನಾಪೋಕ್ಲು: ಹೋಬಳಿ ವ್ಯಾಪ್ತಿಯ ವಿವಿಧ ಶಾಲೆಗಳಲ್ಲಿ ಮಕ್ಕಳ ದಿನಾಚರಣೆಯನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಸರ್ಕಾರಿ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಇಲಾಖೆ ಆದೇಶದಂತೆ ಶಿಕ್ಷಕ ಪೋಷಕರ ಸಭೆ, ವಿದ್ಯಾರ್ಥಿಗಳಿಗೆ ಚದ್ಮ ವೇಷ, ಆಟೋಟ ಸ್ಪರ್ಧೆಗಳನ್ನು ಮನರಂಜನಾ ಆಟಗಳನ್ನು ಆಯೋಜಿಸಲಾಗಿತ್ತು.

ಇಲ್ಲಿನ ಶ್ರೀರಾಮ ಟ್ರಸ್ಟ್ ವಿದ್ಯಾಸಂಸ್ಥೆಯಲ್ಲಿ ನಡೆದ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಪ್ರೊಫೆಸರ್ ಕಲ್ಯಾಟಂಡ ಪೂಣಚ್ಚ, ಪ್ರಾಂಶುಪಾಲೆ ಬಿ.ಎಂ.ಶಾರದ ನೆಹರು ರವರ ಜನ್ಮದಿನ ದಿನದ ಮಹತ್ವದ ಬಗ್ಗೆ ಮಾತನಾಡಿದರು. ಶಾಲಾ ಮಂತ್ರಿಮಂಡಲದ ಸಾಂಸ್ಕೃತಿಕ ನಾಯಕಿ ಸಿಂಚನ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಿತು. ಸಂಸ್ಥೆಯ ಉಪಾಧ್ಯಕ್ಷ ನೆರವಂಡ ಸುನಿಲ್ ದೇವಯ್ಯ, ನಿರ್ದೇಶಕ ನವೀನ್ ಅಪ್ಪಯ್ಯ, ಸುಬ್ಬಯ್ಯ, ಕೆ.ಎಸ್, ಗಾನವಿ.ಬಿ.ಎಂ, ಮನ್ನಹ ವಿ. ಮುತ್ತಮ್ಮ ಎನ್.ಎಂ, ಸಹನಾ ಪಿ.ಎಸ್, ಸುಮನ್ವಿತ, ಶಿಕ್ಷಕಿ ಸಿ.ಕೆ.ಲೀನಾ, ಕೆ.ಎಸ್.ಸಾತ್ವಿಕ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ನೀಲ್ ಮೇದಪ್ಪ ಪಂಗಡಗರ ಪ್ರಾರ್ಥನೆಯೊಂದಿಗೆ ಪ್ರಾರಂಭ ಆದ ಕಾರ್ಯಕ್ರಮವನ್ನು ಶಿಕ್ಷಕಿ ನೀತಾ, ಸಿ.ಎಸ್.ಸ್ವಾಗತಿಸಿದರು. ಅತಿಥಿಗಳ ಪರಿಚಯವನ್ನು ಕೆಎಸ್ ರೀನಾ ಮಾಡಿ ಶಿಕ್ಷಕ ಭಗವತಿ ಪ್ರಸಾದ್ ಎ.ಟಿ., ನಿರೂಪಿಸಿ, ಸೀತಮ್ಮ .ಕೆ.ಆರ್. ವಂದಿಸಿದರು. ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕೆಪಿಎಸ್ ಶಾಲಾ, ಹಳೆತಾಲೂಕಿನ ಅಂಕುರ್ ಪಬ್ಲಿಕ್ ಸ್ಕೂಲ್, ಬೇತು ಗ್ರಾಮದ ಎಕ್ಸೆಲ್ ಹಾಗೂ ಸೇಕ್ರೆಡ್ ಹಾರ್ಟ್ ಶಾಲೆಗಳಲ್ಲಿಯೂ ಮಕ್ಕಳ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಪೆರಾಜೆಯಲ್ಲಿ ಅಖಿಲ ಭಾರತ 72ನೇ ಸಹಕಾರ ಸಪ್ತಾಹಕ್ಕೆ ಚಾಲನೆ

ವಿಶ್ವ ಮಾರುಕಟ್ಟೆಯಲ್ಲಿ ಕಾಫಿಗೆ ಭಾರೀ ಬೇಡಿಕೆ

ಮಡಿಕೇರಿ, ನ.14– ಸರ್ಕಾರ ಕಾಫಿ ಬೆಳೆಗೆ ಹೆಚ್ಚಿನ ಉತ್ತೇಜನ ನೀಡುತ್ತಿದ್ದು, ವಿಶ್ವ ಮಾರುಕಟ್ಟೆಯಲ್ಲಿ ಬೇಡಿಕೆ ಇದೆ. ಆದ್ದರಿಂದ ಸಂಪಾಜೆ, ಕರಿಕೆ, ಪೆರಾಜೆ, ಚೆಂಬು ಭಾಗದಲ್ಲಿಯೂ ಸಹ ಕಾಫಿ ಬೆಳೆಯುವಂತಾಗಬೇಕು ಎಂದು ಕಾಫಿ ಮಂಡಳಿ ಸದಸ್ಯ ತಳೂರು ಕಿಶೋರ್ ಕುಮಾರ್ ಸಲಹೆ ಮಾಡಿದ್ದಾರೆ.

ಪೆರಾಜೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ಶುಕ್ರವಾರ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹಕ್ಕೆ ಚಾಲನೆ ನೀಡಿ, ಸರ್ಕಾರ ಕಾಫಿ ಉತ್ಪಾದನೆಗೆ ಸಹಾಯಧನ ಕಲ್ಪಿಸಿ ಪ್ರೋತ್ಸಾಹ ನೀಡುತ್ತಿದೆ. ಅದರಿಂದ ಅಡಿಕೆ, ರಬ್ಬರ್, ಗೇರು ಜೊತೆಗೆ ಕಾಫಿ ಬೆಳೆಯಲು ಪ್ರಯತ್ನಿಸುವಂತೆ ಸಲಹೆ ಮಾಡಿದರು. ರಾಜ್ಯದ ಕಾಫಿಗೆ ಉತ್ತಮ ಬೇಡಿಕೆ ಇದೆ. ಹಾಗಾಗಿ ಆರ್ಥಿಕತೆಗೆ ಹೆಚ್ಚಿನ ಒತ್ತು ನೀಡಿ ಸಹಕಾರ ಸಂಘ ಬಲವರ್ಧನೆಗೆ ಕೃಷಿಕರು ಶ್ರಮಿಸಬೇಕು. ಆ ನಿಟ್ಟಿನಲ್ಲಿ ಸಹಕಾರ ಸಂಘಗಳ ಮೂಲಕ ಸಾಲ ಸೌಲಭ್ಯ ದೊರೆಯಲಿದೆ ಎಂದು ನುಡಿದರು.



72ನೇ ಅಖಿಲ ಭಾರತ ಸಹಕಾರ ಸಪ್ತಾಹಕ್ಕೆ ಕಾಫಿ ಮಂಡಳಿ ಸದಸ್ಯ ತಳೂರು ಕಿಶೋರ್ ಕುಮಾರ್ ಉದ್ಘಾಟಿಸಿದರು

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಅಧ್ಯಕ್ಷ ಕೊಡಂದೇರ ಪಿ.ಗಣಪತಿ, ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷ ರಾಬಿನ್ ದೇವಯ್ಯ, ನಿರ್ದೇಶಕರಾದ ಎ.ಕೆ.ಮನುಮುತ್ತಪ್ಪ, ಶ್ಯಾಮಲಾ, ಕೆ.ಎಂ. ತಮ್ಮಯ್ಯ, ವಿ.ಕೆ.ಅಜಯ್ ಕುಮಾರ್, ಬಲ್ಲಾರಂಡ ಮಣಿಉತ್ತಪ್ಪ, ಎಸ್.ಆರ್.ಸುನಿಲ್‌ರಾವ್, ಎಂ.ಟಿ. ಸುಬ್ಬಯ್ಯ, ಪಿ.ಎನ್.ಚಂದ್ರಪ್ರಕಾಶ್, ಕೆ.ಎನ್.ಸತೀಶ್, ಪೆರಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗೇಶ್ ಕುಂದಲ್ಪಾಡಿ, ಉಪಾಧ್ಯಕ್ಷ ಪಿ.ಎಂ. ಅಶೋಕ್, ಸಹಕಾರ ಸಂಘಗಳ ಉಪ ನಿಬಂಧಕ ಎಚ್.ಡಿ.ರವಿಕುಮಾರ್ ಉಪಸ್ಥಿತರಿದ್ದರು. ಸಹಕಾರ ಯೂನಿಯನ್ನಿನ ಸಿಇಒ ಯೋಗೇಂದ್ರ ನಾಯಕ್ ಸ್ವಾಗತಿಸಿದರು.

ವಿದ್ಯಾರ್ಥಿ ಗೌತಮ ಪ್ರಾರ್ಥಿಸಿದರು. ಶಾಲಾ ವಿದ್ಯಾರ್ಥಿಗಳು ವಂದೇ ಮಾತರಂ ಗೀತೆ ಹಾಡಿದರು. ಪೆರಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಿಇಒ ಲೋಕೇಶ್ ವಂದಿಸಿದರು. ಸಹಕಾರ ಸಪ್ತಾಹ ಸಂದರ್ಭದಲ್ಲಿ ಆರೋಗ್ಯ ಉಚಿತ ತಪಾಸಣೆ ನಡೆಯಿತು. ಹಾಗೆಯೇ ಸಂಜೀವಿನಿ ಒಕ್ಕೂಟದ ಸದಸ್ಯರಿಂದ ತರಕಾರಿ ಹಾಗೂ ವಿವಿಧ ವಸ್ತುಗಳ ಮಾರಾಟ ಮೇಳ ನಡೆಯಿತು.

ಸುಂಟಿಕೊಪ್ಪದಲ್ಲಿ ನಾಳೆ ಅಖಿಲ ಭಾರತ ಸಹಕಾರ ಸಪ್ತಾಹ

ಮಡಿಕೇರಿ: ಅಖಿಲ ಭಾರತ 72ನೇ ಸಹಕಾರ ಸಪ್ತಾಹದ ಅಂಗವಾಗಿ ಸಹಕಾರ ಸಂಸ್ಥೆಗಳ ಮೂಲಕ ಗ್ರಾಮೀಣ ಅಭಿವೃದ್ಧಿಯ ಬಲವರ್ಧನೆ ದಿನಾಚರಣೆಯು ನ.16ರ ಬೆಳಗ್ಗೆ 10.30 ಗಂಟೆಗೆ ಇಲ್ಲಿನ ಫ್ಯಾಕ್ಸ್ ಮಂಜನಾಥಯ್ಯ ಸಹಕಾರ ಭವನದಲ್ಲಿ ನಡೆಯಲಿದೆ.


ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷ ಪಳೆಯಂಡ ರಾಬಿನ್ ದೇವಯ್ಯ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಅಧ್ಯಕ್ಷ ಕೊಡಂದೇರ ಪಿ.ಗಣಪತಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಜೆರ್ಮಿ ಡಿಸೋಜ ಮಹಿಳಾ ಸಹಕಾರ ಸಂಘದ ಅಧ್ಯಕ್ಷೆ ಲೀಲಾ ಮೇದಪ್ಪ ಇತರರು ಪಾಲ್ಗೊಳ್ಳಲಿದ್ದಾರೆ.

ಹೆಬ್ಬಾಲೆ, ಶಿರಂಗಾಲ ದೇವಾಲಯದಲ್ಲಿ ಸರಣಿ ಕಳ್ಳತನ : ಚಿನ್ನಾಭರಣ ಕಳವು

ಕುಶಾಲನಗರ, ನ.14–ಸಮೀಪದ ಹೆಬ್ಬಾಲೆ ಹಾಗೂ ಶಿರಂಗಾಲ ಗ್ರಾಮದ ದೇವಸ್ಥಾನಗಳಲ್ಲಿ ಗುರುವಾರ ರಾತ್ರಿ ಸರಣಿ ಕಳ್ಳತನ ನಡೆದಿದೆ.

ಹೆಬ್ಬಾಲೆ ಗ್ರಾಮದ ಶ್ರೀ ಬನಶಂಕರಿ ದೇವಾಲಯದ ಗರ್ಭಗುಡಿ ಬೀಗ ಮುರಿದು ಒಳನುಗ್ಗಿರುವ ಖದೀಮರು ವಿಗ್ರಹದಲ್ಲಿದ್ದ ಮೂರು ಚಿನ್ನದ ತಾಳಿಸರ ಹಾಗೂ ಬೆಳ್ಳಿ ಕಾಲು ಉಂಗುರವನ್ನು ಕಳ್ಳತನ ಮಾಡಿದ್ದಾರೆ. ಪಕ್ಕದ ಗಣೇಶ ದೇವಾಲಯಕ್ಕೂ ಕಳ್ಳರು ನುಗ್ಗಿದ್ದು, ಅಲ್ಲಿ ಏನು ಸಿಗದೆ ವಾಪಸು ತೆರಳಿದ್ದಾರೆ. ಅದೇ ರೀತಿ ಶಿರಂಗಾಲ ಗ್ರಾಮದ ಶ್ರೀ ಮಂಟಿಗಮ್ಮ ದೇವಾಲಯದಲ್ಲಿ ಒಳ್ಳ ನುಗ್ಗಿದ ಕಳ್ಳರು ಚಿನ್ನಾಭರಣ ಹಾಗೂ ಹಣಕ್ಕಾಗಿ ಜಾಲಾಡಿದ್ದಾರೆ. ಆದರೆ ಅಲ್ಲಿ ಯಾವುದೇ ಬೆಲೆ ಬಾಳುವ ಆಭರಣ ಸಿಕ್ಕಿಲ್ಲ. ನೂತನ ವಿನಾಯಕ ದೇವಾಲಯಕ್ಕೆ ನುಗ್ಗಿ ಕಾಣಿಕೆ ಡಬ್ಬಿಯನ್ನು ಕದ್ದೊಯ್ದಿದ್ದಾರೆ.

ಅಪರಾಧ ವಿಭಾಗದ ಪಿಎಸ್‌ಐ ಸ್ವಾಮಿ ಹಾಗೂ ಸಿಬ್ಬಂದಿ ಜಿಲ್ಲಾ ಶ್ವಾನದಳದ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಶ್ವಾನದಳದ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

ಆದರೆ ಕಳ್ಳರ ಯಾವುದೇ ಸುಳಿವು ಸಿಕ್ಕಿಲ್ಲ. ಹೆಬ್ಬಾಲೆ ಬನಶಂಕರಿ ದೇವಾಲಯ ಸಮಿತಿ ಅಧ್ಯಕ್ಷ ಎಚ್.ಟಿ.ರಮೇಶ್ ಹಾಗೂ ಕಾರ್ಯದರ್ಶಿ ಎಚ್.ಟಿ.ಸೋಮಣ್ಣ ಮಾತನಾಡಿ, ಗರ್ಭಗುಡಿ ಬೀಗ ಮುರಿದು, ವಿಗ್ರಹಕ್ಕೆ ಹಾಕ ಲಾಗಿದ್ದ ಮೂರು ಚಿನ್ನದ ತಾಳಿ ಹಾಗೂ ಬೆಳ್ಳಿ ಕಾಲು ಉಂಗುರವನ್ನು ದೋಚಿದ್ದಾರೆ. ಕಳೆದ ವಾರ ಕಾಣಿಕೆ ಡಬ್ಬಿಯಲ್ಲಿದ್ದ ಹಣವನ್ನು ಸಮಿತಿಯವರು ತೆಗೆದುಕೊಂಡಿದ್ದರಿಂದ ಖಾಲಿ ಕಾಣಿಕೆ ಡಬ್ಬಿಯನ್ನು ಅಲ್ಲಿಯೆ ಬಿಟ್ಟು ಹೋಗಿದ್ದಾರೆ ಎಂದರು.

ಮನೆಗಳ್ಳತನ : ಇಬ್ಬರ ಬಂಧನ

ಮಡಿಕೇರಿ: ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯೊಂದರಲ್ಲಿ ನಗದು ಮತ್ತು ಚಿನ್ನಾಭರಣ ಕಳವು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ.

ಸಿದ್ದಾಪುರ ಗ್ರಾಮದ ಎನ್.ಸಿದ್ದಲಿಂಗ(28) ಮತ್ತು ಎನ್.ರಘು(26) ಅವರಿಂದ 8.50 ಲಕ್ಷ ರೂ. ನಗದು ಹಾಗೂ 120 ಗ್ರಾಂ ಚಿನ್ನಾಭರಣವನ್ನು ವಶಕ್ಕೆ ಪಡೆಯಲಾಗಿದೆ. ನ.5ರಂದು ಸಂಪಾಜೆ ಸಮೀಪದ ಎಂ.ಚೆಂಬು ಗ್ರಾಮದ ವೀರಪ್ಪ.ಪಿ.ಪಿ. ಎಂಬವರು ಮನೆಯಲ್ಲಿ ಇಲ್ಲದ ಸಂದರ್ಭ ಮನೆಗೆ ನುಗ್ಗಿ ಕ್ಯಾಶ್ ಲಾಕರ್‌ನಲ್ಲಿದ್ದ 15 ಸಾವಿರ ನಗದು ಮತ್ತು 120 ಗ್ರಾಂ ಚಿನ್ನಾಭರಣವನ್ನು ಕಳವು ಮಾಡಿದ್ದರು. ಸಿದ್ದಾಪುರ ಪೊಲೀಸ್ ಠಾಣಾಧಿಕಾರಿ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದಾರೆ.

ಕೊಡಗು 9ನೇ ವರ್ಷದ ಕಲಾ ಶಿಬಿರಕ್ಕೆ ಚಾಲನೆ

ವಿರಾಜಪೇಟೆ: ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಹುಟ್ಟಿನಿಂದ ಬಂದಿರುವ ಬಳುವಳಿಯಾಗಿದೆ. ಕಲೆಯನ್ನು ಪ್ರೋತ್ಸಾಹಿಸುವ ಮನಸ್ಸುಗಳಿದ್ದಲ್ಲಿ ಕಲೆಗಳಿಗೆ ಜೀವಬರುತ್ತದೆ ಎಂದು ಕಲಾವಿದರ ಅನಿಸಿಕೆ.

ಕೊಡಗು 9ನೇ ವರ್ಷದ ಕಲಾ ಶಿಬಿರವು ನಗರದ ಮೊಗರಗಲ್ಲಿ ಸಾಧಿಕ್ ಅರ್ಟ್ಸ್ ಲಿಂಕ್‌ನ ಆವರಣದಲ್ಲಿ ನಡೆಯಿತು. ಶಿಬಿರದ ಲಾಂಛನ ಬಿಡುಗಡೆಗೊಳಿಸಿ ಮಾತನಾಡಿದ ಹವ್ಯಾಸಿ ಛಾಯಾಗ್ರಾಹಕ ಜುನೈಶ್ ಕಣ್ಣೂರು, ಕಲೆಯು ನಿಂತ ನೀರಲ್ಲ ಬದಲಿಗೆ ಹರಿಯುವ ನದಿಯಂತೆ, ಎಲ್ಲಾ ಮನಸ್ಸುಗಳಲ್ಲಿ ಕಲೆ ಸುಪ್ತವಾಗಿ ಉಳಿದಿದೆ. ಅದನ್ನು ಪ್ರದರ್ಶನ ಮಾಡಿದಲ್ಲಿ ಕಲಾವಿದ ಪ್ರಚಾರಕ್ಕೆ ಬರುತ್ತಾನೆ ಎಂದರು

ಹಿರಿಯ ಚಿತ್ರಕಲಾವಿದ ಬಾವ ಮಾಲ್ದಾರೆ ಪ್ರಾಸ್ತಾವಿಕ ನುಡಿಗಳನ್ನಾಡಿ ಕಲೆಯ ಶ್ರೀಮಂತಿಕೆಯನ್ನು ಗೌರವಿಸಬೇಕು. ಯಾವ ವ್ಯಕ್ತಿ ಕಲೆಯನ್ನು ಅಭಿಮಾನದಿಂದ ಪ್ರೋತ್ಸಾಹಿಸಿ, ಗೌರವಿಸಿ ಕಲೆಗಾರರನ್ನು ಮುಕ್ತಮನಸ್ಸಿನಿಂದ ಪ್ರಶಂಸೆ ಮಾಡುತ್ತಾನೋ, ಕಲೆಯ ಅಭಿಮಾನಿಯಾಗುತ್ತಾನೆ. ರಾಜ್ಯ ಹಾಗೂ ಕೇರಳ ರಾಜ್ಯದ ಕಲಾವಿದರನ್ನು ಒಂದೇ ವೇದಿಕೆಯಲ್ಲಿ ಸಂಘಟಿಸಿ ಶಿಬಿರವನ್ನು ಆಯೋಜಿಸಿಕೊಂಡು ಬರುತ್ತಿರುವ ಸಾಧಿಕ್ ಸಾಧನೆ ಉನ್ನತ್ತಿಯಾಗಲೆಂದು ಶುಭ ಹಾರೈಸಿದರು.

ನಟ ವಾಂಚಿರ ಟಿ. ನಾಣಯ್ಯ ಮಾತನಾಡಿ, ಕಲೆಗೆ ಯಾವುದೇ ಜಾತಿ, ಮತ, ಧರ್ಮ, ಬಡವ ಬಲ್ಲಿದ ಎನ್ನುವ ಭೇದವಿಲ್ಲ, ಕಲೆ ಎನ್ನುವುದು ಸುಲಭವಾಗಿ ಕರಗತಗೊಳಿಸಲು ಸಾಧ್ಯವಾಗುವುದಿಲ್ಲ ಬದಲಿಗೆ ಕಲೆಯನ್ನು ಅಪ್ಪುಗೆಯಿಂದ ಆಲಿಂಗಿಸಿ ಕಲೆಗಾರನಾಗಲು ಸಾಧ್ಯ ಎಂದು ಬಣ್ಣಿಸಿದರು.

ರಾಜ್ಯ ಪ್ರಶಸ್ತಿ ವಿಜೇತ ಬಿ.ಆರ್ ಸತೀಶ್, ಪುರಸಭಾ ಮಾಜಿ ಸದಸ್ಯ ಮೊಹಮ್ಮದ್ ರಾಫಿ, ವಾಸವನ್ ಪಯ್ಯಟಂ, ನಿವೃತ್ತ ಚಿತ್ರಕಲಾ ಶಿಕ್ಷಕ ಎಂ. ದಾಮೋಧರನ್ ಸಾಹಿತಿ ವೈಲೇಶ್ ಮಾತನಾಡಿದರು. ಸಾಧಿಕ್ ಹಂಸ ಅಧ್ಯಕ್ಷತೆ ವಹಿಸಿದ್ದರು.



ಕೊಡಗು 9ನೇ ವರ್ಷದ ಕಲಾ ಶಿಬಿರದಲ್ಲಿ ಕಲಾವಿದರಿಂದ ರಚನೆಗೊಂಡಿರುವ ಚಿತ್ರಗಳು

ಕೆರೆಗಳಿಗೆ ನೀರು ತುಂಬಿಸಿ, ಜಾಣತನ ತೋರಿಸಿ

ಶಾಸಕ ಗಣೇಶ್‌ಪ್ರಸಾದ್‌ಗೆ ಮಾಜಿ ಶಾಸಕ ಸಿ.ಎಸ್.ನಿರಂಜನಕುಮಾರ್ ತಿರುಗೇಟು

ಗುಂಡ್ಲುಪೇಟೆ, ನ.14 (ಸೋಮ್.ಜಿ)– ಅವರಿವರನ್ನು ಪೆದ್ದ ಎಂದು ಟೀಕಿಸುವ ಮೊದಲು ರೈತರ ಮತ್ತು ದಲಿತರ ಮೇಲೆ ಕಾಳಜಿ ಇಲ್ಲದ ಕ್ಷೇತ್ರದ ಶಾಸಕ ಗಣೇಶ್‌ಪ್ರಸಾದ್ ತಾಲೂಕಿನ ಕೆರೆಗಳಿಗೆ ನೀರು ತುಂಬಿಸಿ ತಮ್ಮ ಜಾಣತನ ತೋರಿಸಲಿ ಎಂದು ಮಾಜಿ ಶಾಸಕ ನಿರಂಜನ ಕುಮಾರ್ ತಿರುಗೇಟು ನೀಡಿದ್ದಾರೆ.



ಪ್ರವಾಸಿ ಮಂದಿರದಲ್ಲಿ ಮಾಜಿ ಶಾಸಕ ನಿರಂಜನಕುಮಾರ್ ಸುದ್ದಿಗೋಷ್ಠಿ ನಡೆಸಿದರು.

ಕೆರೆಗಳಿಗೆ ನೀರು ತುಂಬಿಸುವಂತೆ ಒತ್ತಾಯಿಸಿ ಬಿಜೆಪಿ ಪಾದಯಾತ್ರೆ ನಡೆಸಿದ ಬಗ್ಗೆ ಶಾಸಕ ಗಣೇಶ್ ಪ್ರಸಾದ್ ಟೀಕೆ ಮಾಡಿದ ಬಗ್ಗೆ ಶುಕ್ರವಾರ ಪಟ್ಟಣದ ಪ್ರವಾಸಿಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರೈತಪರವಾಗಿ ಕೆಲಸ ಮಾಡುವ ಇಚ್ಛಾಶಕ್ತಿ ಕೊರತೆಯಿಂದ ಇಂದು ಕ್ಷೇತ್ರಕ್ಕೆ ಸಂಕಷ್ಟ ಬಂದೊದಗಿದೆ, ನೀರಿಗಾಗಿ ಅಹೋರಾತ್ರಿ ಧರಣಿ ನಡೆಸುತ್ತಿರುವ ರೈತರಿಗೆ ಮೊದಲ ವಾರದಲ್ಲಿ ಕೆರೆಗಳಿಗೆ ನೀರು ತುಂಬಿಸಲು ಬದ್ದ ಎಂದವರೇ ಈಗ ವರಸೆ ಬದಲಾಯಿಸಿದ್ದೀರಿ, ಚುನಾಯಿತ ಜನ ಪ್ರತಿನಿಧಿಯಾಗಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಬೇಕಿದ್ದವರು ಸ್ವಾರ್ಥತನಕ್ಕೆ ನಿಮ್ಮ ಕ್ರಷರ್‌ಗಾಗಿ ದಲಿತರ ಮೇಲೆ ಕಾಳಜಿ ಯನ್ನು ಬಿಟ್ಟು ರಸ್ತೆ ಮಾಡಿಸಿಕೊಂಡಿದ್ದೀರಿ ಇದೇ ನಿಮ್ಮ ಜಾಣತನ ಎಂದು ಕಿಡಿಕಾರಿದರು.

ಕ್ಷೇತ್ರದ ಏಳ್ಗೆ ಕುರಿತು ಕಿಂಚಿತ್ತೂ ಆಸಕ್ತಿಯಿಲ್ಲದೆ ಸ್ವಂತ ಏಳ್ಗೆಗೆ ಹೆಚ್ಚಿನ ಒತ್ತು ನೀಡಿದ್ದೀರಿ. ಸ್ವಗ್ರಾಮ ಹಾಲಹಳ್ಳಿ ಸೇರಿದಂತೆ ನಿಮ್ಮ ಕ್ರಷರ್‌ಗೆ ಗುಣಮಟ್ಟದ ಸಂಪರ್ಕ ರಸ್ತೆ ಮಾಡಿಸಿಕೊಳ್ಳುವ ನಿಮ್ಮ ಬದ್ಧತೆ ಹಾಗೂ ಬುದ್ಧಿವಂತಿಕೆ ಕುರಿತು ಕ್ಷೇತ್ರದ ಜನತೆಗೆ ಅರಿವಿದೆ ಎಂದು ಖಾರವಾಗಿ ಪ್ರತಿಕ್ರಿಯಿಸಿ, ಕ್ಷೇತ್ರದ ಕೆಲಸ ಮಾಡಲಾಗದಿದ್ದರೆ ಕೂಡಲೇ ರಾಜೀನಾಮೆ ನೀಡಿ ಎಂದು ಸವಾಲು ಹಾಕಿದರು.

ಪಟ್ಟಣಕ್ಕೆ ಎಕ್ಸ್‌ಪ್ರೆಸ್ ಕುಡಿಯುವ ನೀರು ಸಂಪರ್ಕ, ಬೇಗೂರಿನಲ್ಲಿ ಹತ್ತಿ ಮಾರುಕಟ್ಟೆ ಹಾಗೂ ಬೊಮ್ಮನಹಳ್ಳಿ ಸಮೀಪದ ಅಂಬೇಡ್ಕರ್ ಹಾಸ್ಟೆಲ್‌ಗಳಿಗೆ ಅನುದಾನ ನೀಡಿದ್ದು ಬಿಜೆಪಿ ಅವಧಿಯಲ್ಲಿ. ಆದರೆ ಟೆಂಡರ್ ಪ್ರಕ್ರಿಯೆ ವಿಳಂಬದಿಂದ ಕಾಮಗಾರಿ ಆರಂಭಿಸಲು ಸಾಧ್ಯವಾಗಲಿಲ್ಲ. ಆದರೆ ಶಾಸಕರು ಇವೆಲ್ಲವೂ ತಮ್ಮದೇ ಕೆಲಸ ಎಂದು ಹೇಳಿಕೊಳ್ಳುತ್ತಿದ್ದಾರೆ ಏನೇ ಆಗಲಿ ಕ್ಷೇತ್ರದ ಅಭಿವೃದ್ದಿಗೆ ಪೂರಕವಾಗಿ ನಡೆದುಕೊಳ್ಳುವುದನ್ನು ಇನ್ನಾದರೂ ಕಲಿಯಲಿ ಎಂದು ಸಲಹೆ ನೀಡಿದ್ದಾರೆ.

ಮಂಡಲಾಧ್ಯಕ್ಷ ಸಿ.ಮಹದೇವ ಪ್ರಸಾದ್, ಪುರಸಭೆ ಸದಸ್ಯ ನಾಗೇಶ್, ಮುಖಂಡ ಮಂಜು, ಮಹೇಶ್ ಕಿರಣ್, ಕೃಷ್ಣಮೂರ್ತಿ, ನಾಗರಾಜು ಇದ್ದರು.

ತಿಮ್ಮರಾಜಿಪುರ ವಸತಿ ಶಾಲೆಯಲ್ಲಿ ಸೈಬರ್ ಅಪರಾಧ ಅರಿವು



ಕಿತ್ತೂರು ರಾಣಿ ಚೆನ್ನಮ್ಮ ಹೆಣ್ಣು ಮಕ್ಕಳ ವಸತಿ ಶಾಲೆಯಲ್ಲಿ ಆನ್‌ಲೈನ್ ಶಾಪಿಂಗ್‌ನಿಂದ ಆಗುವ ತೊಂದರೆಗಳ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು.

ಚಾಮರಾಜನಗರ, ನ.14–ಕೊಳ್ಳೇಗಾಲ ತಾಲೂಕು ತಿಮ್ಮರಾಜಿಪುರದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಹೆಣ್ಣು ಮಕ್ಕಳ ವಸತಿ ಶಾಲೆ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳಿಗೆ ಸೈಬರ್ ಅಪರಾಧ ಆನ್‌ಲೈನ್ ಶಾಪಿಂಗ್ ನಿಂದಾಗುವ ವಂಚನೆ, ತೊಂದರೆ, ಅನಾಹುತಗಳ ಬಗ್ಗೆ ತಿಳಿವಳಿಕೆ, ಅರಿವು ಕಾರ್ಯಕ್ರಮ ಇಂದು ನಡೆಸಲಾಯಿತು.

ಜಿಲ್ಲಾ ಪೊಲೀಸ್ ಸೈಬರ್ ಕ್ರೈಂ ಪೊಲೀಸ್ ಠಾಣೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸೈಬರ್ ಅಪರಾಧ, ಆನ್‌ಲೈನ್ ಶಾಪಿಂಗ್‌ನಿಂದ ಉಂಟಾಗಬಹುದಾದ ತೊಂದರೆಗಳ ಬಗ್ಗೆ ವಿವರವಾಗಿ ಮನವರಿಕೆ ಮಾಡಿಕೊಡಲಾಯಿತು.

ಸೈಬರ್ ಕ್ರೈಂನ ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟ್‌ಗಳಾದ ಮಹದೇವಸ್ವಾಮಿ, ಬಂಗಾರು, ಹೆಡ್‌ಕಾನ್ಸ್‌ಟೇಬಲ್‌ಗಳಾದ ರಮೇಶ್, ಸುರೇಶ್ ಮಾತನಾಡಿ, ಅಪರಿಚಿತರಿಗೆ ಓಟಿಪಿ ನೀಡಬಾರದು. ಅಪರಿಚಿತ ಲಿಂಕ್‌ಗಳನ್ನು ತೆರೆಯಬಾರದು. ವೈಯಕ್ತಿಕ ಹಾಗೂ ಕುಟುಂಬದ ಫೋಟೋಗಳನ್ನು ಮೊಬೈಲ್ ಡಿಪಿಯಲ್ಲಿ ಹಾಕಬಾರದು, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬಾರದು ಎಂದು ತಿಳಿಸಿದರು.

ಉದ್ಯೋಗ, ಹಣ ಹೂಡಿಕೆ ವಂಚನೆ, ಲಕ್ಕಿ ಡ್ರಿಪ್ ಲಾಟರಿ, ಆನ್‌ಲೈನ್ ಶಾಪಿಂಗ್ ಮಾಡುವುದರಿಂದ ಆಗಬಹುದಾದ ತೊಂದರೆ ಮತ್ತು ಅನಾಹುತಗಳ ಬಗ್ಗೆ ಎಚ್ಚರಿಕೆ ವಹಿಸಬೇಕು. ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್, ಇನ್ಸ್ಟಾಗ್ರಾಮ್, ವಾಟ್ಸಪ್, ಟೆಲಿಗ್ರಾಂಗಳಿಂದ ದೂರ ಇರುವಂತೆ ಸಲಹೆ ಮಾಡಿದರು. ಸೈಬರ್ ಅಪರಾಧ ವಂಚನೆಗಳ ಬಗ್ಗೆ ತಂದೆ –ತಾಯಿ, ಪೋಷಕರು ಹಾಗೂ ಸ್ನೇಹಿತರಿಗೂ ಮಾಹಿತಿ ನೀಡಬೇಕು ಎಂದರು. ವಸತಿ ಶಾಲೆಯ ಪ್ರಾಂಶುಪಾಲ ಮಹೇಶ್ ಹಾಗೂ ಸಹಶಿಕ್ಷಕರು ಉಪಸ್ಥಿತರಿದ್ದರು.

ಇಮ್ಮಡಿ ಮಹದೇವಸ್ವಾಮಿ ಜಾಮೀನನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಮನವಿ



ಇಮ್ಮಡಿ ಮಹದೇವಸ್ವಾಮಿ ಜಾಮೀನನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಗ್ರಾಮಸ್ಥರ ನಿಯೋಗ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಕೊಳ್ಳೇಗಾಲ, ನ.14–ಸುಳ್ವಾಡಿ ಕಿಚ್ಚುಗುತ್ತಿ ಮಾರಮ್ಮ ದೇವಸ್ಥಾನದಲ್ಲಿ ವಿಷಪ್ರಸಾದ ವಿತರಣೆ ಪ್ರಕರಣದ ಮೊದಲನೇ ಆರೋಪಿ ಇಮ್ಮಡಿ ಮಹದೇವಸ್ವಾಮಿಗೆ ನೀಡಿರುವ ಜಾಮೀನನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಗ್ರಾಮಸ್ಥರು ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಸುಳ್ವಾಡಿ ಕಿಚ್ಚುಗುತ್ತಿ ಮಾರಮ್ಮ ದೇವಸ್ಥಾನದಲ್ಲಿ ವಿಷಪ್ರಸಾದ ವಿತರಣೆ ಪ್ರಕರಣಕ್ಕೆ ಆರು ವರ್ಷಗಳಾದ ಹಿನ್ನೆಲೆಯಲ್ಲಿ ಮೆರವಣಿಗೆ ಮೂಲಕ ಉಪ ವಿಭಾಗಾಧಿಕಾರಿ ಕಚೇರಿಗೆ ತೆರಳಿದ ಗ್ರಾಮಸ್ಥರು, ವಿಷಪ್ರಸಾದವನ್ನು ಸೇವಿಸಿ ಮೃತಪಟ್ಟ ಹಾಗೂ ಅಸ್ವಸ್ಥರಾಗಿ ನರಳುತ್ತಿರುವ ಕುಟುಂಬದವರಿಗೆ ಸರ್ಕಾರ ನುಡಿದಂತೆ ನಡೆದು ಸಂತ್ರಸ್ಥರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ಪಿಜಿ ಮಣಿ, ಷಣ್ಮುಗಂ, ಶೋಭ ಎಮ್.ಜಿ ದೊಡ್ಡಿ, ನರಸಿಂಹ, ದೊರೆ, ನೇತ್ರಾವತಿ, ದೊಡ್ಡಾಣೆ ಪುಟ್ಟಿ, ಹಳೇಮಠ ಸುಕನ್ಯ, ಸುಳ್ವಾಡಿ ಮಾದೇವಿ, ದೊಡ್ಡಾಣೆ ಬಸಮ್ಮ, ಎಂ.ಜಿ.ದೊಡ್ಡಿ ವೀರಮ್ಮ, ಬಿದರಹಳ್ಳಿ ರುಕ್ಕಮ್ಮ ಇನ್ನಿತರರಿದ್ದರು.

ಎನ್‌ಡಿಎ ಮೈತ್ರಿಕೂಟ ದಿಗ್ವಿಜಯ : ಬಿಜೆಪಿ ವಿಜಯೋತ್ಸವ

ಚಾಮರಾಜನಗರ: ಬಿಹಾರದ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ದಿಗ್ವಿಜಯ ಸಾಧಿಸಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಬಿಜೆಪಿ ಪಟಾಕಿ ಸಿಡಿಸಿ, ಸಿಹಿ ವಿತರಿಸುವ ಮೂಲಕ ವಿಜಯೋತ್ಸವ ಆಚರಿಸಿತು.

ನಗರದ ಚಾಮರಾಜೇಶ್ವರ ಉದ್ಯಾನವನದಲ್ಲಿ ಸೇರಿದ ಬಿಜೆಪಿ ಮುಖಂಡರು, ಕಾರ್ಯಕರ್ತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಉದ್ದನೆಯ ಸರಪಟಾಕಿ ಸಿಡಿಸಿ, ಸಿಹಿ ಹಂಚಿ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ವರಿಷ್ಠರ ಪರ ಜೈಕಾರ ಕೂಗಿ ಸಂಭ್ರಮಿಸಿದರು.

ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, 2 ವರ್ಷದಿಂದ ಕಾಂಗ್ರೆಸ್‌ನವರು ಮತಗಳ್ಳತನವಾಗಿದೆ ಎಂದು ರಾಜ್ಯಾದ್ಯಂತ ಸಹಿ ಸಂಗ್ರಹ ಚಳವಳಿ ಮಾಡುತ್ತಿದ್ದಾರೆ. ಚುನಾವಣೆಯಲ್ಲಿ ಮತಗಳ್ಳತನವಾಗಿದೆ ಎಂದು ಹೇಳುತ್ತಿದ್ದರು. ಆದರೆ ರಾಹುಲ್‌ಗಾಂಧಿಯವರ ಹೋರಾಟ ಪ್ರಧಾನಿಮಂತ್ರಿ ನರೇಂದ್ರ ಮೋದಿಯವರ ಜನಪ್ರಿಯತೆ ಮುಂದೆ ಕುಗ್ಗಿದೆ ಎನ್ನುವುದನ್ನು ಬಿಹಾರ ಚುನಾವಣೆ ತೋರಿಸಿದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ. ವೃಷಭೇಂದ್ರಪ್ಪ ಮಾತನಾಡಿ, ಬಹುಮತದಿಂದ ಎನ್‌ಡಿಎ ಅಭೂತಪೂರ್ವ ಗೆಲುವು ಸಾಧಿಸಿರುವುದು ದೇಶದ ಜನತೆಗೆ ಸಂದ ಗೌರವವಾಗಿದೆ ಎಂದರು.

ವಿಜಯೋತ್ಸವದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ನಗರ ಮಂಡಲ ಅಧ್ಯಕ್ಷ ಶಿವರಾಜ್, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಳ್ಳಿ ಕುಮಾರ್, ಓಬಿಸಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದು ಶೆಟ್ಟಿ, ಚೂಡಾ ಮಾಜಿ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ, ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಜಿಲ್ಲಾ ಮೋರ್ಚಾ ಅಧ್ಯಕ್ಷೆ ಕುಮಲಮ್ಮ, ಪ್ರಧಾನ ಕಾರ್ಯದರ್ಶಿ ಶೈಲಜಾ, ಹುಲ್ಲಿನ ಶಿವಣ್ಣ, ಚಂದ್ರಶೇಖರ್, ಕೋಡಿಉಗನೆ ಮಂಜುನಾಥ್, ಕೂಸಣ್ಣ, ಮಹೇಶ್, ನಗರಸಭಾ ಸದಸ್ಯ ಮನೋಜ್ ಪಟೇಲ್, ಅಗರ ರಾಜು, ಚಂದ್ರಶೇಖರ್, ಆನಂದ್ ಭಗಿರಥ, ಗುರುಪ್ರಸಾದ್, ಮಂಜುನಾಥ್, ರಾಮ ಸಮುದ್ರ ಶಿವಣ್ಣ, ವೇಣುಗೋಪಾಲ್ ಇತರರಿದ್ದರು.



ಬಿಹಾರದ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ದಿಗ್ವಿಜಯ ಸಾಧಿಸಿರುವ ಹಿನ್ನೆಲೆಯಲ್ಲಿ ಬಿಜೆಪಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿತು.

ಹರದನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಶ್ವ ಮಧುಮೇಹ ದಿನ ಆಚರಣೆ



ಹರದನಹಳ್ಳಿ ಪಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆದ ವಿಶ್ವ ಮಧುಮೇಹ ದಿನಾಚರಣೆ ಕಾರ್ಯಕ್ರಮದಲ್ಲಿ ಎನ್.ಸಿ.ಡಿ ಕಾರ್ಯಕ್ರಮಾಧಿಕಾರಿ ಡಾ. ಸುಂದರೇಶ್ ಮಾತನಾಡಿದರು.

ಚಾಮರಾಜನಗರ, ನ.14–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಹರದನಹಳ್ಳಿ ಪಾಥಮಿಕ ಆರೋಗ್ಯ ಕೇಂದ್ರ ಸಹಯೋಗದಲ್ಲಿ ವಿಶ್ವ ಮಧುಮೇಹ ದಿನಾಚರಣೆ ಕಾರ್ಯಕ್ರಮವನ್ನು ಹರದನಹಳ್ಳಿ ಪಾಥಮಿಕ ಆರೋಗ್ಯ ಕೇಂದ್ರದಲ್ಲಿಂದು ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಎನ್.ಸಿ.ಡಿ ಕಾರ್ಯಕ್ರಮಾಧಿಕಾರಿ ಡಾ. ಸುಂದರೇಶ್ ರಕ್ತದಲ್ಲಿನ ಗ್ಲೂಕೋಸ್ ಉತ್ಪಾದನೆ ಹೆಚ್ಚಾಗಿ ಇನ್ಸುಲಿನ್ ಉತ್ಪಾದನೆ ಕಡಿಮೆ ಆದಾಗ ಮಧುಮೇಹ ಕಂಡುಬರುತ್ತದೆ. ಜನರ ಜೀವನ ಶೈಲಿಯ ಮಾರ್ಪಾಡು ಹಾಗೂ ಬದಲಾದ ಜೀವನ ಶೈಲಿಯಿಂದ ಮಧು ಮೇಹ ಬರುವ ಸಾಧ್ಯತೆ ಹೆಚ್ಚಿದೆ. ಜನರು ಚಟುವಟಿಕೆ ಜೀವನ ನಡೆಸಿ, ಸತ್ವಭರಿತ ಆಹಾರ ಪದಾರ್ಥಗಳನ್ನು ಸೇವನೆ ಮಾಡುವುದರಿಂದ ಕಾಯಿಲೆಯಿಂದ ದೂರ ಉಳಿಯಬಹುದು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪಿಹೆಚ್ ಸಿ ವೈದ್ಯಾಧಿಕಾರಿ ಡಾ. ಗುರುರಾಜ್ ಮಾತನಾಡಿ ಹಿಂದೆ ಸಕ್ಕರೆ ಕಾಯಿಲೆ ಕಡಿಮೆ ಪ್ರಮಾಣದಲ್ಲಿ ವರದಿಯಾಗುತ್ತಿತ್ತು. ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ ನಾಣ್ಣುಡಿಯಂತೆ ಜನರು ಶ್ರಮ ರಹಿತ ಜೀವನದಿಂದ ಹೊರಬಂದು ದೈಹಿಕ ಚಟುವಟಿಕೆ ಹಾಗೂ ಹಸಿರು ಸೊಪ್ಪು, ತರಕಾರಿ ಹೆಚ್ಚಾಗಿ ಉಪಯೋಗಿಸಿ ಆರೋಗ್ಯವಂತರಾಗುವಂತೆ ಸಲಹೆ ಮಾಡಿದರು.

ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮುದಾಯ ಆರೋಗ್ಯಾಧಿಕಾರಿ ಸೌಜನ್ಯ, ಶುಶ್ರೂಷಣಾಧಿಕಾರಿ ರಾಜೇಶ್ವರಿ, ಲಕ್ಷ್ಮೀ, ಆರೋಗ್ಯ ಸಿಬ್ಬಂದಿ ಮಹದೇವಸ್ವಾಮಿ, ಇನ್ನಿತರರು ಉಪಸ್ಥಿತರಿದ್ದರು.

ನಾಳೆ ನಟರಾಜುಗೆ ರಾಜ್ಯೋತ್ಸವ ಪುರಸ್ಕಾರ



ಕೊಳ್ಳೇಗಾಲ: ಪಟ್ಟಣದ ಭೀಮನಗರದ ಹವ್ಯಾಸಿ ಬರಹಗಾರ ಎಸ್. ನಟರಾಜು ಬರೆದಿರುವ 'ಕಾಲ್ತುಳಿತದಿಂದ ಮಡಿದವರಿಗೆ ಭಾವಪೂರ್ಣ ಶ್ರದ್ಧಾಂಜಲಿ' ಎಂಬ ಕವನ ಕಸ್ತೂರಿ ಸಿರಿಗನ್ನಡ ವೇದಿಕೆ (ಮಂಡ್ಯ) ನೀಡುವ 70ನೇ ರಾಜ್ಯೋತ್ಸವ ಪುರಸ್ಕಾರಕ್ಕೆ ಆಯ್ಕೆಯಾಗಿದೆ. ನ.16 (ಭಾನುವಾರ)ರ ಬೆಳಿಗ್ಗೆ 10 ಗಂಟೆಗೆ ಮಂಡ್ಯದ ಗಾಂಧಿಭವನದಲ್ಲಿ ಆಯೋಜಿಸಿರುವ ರಾಜ್ಯಮಟ್ಟದ ಕವಿ ಕಾವ್ಯ ಮೇಳ, 'ಕೋಲ್ಮಿಂಚು' ಕವನ ಸಂಕಲನ ಬಿಡುಗಡೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರಿಗೆ 70ನೇ ಕನ್ನಡ ರಾಜ್ಯೋತ್ಸವ ಪುರಸ್ಕಾರ ಸಮಾರಂಭದಲ್ಲಿ ಪ್ರಶಸ್ತಿಯನ್ನು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ ಪ್ರದಾನ ಮಾಡಲಿದ್ದಾರೆ.

ಇಂದು ಏಳು ಅದ್ಭುತ ಪುರಾತನ ತಾಣಗಳ ಮಾದರಿ ವಸ್ತುಪ್ರದರ್ಶನ

ಚಾಮರಾಜನಗರ, ನ.14–ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಇತಿಹಾಸ ವಿಭಾಗ ಮತ್ತು ಐ.ಕ್ಯೂ.ಎ.ಸಿ ಸಹಯೋಗದಲ್ಲಿ ರಾಜ್ಯದ ಪ್ರಮುಖ ಐತಿಹಾಸಿಕ ಪಾರಂಪರಿಕ ಕೋಟೆಗಳು ಹಾಗೂ ಏಳು ಅದ್ಭುತ ಪುರಾತನ ತಾಣಗಳ ಮಾದರಿಯ ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ನ.15ರ.ಬೆಳಿಗ್ಗೆ 10.30 ಗಂಟೆಗೆ ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದೆ.

ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಸಿ. ಪುಟ್ಟರಂಗಶೆಟ್ಟಿ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ವಿಶ್ವವಿದ್ಯಾನಿಲಯದ ಕುಲಪತಿ ಎಂ.ಆರ್ ಗಂಗಾಧರ್ ಗೌರವ ಉಪಸ್ಥಿತಿ ವಹಿಸುವರು. ಪ್ರಾಂಶುಪಾಲರಾದ ಪ್ರೊ. ಬಿ.ಎಸ್. ಮಹದೇವಸ್ವಾಮಿ ಅಧ್ಯಕ್ಷತೆ ವಹಿಸುವರು. ಕೇಂದ್ರ ಕಚೇರಿಯ ವಿಶೇಷ ಅಧಿಕಾರಿ ಡಾ. ಎನ್.ಜಿ. ಪ್ರಕಾಶ್ ವಿಶೇಷ ಆಹ್ವಾನಿತರಾಗಿ ಭಾಗ ವಹಿಸುವರು. ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಬಿ.ಆರ್. ಜಯಣ್ಣ, ಐ.ಕ್ಯು.ಎ.ಸಿ ಸಂಚಾಲಕಿ ಡಾ. ಲಿಖಿತ ಎಸ್. ಅನುರಾಧ, ಇತಿಹಾಸ ವಿಭಾಗದ ಉಪನ್ಯಾಸಕಿ ಎಂ. ರೋಹಿತ್ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

HOUSE FOR SALE

House no: 12, 15th cross, 2nd main, Jayanagar, Mysore. Site size: 60' by 50' =3000 Sq ft

9448015172

Site for Sale

30x40, N/E Corner, MUDA Approved, E-Khatha, 26 Lakh (Negotiable). VRL Layout, Near Chithravana Resort, H.D. Kote Road, Mysore.

Mob: 8088839853

ಮಹಿಳಾ ಅಡುಗೆಯವರು ಬೇಕಾಗಿದ್ದಾರೆ

ಮಹಿಳಾ ಸಸ್ಯಹಾರಿ ಅಡುಗೆ ತಯಾರಕರು ಬೇಕಾಗಿದ್ದಾರೆ. (ಲಿಂಗಾಯಿತ & ಬ್ರಾಹ್ಮಣ ಮಾತ್ರ) ಸ್ಥಳ: ಬಸವರಾಜು ಸರ್ಕಲ್, ವಿಜಯನಗರ, ಮೈಸೂರು

8310846772, 9535096161

---

3 ಎಕರೆ ಜಮೀನು ಮಾರಾಟಕ್ಕಿದೆ

ರೂ. 1 ಕೋಟಿ (3 ಎಕರೆಗೆ)

ಪಾಂಡವಪುರ ತಾ., ಮಂಡ್ಯ ಜಿಲ್ಲೆ ಬೇಬಿ ಗ್ರಾಮದಿಂದ 1 ಕಿ.ಮೀ., ಹತ್ತಿರದಲ್ಲಿ ಅದರಲ್ಲಿ ಕಮರ್ಷಿಯಲ್(ಕೋಳಿ ಫಾರಂ) ಅಥವಾ ವ್ಯವಸಾಯಕ್ಕೆ ಯೋಗ್ಯವಾಗಿರುತ್ತದೆ. ಕೆ.ಆರ್.ಎಸ್ ನಿಂದ 10 ಕಿ.ಮೀ, ಮೈಸೂರು ಬಸ್ ಸ್ಟಾಪ್‌ನಿಂದ 27 ಕಿ.ಮೀ, ಸಂಪರ್ಕಿಸಿ

9901226886 9900919875

ಅಡುಗೆಯವರು ಬೇಕಾಗಿದ್ದಾರೆ

ಹೊಸ ಕಾಲೇಜಿಗೆ ಅಡುಗೆ ತಯಾರಕರು ಬೇಕಾಗಿದ್ದಾರೆ. ವಸತಿ, ESI & PF ಸೌಲಭ್ಯವಿರುತ್ತದೆ. ಸ್ಥಳ: ಮೈಸೂರು

8310846772, 9535096161

ನಿರ್ಮಲಧಾರೆ ಸಲ್ಯೂಷನ್ಸ್

ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:

Mob: 9740893554

ಮಾರಾಟಕ್ಕಿದೆ

ಎಲೆಕ್ಟ್ರಿಕಲ್ ಮತ್ತು ಸ್ಯಾನಿಟರಿ ವಸ್ತುಗಳು ಮಾರಾಟಕ್ಕಿದೆ(ರ್‍ಯಾಕ್ಸ್) ಸ್ಥಳ : ಅಭಿಷೇಕ್ ಸರ್ಕಲ್, ಹೆಬ್ಬಾಳ್

9980204144

HOUSE FOR RENT

2 BHK with dining hall Vetrified flooring, Solar and Electrical Geysers @ Vijayanagar III Stage, Rent : 12,500 Adv : 80,000

9916314393

ನಿವೃತ್ತರಿಗೆ ಉದ್ಯೋಗಾವಕಾಶದ ಸೆಮಿನಾರ್

ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benefits : Fixed Salary + PF+ESI+ ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು : ಫೋಟೋ, ಪಾನ್‌ಕಾರ್ಡ್, ಆಧಾರ್‌ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ಸ್ಥಳ : ಮೌರ್ಯ ರೆಸಿಡೆನ್ಸಿ ಹೋಟೆಲ್, ಹರ್ಷ ರಸ್ತೆ, ಉಡ್‌ಲ್ಯಾಂಡ್ ಟಾಕೀಸ್ ಹತ್ತಿರ, ಮೈಸೂರು–01. ದಿನಾಂಕ: 17–11–2025, ಸಮಯ 11 A.M. Followed by Lunch, Call

9448376423 9886883858

Site for Sale

Vishwa Enclave

5kms from Lalithadripura Ring Road, Near Upcoming Peripheral Ring Road & JSS International University

- 30x40, W/F, 23 Lacks
- 30x40, N&E/F, 24 Lacks
- 30x40, Corner Sites, 25 Lacks

7795609173

Urgent Corner Site for Sale

50x30 North-East corner site for sale in Periyapatna Town. Municipal E-khatha with clear documents. Beautiful location. Price: Just 1550 sq.ft.

8088495854, 9019716886

LAUNCHING NEW LAYOUTS IN MYSORE

- T.N. ಪುರ ರಸ್ತೆ – ಸಪ್ತಮಾತೃಕ, ಪ್ರಶಾಂತ ಛಾಯ ಹೌಸಿಂಗ್ ಪ್ರಾಜೆಕ್ಟ್ ಪಕ್ಕ 14 – 25 ಲಕ್ಷ.
- ಬನ್ನೂರು ರಸ್ತೆ – ಮಾನಸಿನಗರ ಹಿಂಭಾಗ, ವಿದ್ಯಾವಿಕಾಸ ಎದುರು 25 – 49 ಲಕ್ಷ.
- ಬೋಗಾಧಿ ರಸ್ತೆ – ಹೊಸ ಕ್ರಿಕೆಟ್ ಸ್ಟೇಡಿಯಂ, ಜಟ್ಟಿಹುಂಡಿ ಹಿಂಭಾಗ 29 ಲಕ್ಷ.

BROKERS EXCUSE

Mob: 81230 75038

ಸೈಟು ಮಾರಾಟಕ್ಕಿದೆ

30x40 (Direct owner) ಇ–ಖಾತಾ, ಈಸ್ಟ್ ಫೇಸಿಂಗ್. ಶ್ರೀ ಎನ್‌ಕ್ಲೇವ್ (I.T. Park) Phase-04, ಜಂತಗಳ್ಳಿ, ಮೈಸೂರು

9886574589, 9341897252

---

2 BHK FOR RENT

1st Floor with Italian Kitchen Ward Robs & Solar # Muda Employees Layout behind Yms Badminton Academy Kuvempunagar Mysore. Contact

9945655125

ಕೆಲಸಕ್ಕೆ ಬೇಕಾಗಿದ್ದಾರೆ

ಮೈಸೂರು ಸುತ್ತಮುತ್ತ ಉನ್ನತ ಕಂಪನಿ, ಕಾರ್ಖಾನೆಗಳಲ್ಲಿ, ಹಾಸ್ಪಿಟಲ್, ಚುಂಚನಗಿರಿ ಮಠ ಸಂಸ್ಥಾನ, ಹೆಬ್ಬಾಳ್, ಮೇಟಗಳ್ಳಿ ಶಾರದಾದೇವಿ ನಗರ ನಿವೇದಿತ ನಗರ. ಇಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಳು, ಹೌಸ್ ಕೀಪಿಂಗ್ Helperಗಳು ಬೇಕಾಗಿದ್ದಾರೆ. ESI,PF ಸೌಲಭ್ಯ ಇರುತ್ತದೆ ಉನ್ನತ ಸಂಬಳ 10000 ರಿಂದ 18000 ರವರೆಗೆ, ವಿದ್ಯಾಭ್ಯಾಸ: 7th 10th, PUC. Any degree. (2.) & ITI, Diploma, (Field officer) ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಹೊಂದಿರಬೇಕು.

ಸಂಪರ್ಕಿಸಿ: 9036461347/ 9036757650/ 9611208553

SITE FOR SALE

30X40 W/F, 28X30 S/WEST CORNER SERENA BLOOSAM LAYOUT ATTACHED TO VIJAYANAGAR 4TH STAGE

6366572147

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ

ನೀವು ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ– Rs. 11,200 (24 CT)

9108146123

RERA APPROVED — RAI ESTATES — MUDA APPROVED (E-KHATA)

ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ

- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604

#10, 1st Floor, New Sayyaji Rao Road, Bamboo Bazar, Mysuru - 570 001

MUDA & RERA Approved

Site For Sale

Shree Sapthamathruka Layout, E-Khata & Bank Loan Available, 30x40 West Facing -30Lakhs* South & Park Facing -32Lakhs*

Call: 7795609173

CHANGE OF NAME

I, D.GHANAVI, W/o. RAVISH.S, R/at #100, Ganapathi Temple Road, Lokanayaka Nagar, Hebbal Mysuru- 570016 hereby declare that D.GHANAVI and GHANAVI are both same person and shall be known as D.GHANAVI for all the future purposes and documents vide Affidavit sworn before Notary Kusuma.R. dated 13/11/2025.

Sd/- D.GHANAVI

SITE FOR SALE

(MUDA Approved) 30x40 Srirampura Ring Road, near 1 km, Mysuru.

Mob: 8050345574

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ

ರಾಜರಾಜೇಶ್ವರಿ ನಗರದಲ್ಲಿರುವ ಒಂದು ಲೇಔಟ್‌ಗೆ(Layout) 55 ವರ್ಷದ ಒಳಗಿನ ಗಾರ್ಡ್ ಬೇಕಾಗಿದ್ದಾರೆ. ಸಂಬಳ : 16,500/- ESI + PF ಇರುತ್ತದೆ.

ಸಂಪರ್ಕಿಸಿ: 9591823625

WANTED

We are in need of a Mechanic for a reputed poultry form in Mysore. Knowledge in Plumbing & Electrical will have prefereance Address : Megha Form Bogadi Road, Mysore

9342121514, 9844774835

ಮನೆ ಬಾಡಿಗೆಗೆ ಇದೆ

30x40, 2 BHK (ಇಂಡಿಪೆಂಡೆಂಟ್) ಸೋಲಾರ್, ಗೀಸರ್, ಸಸ್ಯಾಹಾರಿಗಳಿಗೆ ಆದ್ಯತೆ. ಶ್ರೀ ಭೈರವೇಶ್ವ ಲೇಔಟ್, ನ್ಯಾಯಾಂಗ ಬಡಾವಣೆ ಪಕ್ಕ, ಬೆಂಚ್ ಕಟ್ಟೆ ಮಾರಮ್ಮನ ದೇವಸ್ಥಾನ ಪಾರ್ಕ್ ಹತ್ತಿರ, ಮೈಸೂರು.

9480482815 / 9482063693

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್

Mob: 9964733988

ಸುವರ್ಣ ಯಾತ್ರಾ

7 ದಿನಗಳ 2 ಜ್ಯೋತಿರ್ಲಿಂಗದೊಂದಿಗೆ ಕಾಶಿ, ಆಯೋಧ್ಯಾ, ಬಾಬಾ ವೈದ್ಯನಾಥ, ಗಯಾ, ಬುದ್ಧಗಯಾ, ನೈಮಿಶರಣ್ಯ ಪ್ರವಾಸ 29/11/25

7 ದಿನಗಳ ಕಾಮಾಕ್ಯ, ಶಿಲ್ಲೊಂಗ್, ಕಾಚಿರಂಗ ಮೇಘಾಲಯ ಪ್ರವಾಸ 25/12/25

10 ದಿನಗಳ ಕಾಶಿ, ಅಯೋಧ್ಯಾ, ನೇಪಾಳ, ಮುಕ್ತಿನಾಥ, ಮನೋಕಾಮನ, ಪೋಕ್ರ, ಕಠ್ಮಂಡು ಪ್ರವಾಸ 8/12/25

6 ದಿನಗಳ 9 ನವಗ್ರಹಗಳು ಮತ್ತು ರಾಮೇಶ್ವರಂ ಪ್ರವಾಸ 25/12/25

9008381022/9019462508

ಶ್ರೀ ವಿಜಯಲಕ್ಷ್ಮಿ ಸ್ವೀಟ್ಸ್

ಖಾರ ಬೂಂದಿ -250/- KG

ಸಿಹಿ ಬೂಂದಿ-250/- KG

* ಷರತ್ತುಗಳುಅನ್ವಯಿಸುತ್ತವೆ

+918147469991

FOR RENT

Shop: 1800 sq.ft. Also 1 & 2 BHK house in 2nd floor (Lift available) # 670D, 'M' Block, Kuvempunagar, beside SBI Branch.

Mob: 94480 47419

ತಕ್ಷಣ ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ಸ್ 50 ವರ್ಷದೊಳಗಿನ ಪುರುಷರು ಬೇಕಾಗಿದ್ದಾರೆ. SSLC, PUC ವಿದ್ಯಾರ್ಹತೆ ಇರಬೇಕು. ಮೇಟಗಳ್ಳಿ, ಗೋಕುಲಂ, ಒಂಟಿಕೊಪ್ಪಲ್, ಹೆಬ್ಬಾಳು, ವಿಜಯನಗರ, ಪಡುವಾರಹಳ್ಳಿ, ಹಿನಕಲ್, ಬಂಬು ಬಜಾರ್ ಹಾಗೂ ಸುತ್ತ ಮುತ್ತಲಿನವರು

ಸಂಪರ್ಕಿಸಿ: 7259598615

RENT & SALE

40x60 Independent House Rent at Saraswathipuram. 30x40 Duplex House and 40x60 Ground & First Floor House Sale at Ramakrishna Nagar

7353430309

ಸುವರ್ಣ ಯಾತ್ರಾ

6 ದಿನಗಳ ದುಬೈ, ಬುರ್ಜ್ ಖಲೀಫಾ ದುಬೈ ಫ್ರೇಮ್ ಡೆಸರ್ಟ್ ಸಫಾರಿ ಗ್ಲೋಬಲ್ ವಿಲೇಜ್ ಇತರೆ 12–12–25, 6 ದಿನಗಳ ಶ್ರೀಲಂಕಾ ಪ್ರವಾಸ 19–01–26.

9008381022 / 9019462508

WANTED

ACCOUNTANT for a rubber based SSI unit in KSSIDC industrial estate Metagalli. Proficiency in Tally, billing, E-way bill, MS Office, etc.

Contact: 90350 08247

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 9535361279

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್

Mob: 8197383645

Sites for Sale

30/40 MUDA South Face & North Face Police Layout 2nd Stage IPS Nagar Ring Road 3 Sites are available

9380284276

CHANGE OF NAME

I, DODDAIAH S/o NATHIMMAPPA Residing at No.33, Bandigowda Layout, Near Honnegowda Block, Hootagalli, Mysore 570018, have changed my name from RAJU T To DODDAIAH on my own free will sworn in before Notary C.R. Seetharam, Mysore vide affidavit. Dated : 13.11.2025.

Sd/- DODDAIAH

ಹೊಸ ಮನೆ ಮಾರಾಟಕ್ಕಿದೆ

ಇಲವಾಲ ಸೇಂಟ್ ಜೋಸೆಫ್ ಸ್ಕೂಲ್ ಹತ್ತಿರ 20x30 ಅಳತೆಯ 3BHK ಡ್ಯೂಪ್ಲೆಕ್ಸ್ ಫುಲ್ ಪರ್ನೀಸ್ ಓನ್ ಬೋರ್‌ವೆಲ್ MUDA APPROVED ಮನೆ ಮಾರಾಟಕ್ಕಿದೆ. ಬೆಲೆ: 69 ಲಕ್ಷ

ನಂಜುಂಡಸ್ವಾಮಿ HS, ಮಾಜಿ ಸೈನಿಕರು

9483862050 8660625801

ಸೈಟ್ ಬೇಕಾಗಿದೆ

40x60 ಅಳತೆಯ ಸೈಟ್ North ಅಥವಾ East Facing, 40 feet Road, Brindavana Layout, Vijayanagar 2nd, 3rd and 4th stage, ಮೈಸೂರು, ಮಾರುವವರು ಇದ್ದರೆ, ಮಾಲೀಕರು ಸಂಪರ್ಕಿಸಿ

9742782931

CHANGE OF NAME

I, BASAVARAJA S/o Late H.V. Channegowda, Residing at Door No. MIG. 31, Nrupatunga Road, Kuvempunagar, Mysore -570023 have changed my name from 'BASAVARAJ' to 'BASAVARAJA' Vide affidavit sworn before Notary : S.V. Nagendra, Mysuru Dated : 27-10-2025

Sd/- Basavaraja

FANTASTIC OPPORTUNITY

For Retired officials (State govt / Central govt/ Banking sector / Public and Private sector) House wives, Businessmen and Unemployed graduates to be a part of India's leading insurance company with zero investment and flexible working hours (Work from home) An opportunity to earn attractive and unlimited commission and incentives. Interested persons may

Prakash : 8861918556

ಬೇಕಾಗಿದ್ದಾರೆ

ಪ್ರತಿಷ್ಠಿತ ಕಂಪನಿಗಳಲ್ಲಿ Loan recovery ಮಾಡಲು Collection Executive ಗಳು ಕುಶಾಲನಗರ ಮತ್ತು ಸೋಮವಾರ ಪೇಟೆ ಈ ಸ್ಥಳಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನವುಳ್ಳವರು ಮತ್ತು ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ ಆದ್ಯತೆ ಮತ್ತು ಮಹಿಳಾ ಟೆಲಿಕಾಲರ್ಸ್, ಬೇಕಾಗಿದ್ದಾರೆ (ಮೈಸೂರಿನವರಿಗೆ ಮಾತ್ರ)

Mobile : 9980929313 9901945444, 9900610534

ಸಂದರ್ಶನದ ದಿನಾಂಕ : 18–11–2025 ಮಂಗಳವಾರ

ಆದಿಕರ್ನಾಟಕ(SC) ವಿವಾಹ ಮಾಹಿತಿ ಕೇಂದ್ರ

PUC, BA, MA, MBA, M.Com, MSc, MBBS, BE, M.Tech, B.Ed, D.Ed, M.Ed etc. ವಿವಾಹ ನೋಂದಣಿಗೆ ಕರೆಮಾಡಿ (2nd Marriage also)

9164124499, 9035565773

OLD AGE HOME

ನಮ್ಮಲ್ಲಿ ಎಲ್ಲಾ ತರಹದ ಹಿರಿಯ ನಾಗರೀಕರನ್ನು ಅಥವಾ ವೃದ್ಧರನ್ನು ಮನೆಯ ವಾತಾವರಣದಲ್ಲಿ ಊಟ, ವಸತಿ, ನರ್ಸಿಂಗ್ ಕೇರ್ ಮತ್ತು ವೈದ್ಯರ ಆರೈಕೆಯೊಂದಿಗೆ ನೋಡಿಕೊಳ್ಳುತ್ತೇವೆ. ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ.

Mob: 96071 72737

ಕೇರಳ ಪ್ರವಾಸ

ಒಟ್ಟು 4 ದಿನಗಳು. ಹೊರಡುವ ದಿನಾಂಕ: 25–12–2025. ವೀಕ್ಷಿಸುವ ಸ್ಥಳಗಳು: ಅಲ್ಲಪಿ, ಕೋವಲಂ ಬೀಚ್, ಗುರುವಾಯೂರು, ಕೊಚ್ಚಿನ್ ಡಿಜೆ ಬೋಟ್, ಜಟಾಯು ಅರ್ಥ್ ಸೆಂಟರ್, ಅನಂತಪದ್ಮನಾಭ ದೇವಸ್ಥಾನ, ಅತೀರಪಿಲ್ಲಿ ಜಲಪಾತ, ಎಲಿಫೆಂಟ್ ಕ್ಯಾಂಪ್. * ಊಟ, ತಿಂಡಿ ಸೇರಿರುತ್ತದೆ. * ಪ್ರತ್ಯೇಕ ರೂಂಗಳು. ಈ ಮೇಲಿನ ಎಲ್ಲಾ ಸವಲತ್ತುಗಳು ಸೇರಿ ಒಬ್ಬರಿಗೆ 9000/– ರೂಪಾಯಿಗಳು ಮಾತ್ರ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

Mob: 70222 71023

ATHARVA'S SECURITY SERVICES

ಮೈಸೂರಿನಾದ್ಯಂತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು, ಬೌನ್ಸರ್ಸ್, ಬಿಎಡ್ ಪದವಿ ಹೊಂದಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸೂಕ್ತ ದಾಖಲಾತಿಗಳೊಂದಿಗೆ ಸಂಪರ್ಕಿಸಿ.

9513112155, 9513926655

ಎಂ ಪ್ರೋ ಪ್ಯಾಲೇಸ್ ಹೋಟೆಲ್ ಹಿಂಭಾಗ, ಮೈಸೂರು 570029

HOUSE FOR SALE

30X40, East facing 4 BHK, House with Attached bath rooms, 3 Car Parking with Lift option Triplex house, Near Andolana Circle, Ramakrishna nagar 'A' & B Block is for Sale, Contact

9620607138, 8105751169

CHANGE OF NAME

I, Thomas Lanka S/o Devid Lanka Residing at 164 TSK Serenity Layout, near Government ITI College, Belavadi, Mysore-570018, have changed my name from Thomas to Thomas Lanka Vide sworn in before notary THIMMANAGOWDA. N.P.

Sd/- Thomas Lanka

ತಕ್ಷಣ ಬೇಕಾಗಿದ್ದಾರೆ

ಕುವೆಂಪುನಗರ, ಕೆ.ಜಿ.ಕೊಪ್ಪಲು ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು ವಯೋಮಿತಿ : 45 ವರ್ಷದೊಳಗೆ ಸಂಬಳ : ಸೂಪರ್‌ವೈಸರ್ : 22,000/– ಸೆಕ್ಯೂರಿಟಿ ಗಾರ್ಡ್ : 20,000/– ಊಟ, ತಿಂಡಿ ಸೌಲಭ್ಯವಿರುತ್ತದೆ.

9620777819, 9620667819

ಕೆಲಸಕ್ಕೆ ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ ಮತ್ತು ಸೂಪರ್‌ವೈಸರ್ ವಯೋಮಿತಿ : 18 ರಿಂದ 45, SSLC ಮೇಲ್ಪಟ್ಟವರಿಗೆ ಆದ್ಯತೆ, ESI & PF ಸೌಲಭ್ಯವಿರುತ್ತದೆ. ಸ್ಥಳ : ಲಲಿತಾದ್ರಿಪುರಂ, ಹೌಸ್‌ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಸ್ಥಳ : ಮೇಟಗಳ್ಳಿ

7676948164, 8792537093

ಬೇಕಾಗಿದ್ದಾರೆ

ಮೈಸೂರಿನ ವಿಜಯನಗರದಲ್ಲಿರುವ ಫರ್ನಿಚರ್ ಶೋರೂಂನಲ್ಲಿ ಕೆಲಸ ಮಾಡಲು ಸೇಲ್ಸ್‌ಮೆನ್ ಮತ್ತು ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ:

Mob: 9980556642

FOR SALE

1. 40x120 Site @ 80 Feet Road in Dattagalli
2. 40x60 Site @ JP Nagar, Shardha Layout
3. 20x40 East Facing Sites Near Christ Public school.
4. 30x40 Sites Near RT Nagar BSNL Layout @ Just 22 Lakhs
5. 2 & 3 BHK Apartments @ RK Ngr

PRAKRUTHI PROPERTIES

95386 90359, 90359 90359

ಬೇಕಾಗಿದ್ದಾರೆ

ಅಂಬಾರಿ ರೆಸ್ಟೋರೆಂಟ್

ಜೆ.ಕೆ. ಟೈರ್ ರೇಡಿಯಲ್ ಪ್ಲಾಂಟ್ ಎದುರು, ಪ್ರೀತಿ ಗ್ರಾನೈಟ್ ರಸ್ತೆ, ರಿಂಗ್‌ರೋಡ್ ಹತ್ತಿರ, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಹೆಬ್ಬಾಳು, ಸಪ್ಲೈಯರ್ ಕೆಲಸಕ್ಕೆ ಅನುಭವವುಳ್ಳ/ನುರಿತ ಹುಡುಗರು ಬೇಕಾಗಿದ್ದಾರೆ. ಊಟ, ವಸತಿ ವ್ಯವಸ್ಥೆ ಇರುತ್ತದೆ ಹಾಗೂ ಪಾರ್ಟ್ ಟೈಮ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.

ಸಂಬಳ : 18000/- ಪ್ರತಿ ತಿಂಗಳು

9611415014, 9591408601

ವಧು–ವರಾನ್ವೇಷಣೆ

ಒಕ್ಕಲಿಗ/ಕುರುಬ/ಲಿಂಗಾಯತ ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)

9343175000

EAST FACING COMMERCIAL SITE FOR SALE

60ft road 3000/- per sqft 40x60 LIC Layout Bank loan Available Contact: JK

Mob: 8951144240

ಬೇಕಾಗಿದ್ದಾರೆ

ಟಿವಿ ಶೋರೂಂ ನಲ್ಲಿ ಕೆಲಸಕ್ಕೆ ಸೇಲ್ಸ್ ಮತ್ತು ಮಾರ್ಕೆಟಿಂಗ್ ಗೆ ಹುಡುಗರು 04 ಮತ್ತು ಹುಡುಗಿ 01 (ಕಂಪ್ಯೂಟರ್ ಆಪರೇಟರ್) ಬೇಕಾಗಿದ್ದರೆ. ಸಂಬಳ: 15,000 ರೂ. ರಿಂದ 30,000 ವರೆಗೆ. Age limit: 18 to 30.

Mob: 9110664030

SINGLE ROOM FOR RENT

No. 26, BEHIND CANARA BANK, JAYLAXMI PURAM / PADUVARALLI.

MOB: 9845291043

SITES FOR SALE

MUDA APPROVED 30x40, 30x50 Bank loan available. SRIRAMPURA RING ROAD, OPPOSITE TO UNIVERSITY LAYOUT. CONTACT:

Mob: 9035444602

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

URGENT SITE SALE

Kubernanda Sagara 60 ft road 30x40 North facing Site No. 50. Price 42/- Lakhs

Call: 7892846068

Wanted Teachers

Kannada - BA, B.Ed., Hindi - B.A, B.Ed. Trained Graduate Jnana Gangotri Convent Rajendra Nagara, Mysore

Mob: 9113980741

ಜಮೀನು ಮಾರಾಟಕ್ಕಿದೆ

ಶ್ರೀರಂಗಪಟ್ಟಣದ ಕಿರಂಗೂರಿನಲ್ಲಿ 60 ಗುಂಟೆ ($1^1/_2$ ಎಕರೆ) ಜಮೀನು ಮಾರಾಟಕ್ಕಿದೆ.

Mob: 8951666811

ತಕ್ಷಣ ಬೇಕಾಗಿದ್ದಾರೆ

ಮೈಸೂರು ಮತ್ತು ಬೆಂಗಳೂರಿನಲ್ಲಿರುವ ಕಂಪನಿ ಮತ್ತು ಆಫೀಸ್‌ಗಳಿಗೆ 7ನೇ, 10ನೇ, ಪಿಯುಸಿ, ಡಿಗ್ರಿ ಪಾಸ್ / ಫೇಲ್ ಆದಂತಹ ಯುವಕರು, ಯುವತಿಯರಿಗೆ 20,000 ದಿಂದ 45,000 + ಓಟಿ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. ಸಂಪರ್ಕಿಸಿ:

9916744622, 9916788422

ಶ್ರೀ ಗುರು ರಾಘವೇಂದ್ರ ಹೋಂ ನೀಡ್ಸ್

ಪ್ರಾವಿಷನ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಮಹಿಳೆಯರು ಮತ್ತು ಹುಡುಗರು ಬೇಕಾಗಿದ್ದಾರೆ. Part time or full time. ಆಸಕ್ತಿವುಳ್ಳವರು ಕರೆ ಮಾಡಿ:

Mob: 9972356444

ಸ್ಥಳ: ಶಾರದಾದೇವಿ ನಗರ, ಮೈಸೂರು

ಸೈಟು ಬೇಕಾಗಿದೆ

ವರುಣ ಬಸವೇಶ್ವರ / ವರುಣ JSS / ವರುಣ, ಚಿಕ್ಕಹಳ್ಳಿ, ಅಕ್ಕಪಕ್ಕದ ಲೇಔಟ್‌ಗಳಲ್ಲಿ. ಮಾಲೀಕರು ಸಂಪರ್ಕಿಸಿ: ಟಿ. ನರಸೀಪುರ ರಸ್ತೆ

Mob: 9164560494

ನೇರ ಆಯ್ಕೆ ಉದ್ಯೋಗವಕಾಶ

ವರ್ಕ್ ಫ್ರಮ್ ಹೋಂ ಮನೆಯಿಂದಲೇ ಕೆಲಸ ಪಾರ್ಟ್ ಟೈಮ್ & ಫುಲ್ ಟೈಮ್ ವರ್ಕ್‌ಗಳಿಗೆ ವಿದ್ಯಾರ್ಥಿಗಳಿಗೆ + ಮಹಿಳೆಯರಿಗೆ ಹಾಗೂ ವಯಸ್ಕರಿಗೆ ಮೊದಲ ಆದ್ಯತೆ. ಕೊರಿಯರ್ ಸೌಲಭ್ಯವಿದೆ. 7th, 10th, PUC, Any Degree ಪಾಸ್, ಫೇಲ್ ಆದವರು. 20,000/– ದಿಂದ 25,000/–

Mob: 8095133188

ಸೈಟು ಬೇಕಾಗಿದೆ

ವರುಣ ಬಸವೇಶ್ವರ / ನಿರ್ಮಾಣ ಲೇಔಟ್ / ವರುಣ JSS ಲೇಔಟ್ ಹಾಗೂ ವರುಣ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ, ಟಿ. ನರಸೀಪುರ ರಸ್ತೆ / ಬನ್ನೂರು ರಸ್ತೆ.

Mob: 9686071750

ಕೆಲಸ ಖಾಲಿ ಇದೆ

ಹುಡುಗರು ಬೇಕಾಗಿದ್ದಾರೆ

ಅನುಭವವುಳ್ಳ ಸೇಲ್ಸ್‌ಮೆನ್ & ಸೇಲ್ಸ್ ಸೂಪರ್‌ವೈಸರ್‌ಗಳು Two Wheeler ಕಡ್ಡಾಯ. ಸ್ಥಳ: ಮೈಸೂರು, ಮಂಡ್ಯ ಹಾಸನ, ಕೊಡಗು, ಚಾಮರಾಜನಗರ.

9880638113, 9036667863

SITE FOR SALE

30'x40'-9' EAST FACE Near Hari Vidyalaya, Bogadi. (Brokers Excuse).

Mob: 9448877551

SITE FOR SALE

52x60 corner site for sale in HPO and RMS Layout, Near Sathagalli 1st Stage. Contact:

Mob: 9880344263

SITE FOR SALE

Near Manipal Hospital Gateway, Mysuru. 30x40 Site.

Mob: 9964 919727

CHANGE OF NAME

I, ANCHAL S. CHAWLA, Residing at No.454, 3RD 'A' Main, S.S. Nagar, Bannimantap 'B' Layout, Mysuru-570015, KARNATAKA STATE, INDIA, have changed my name from SONA.S. to ANCHAL S. CHAWLA on my own free will sworn in before Notary RAJESHWARI Dated : 13.11.2025.

Sd/- ANCHAL S. CHAWLA

APARTMENT FOR RENT

1500 sq.ft 3 bedroom flat with car parking in Trends Apartment Bhogadi, Mysore for rent. contact

9448048829

ಬೇಕಾಗಿದ್ದಾರೆ

ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಷೋರೂಮುಗಳಾದ, ಟಾಟಾ ಮೋಟರ್ಸ್, ರೇನಾಲ್ಟ್, ಟೊಯೋಟಾ, ಮಾರುತಿ ಸುಝುಕೀ ಅರೆನ ಹಾಗೂ ಬೈಕ್ ಷೋರೂಮ್‌ಗಳಾದ ಹೋಂಡಾ, ಟೀವಿಎಸ್, ರೋಯೋಲ್ ಎಂಫಿಎಲ್ಡ್, ಷೋರೂಮ್‌ಗಳಿಗೆ CASHIER, RECEPTIONIST, HR, ADMIN, ACCOUNT, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ, (22k -36k), SSLC, PUC, DEGREE

9739121355, 6366718368



Solar Water Heater SALES & SERVICE

BAJAJ FINSERV

SUNZONE SOLAR SYSTEM

VM Double Road, Kuvempunagar, Mysuru

9845175443

ಕಾರ್ನರ್ ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ

32x60, East Face, 80 Feet ಮೇನ್ ರೋಡ್ ಸರ್ದಾರ್ ವಲ್ಲಭಬಾಯಿ ಪಟೇಲ್ ನಗರ, ಪೋಲೀಸ್ ಲೇಔಟ್, 2ನೇ ಸ್ಟೇಜ್, ಮೈಸೂರು

9342188102, 7019050766

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಸರ್ಕಾರದ ನೆರವಿಲ್ಲದೆ ಸಹಕಾರಿಗಳಿಂದ ಸಹಕಾರಿ ಕ್ಷೇತ್ರ ಬೆಳೆದಿದೆ

ಹೆಚ್.ಡಿ.ಕೋಟೆಯ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಶಾಸಕ ಹರೀಶ್‌ಗೌಡ ಪ್ರತಿಪಾದನೆ



ಹೆಚ್.ಡಿ.ಕೋಟೆಯ ಅಂಬೇಡ್ಕರ್ ಭವನದಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್ ಗೌಡ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ: ಸರ್ಕಾರದ ನೆರವಿಲ್ಲದೆ ಸಹಕಾರಿಗಳಿಂದಲೇ ಸಹಕಾರಿ ಕ್ಷೇತ್ರ ಬೆಳೆದಿದೆ ಎಂದು ಕರ್ನಾಟಕ ರಾಜ್ಯ ಸಹಕಾರಿ ಅಫೆಕ್ಸ್ ಬ್ಯಾಂಕಿನ ಉಪಾಧ್ಯಕ್ಷ ಹಾಗೂ ಶಾಸಕ ಜಿ.ಡಿ.ಹರೀಶ್ ಗೌಡ ತಿಳಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಂಡಳಿ (ಬೆಂಗಳೂರು), ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ ಮೈಸೂರು, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ, ಎಚ್.ಡಿ.ಕೋಟೆ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ, ಎಚ್.ಡಿ.ಕೋಟೆ ಸರಗೂರು ತಾಲೂಕಿನ ಎಲ್ಲಾ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನಡೆದ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಹಕಾರ ಸಂಘಗಳಿಗೆ ನೂರಾರು ವರ್ಷಗಳ ಹಿನ್ನೆಲೆ ಇದೆ. ಸಹಕಾರಿಗಳಿಂದಲೆ ಬೆಳೆದು ಬಂದಿದೆ. ಇಡೀ ದೇಶದಲ್ಲಿ ಮೊದಲ ಬಾರಿಗೆ ಕರ್ನಾಟಕದವರಾದ ಸಿದ್ದನಗೌಡ ಸಣ್ಣ ರಾಮನಗೌಡ ಪಾಟೀಲ್ ಸಹಕಾರ ಸಂಘವನ್ನು ಸ್ಥಾಪಿಸುವ ಮೂಲಕ ಸಹಕಾರಿ ಕ್ಷೇತ್ರಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು. ಹಾಗೆ ದೇಶದಲ್ಲಿ ಡಾಕ್ಟರ್ ಕುರಿಯನ್ ಅವರು ಕ್ಷೀರ ಕ್ರಾಂತಿ ಮಾಡುವುದರ ಮೂಲಕ ಹೈನುಗಾರಿಕೆಗೆ ಮಹತ್ವ ನೀಡಿದರು. ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಇಂತಹ ಮಹನೀಯರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಕೋಟೆಯ ಸಹಕಾರಿ ಸಂಘಗಳಿಗೆ 60 ವರ್ಷಗಳಿಂದ ಬಡ್ಡಿ ರಹಿತ 68 ಕೋಟಿ ಸಾಲ ನೀಡಲಾಗಿತ್ತು, ನಮ್ಮ ಐದು ವರ್ಷದ ಅವಧಿಯಲ್ಲಿ ಹೆಚ್ಚುವರಿಯಾಗಿ 80 ಕೋಟಿ ರೂ. ರೈತರಿಗೆ ಸಾಲಸೌಲಭ್ಯ ನೀಡಲಾಗಿದೆ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಜಿಲ್ಲಾಮಟ್ಟದ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಹೆಚ್.ಡಿ.ಕೋಟೆ ತಾಲೂಕಿನ ಮೈಮುಲ್ ನೂತನ ಅಧ್ಯಕ್ಷ ಈರೇಗೌಡರ ಅಧ್ಯಕ್ಷತೆಯಲ್ಲಿ ಮಾಡುತ್ತಿರುವುದು ಸಂತಸದ ವಿಚಾರ. ಸಹಕಾರಿ ಕ್ಷೇತ್ರಕ್ಕೆ ಪ್ರಥಮ ಬಾರಿಗೆ ನಾನು ಪ್ರವೇಶ ಮಾಡಿದ್ದು, ಜಿ.ಟಿ.ದೇವೇಗೌಡ ಸಹಕಾರಿ ಕ್ಷೇತ್ರದಲ್ಲಿ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ. ಅವರ ಮಾರ್ಗದರ್ಶನ ನಮಗೂ ಕೂಡ ಅಗತ್ಯವಿದೆ. ಜಿ.ಡಿ.ಹರೀಶ್ ಗೌಡರು ಕ್ಷೇತ್ರದಲ್ಲಿ ಅಧ್ಯಕ್ಷರಾಗಿ ತಾಲೂಕಿಗೆ ಸಾಕಷ್ಟು ಸಹಕಾರ ನೀಡಿದ್ದಾರೆ ಎಂದರು.

ತಾಲೂಕಿನಲ್ಲಿ ಕೈಗಾರಿಕೆಗಳು, ಕಾರ್ಖಾನೆಗಳು ಯಾವುದು ಇಲ್ಲದಿರುವುದರಿಂದ ತಾಲೂಕಿನ ಜನತೆ ಸಾಕಷ್ಟು ಮಂದಿ, ಕೃಷಿಯನ್ನು ಅವಲಂಬಿಸಿ, ಹೈನುಗಾರಿಕೆಯಲ್ಲಿ ಯಶಸ್ಸು ಕಂಡಿದ್ದಾರೆ ಎಂದರು.

ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಂಘಗಳ ಸಹಕಾರಿ ಒಕ್ಕೂಟದ ಅಧ್ಯಕ್ಷ ಕೆ.ಈರೇಗೌಡ ಮಾತನಾಡಿ, ನಾಲ್ಕು ಬಾರಿ ಮೈಮುಲ್ ನಿರ್ದೇಶಕನಾಗಿ ತಾಲೂಕಿನಲ್ಲಿ 183 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ರಚಿಸಿ 35 ಬಿಎಂಸಿ ಕೇಂದ್ರಗಳು, ಹಾಲು ಉತ್ಪಾದಕರ ಸಂಘಕ್ಕೆ 70 ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಹಾಲು ಪೌಡರ್ ಪ್ಲಾಂಟ್ ಬಿಎಂಸಿ ಘಟಕ, ಪ್ರಾರಂಭಿಸಲಾಗಿದ್ದು, ಮೈಮುಲ್ ಅಧ್ಯಕ್ಷರ ಸ್ಥಾನ ತಾಲೂಕಿಗೆ ದೊರಕಿರಲಿಲ್ಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ವೆಂಕಟೇಶ್, ಶಾಸಕರಾದ ಜಿ.ಟಿ.ದೇವೇಗೌಡ ಅನಿಲ್ ಚಿಕ್ಕಮಾದು, ಜಿ.ಡಿ.ಹರೀಶ್‌ಗೌಡ ಇವರುಗಳ ಸಹಕಾರದಿಂದ ಅಧ್ಯಕ್ಷ ಸ್ಥಾನ ನನಗೆ ದೊರಕಿದೆ, ಇವರುಗಳಿಗೆ ಕೃತಜ್ಞತೆ ಸಲ್ಲಿಸಿ ಮುಂದಿನ ದಿನಗಳಲ್ಲಿ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಶಾಸಕ ಜಿ.ಡಿ. ಹರೀಶ್‌ಗೌಡ, ಶಾಸಕ ಅನಿಲ್ ಚಿಕ್ಕಮಾದು, ಮೈಮುಲ್ ನೂತನ ಅಧ್ಯಕ್ಷ ಈರೇಗೌಡ ಅವರುಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಅಫೆಕ್ಸ್ ಬ್ಯಾಂಕ್ ಸಹಕಾರ ಮಹಾ ಮಂಡಳಿ ಅಧ್ಯಕ್ಷ ಕಾವೇರ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ಬಿ.ಎನ್.ಸದಾನಂದ, ಮೈಮುಲ್ ನಿರ್ದೇಶಕ ದ್ರಾಕ್ಷಾಯಿಣಿ, ಜಿಲ್ಲಾ ಹಾಪ್‌ಕಾಮ್ಸ್ ನಿರ್ದೇಶಕ ಬೋರೇಗೌಡ, ತಾಲೂಕು ತೋಟದ ಬೆಳೆಗಾರ ಸಹಕಾರ ಸಂಘದ ಅಧ್ಯಕ್ಷ ನಂದೀಶ್ ಕುಮಾರ್, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯಕ್, ವಿಸ್ತರಣಾ ಅಧಿಕಾರಿ ಆರಿಫ್ ಇಕ್ಬಾಲ್, ಮೈಮುಲ್ ನಿರ್ದೇಶಕರಾದ ಎ.ಟಿ. ಸೋಮಶೇಖರ್, ಕೆ.ಎಸ್.ಕುಮಾರ್, ಉಮಾಶಂಕರ್, ಲೀಲಾ, ಶಿವಸ್ವಾಮಿ, ಲೀಲಾಲಂಕೇಶ್, ಮಲ್ಲಿಕಾ, ನಾಗರಾಜು, ಮುಖಂಡರಾದ ವಿಜಯಕುಮಾರ್, ವಿಜಾಜ್ ಪಾಷ, ಮಾದಪ್ಪ, ವೆಂಕಟಸ್ವಾಮಿ, ಹೆಚ್.ಸಿ.ನರಸಿಂಹ ಮೂರ್ತಿ ಇನ್ನು ಮುಂತಾದವರು ಹಾಜರಿದ್ದರು.

ನ.19ರಂದು ಹುಣಸೂರಿನಲ್ಲಿ ಅಖಿಲ ಭಾರತ ಸಹಕಾರಿ ಸಪ್ತಾಹ


ಸುದ್ದಿಗೋಷ್ಠಿಯಲ್ಲಿ ಸಪ್ತಾಹದ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಲಾಯಿತು.

ಹುಣಸೂರು, ನ.14– ಸಹಕಾರಿ ಕ್ಷೇತ್ರ ಜಿಲ್ಲೆ ಮತ್ತು ರಾಜ್ಯದಲ್ಲಿ 72 ವಸಂತಗಳಿಂದಲೂ ಜನತೆಗೆ ಸಹಕಾರಿಯಾಗಿ ಕೆಲಸ ಮಾಡಿ ಆರ್ಥಿಕ ಶಕ್ತಿಯಾಗಿ ನೆಲೆಯೂರಿದ್ದು, ರೈತರ ಆಶಾ ಭಾವನೆಗಳಿಗೆ ಸೇತುವೆಯಾಗಿ ನಿಂತಿದೆ ಎಂದು ರಾಜ್ಯ ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್ ತಿಳಿಸಿದರು.

ನಗರದ ಮೈಸೂರು ರಸ್ತೆಯಲ್ಲಿರುವ ಹಾಲಿನ ಶಿಥಿಲೀಕರಣ ಕೇಂದ್ರದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆತ್ಮನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು ಎಂಬ ಧ್ಯೇಯವಾಗಿಟ್ಟುಕೊಂಡು 72ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ನ.19 ರಂದು ಹುಣಸೂರಿನಲ್ಲಿ ಅದ್ದೂರಿಯಾಗಿ ಆಚರಿಸಲಾಗುತ್ತಿದೆ ಎಂದರು.

ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ, ಬೆಂಗಳೂರು, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ ನಿ, ಸಹಕಾರ ಇಲಾಖೆ ಮೈಸೂರು, ಮೈಸೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮತ್ತು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ಹಾಗೂ ಹುಣಸೂರು ತಾಲೂಕಿನ ಎಲ್ಲಾ ಸಹಕಾರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ನಗರದ ಅಂಜನೇಯ ಸ್ವಾಮಿ ದೇವಸ್ಥಾನದಿಂದ ಪ್ರಾರಂಭವಾಗುವ ಮೆರವಣಿಗೆಯಲ್ಲಿ ಕಳಸ ಹೊತ್ತ 1500 ಮಹಿಳಾ ಸದಸ್ಯರು ಹಾಗೂ ವಿವಿದ ಕಲಾ ತಂಡಗಳು, ಡೊಳ್ಳು ಕುಣಿತ ಮಂಗಳ ವಾದ್ಯ ಹಾಗೂ ವಾದ್ಯ ಮೇಳಗಳೊಂದಿಗೆ ಮೆರವಣಿಗೆ ಕಲ್ಪತರು ಸರ್ಕಲ್, ಹೊಸ ಬಸ್ ನಿಲ್ದಾಣ, ಹಳೆ ಬಸ್ ನಿಲ್ದಾಣ ಮೂಲಕ ಮುನೇಶ್ವರ ಕಾವಲ್ ಮೈದಾನ ತಲುಪಲಿದೆ ಎಂದರು.

ಆರ್ಥಿಕ ಸ್ವಾವಲಂಬನೆಗಾಗಿ ಹಲಸು ಬೆಳೆಯಿರಿ

ಮೈಸೂರು, ಚಾ.ನಗರ ಜಿಲ್ಲೆಯ ಒಂದು ಸಾವಿರ ಎಕರೆಯಲ್ಲಿ ಹಲಸು ಬೆಳೆಯಲು ಒಪ್ಪಂದ



ತಿ.ನರಸೀಪುರ, ನ.14– ಹಲಸನ್ನು ವಾಣಿಜ್ಯ ಬೆಳೆಯಾಗಿ ಪರಿಗಣಿಸಲಾಗಿದ್ದು, ಇದರಿಂದ ಭೂಮಿಯ ಫಲವತ್ತತೆ ಹೆಚ್ಚಲಿದೆ. ಜೊತೆಗೆ ಅರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಲಿದೆ ಎಂದು ಫ್ಲೋರೋಜಾ ಆಗ್ರೋ ಸಲ್ಯೂಷನ್ ಕಂಪನಿಯ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಕಾರ್ಯ ನಿರ್ವಾಹಕ ಅಧಿಕಾರಿ ಮಧುರಾಜ್ ತಿಳಿಸಿದ್ದಾರೆ.

ತಾಲೂಕಿನ ಹಲಸು ತೋಟಕ್ಕೆ ಭೇಟಿ ನೀಡಿ ವೀಕ್ಷಿಸಿದ ನಂತರ ಮಾತನಾಡಿದ ಅವರು, ಫ್ಲೋರೋಜಾ ಆಗ್ರೋ ಸಲ್ಯೂಷನ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರ ಮಾರ್ಗದರ್ಶನದಲ್ಲಿ ತಿ.ನರಸೀಪುರ ತಾಲೂಕಿನ ಸೋಮನಾಥಪುರ ಗ್ರಾಮದ ರೈತರಾದ ಗಣೇಶಸ್ವಾಮಿ ಅವರ ತೋಟದಲ್ಲಿ ಒಂದು ಎಕರೆಯಲ್ಲಿ ಸುಮಾರು 300 ಹಲಸು ಗಿಡವನ್ನು ಬೆಳೆಯುತ್ತಿದ್ದು ಅಕ್ಕಿ ಪಕ್ಷಿಗಳಿಗೆ ಆಹಾರ ಮತ್ತು ಭೂಮಿಗೆ ಫಲವತ್ತಾದ ಗೊಬ್ಬರ ಸಿಗುತ್ತಿದೆ ಎಂದರು.

ರೈತರು ಒಂದು ಎಕರೆಗೆ ಸುಮಾರು 300 ಗಿಡಗಳನ್ನು ಗಿಡದಿಂದ ಗಿಡಕ್ಕೆ 10 ಅಡಿ, ಸಾಲಿನಿಂದ ಸಾಲಿಗೆ 15 ಅಡಿ ಅಂತರದಲ್ಲಿ ನಾಟಿ ಮಾಡಿ ಇದರ ಮಧ್ಯದಲ್ಲಿ ಯಾವುದೇ ಬೆಳೆಯನ್ನು ಎರಡು ವರ್ಷದ ತನಕ ಬೆಳೆದು ಆರ್ಥಿಕವಾಗಿ ಸ್ವಾವಲಂಬಿಗಳಾಗಬಹುದು. ನಮ್ಮ ಕಂಪನಿಯಿಂದ 30 ವರ್ಷಗಳ ತನಕ ಅಗ್ರಿಮೆಂಟ್ ಮಾಡಿಕೊಂಡು ಹಲಸಿನ ಕಾಯಿಯನ್ನು ಒಂದು ಕೆಜಿಗೆ 30 ರೂಗಳಂತೆ ಖರೀದಿ ಮಾಡುತ್ತೇವೆ ಮತ್ತು ಇದನ್ನು ರೈತರು ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು

ಈ ಹಲಸಿನ ಬೆಳೆಯಿಂದ ಭೂಮಿಯ ಫಲವತ್ತತೆ ಹೆಚ್ಚಿಸಲು ಸಹಾಯಕವಾಗುತ್ತದೆ ಮತ್ತು ರೈತರು 93 ಸಾವಿರ ಒಂದು ಸಲ ಖರ್ಚು ಮಾಡಿ ಹಲಸು ಗಿಡ ನಾಟಿ ಮಾಡಿಸಿದರೆ 30 ವರ್ಷಗಳ ತನಕ ಉಳುಮೆ ಮಾಡುವಂತಿಲ್ಲ. ಆಗ ನಮ್ಮ ಭೂಮಿಯ ಫಲವತ್ತತೆ ಹೆಚ್ಚಿಸುವ ನಿಟ್ಟಿನಲ್ಲಿ ಇಂತಹ ಒಂದು ಎಕರೆಯಲ್ಲಿ ತೋಟಗಾರಿಕೆ ಬೆಳೆ ಮಾಡಿದಾಗ ರೈತರು ಆರ್ಥಿಕವಾಗಿ ಸಾವಲಂಬಿ ಜೀವನ ನಡೆಸಲು ಸಹಾಯಕವಾಗುತ್ತದೆ ಎಂದು ಅವರು ವಿವರಿಸಿದರು.

ಆಹಾರ ಮತ್ತು ಔಷಧ ತಯಾರಿಕೆಗೆ ಹೇರಳವಾಗಿ ಬಳಕೆಯಾಗುವ ಥಾಯ್ ಹೈಬ್ರಿಡ್ ಸ್ಥಳೀಯ ಹಲಸಿನ ಹಣ್ಣುಗಳನ್ನು ಬೆಳೆಯಲು ರೈತರು ಮತ್ತು ಕಂಪನಿಯ ಜೊತೆ ಒಪ್ಪಂದ ಮಾಡಿಕೊಂಡು ಕಾಯಿ ಬಿಟ್ಟಾಗ ಬೈಬೇಕ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಸಾವಯವ ಮಾದರಿಯಲ್ಲಿ ಕೃಷಿ ಮಾಡಿಸಿ ಹಲಸು ಕ್ಷೇತ್ರ ಹೆಚ್ಚಳಕ್ಕೆ ಒಪ್ಪಂದ ಮಾಡಿಕೊಂಡಿದೆ. ನಿರ್ವಹಣೆ ಬೆಳೆ ವಿಧಾನ ಮಾರುಕಟ್ಟೆ ಹೀಗೆ ಅನೇಕ ಸೌಲಭ್ಯಗಳನ್ನು ಕಂಪನಿ ನೇರವಾಗಿ ಒದಗಿಸುತ್ತದೆ ಎಂದರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಒಂದು ಸಾವಿರ ಎಕರೆಯಲ್ಲಿ ಹಲಸು ಬೆಳೆಸಲು ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಈ ತಳಿಯು ವರ್ಷಪೂರ್ತಿ ಫಸಲು ಬಿಡುತ್ತದೆ. ಇಲ್ಲಿನ ಹವಾಗುಣ ಅದಕ್ಕೆ ಪೂರಕ. ಮಳೆ ಕಡಿಮೆ ಬೀಳುವ ಪ್ರದೇಶ ಗುರಿಯಾಗಿಸಿ ಕ್ಷೇತ್ರವನ್ನು ಹೆಚ್ಚಿಸಲಾಗುತ್ತದೆ ಫಸಲು ಬಿಡುವ ಮೊದಲೇ ಕಂಪನಿಯವರು ಖರೀದಿ ಒಪ್ಪಂದ ಮಾಡಿಕೊಳ್ಳುವುದರಿಂದ ನಮಗೆ ಮಾರುಕಟ್ಟೆಯ ಸಮಸ್ಯೆ ಇಲ್ಲ. ಆದಾಯ ನಿಶ್ಚಿತ ಎಂದು ರೈತ ಗಣೇಶ ಸ್ವಾಮಿ ಮಾತನಾಡುತ್ತಾ ತಿಳಿಸಿದರು.

ಕಸುವಿನಹಳ್ಳಿ ಪಿಎಸಿಸಿಎಸ್ ಅಧ್ಯಕ್ಷರಾಗಿ ಪುಟ್ಟಸ್ವಾಮಿ, ಉಪಾಧ್ಯಕ್ಷರಾಗಿ ನಾಗರಾಜು ಆಯ್ಕೆ



ಮಲ್ಕುಂಡಿ: ಸಮೀಪದ ಕಸುವಿನಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸಿದ್ದಯ್ಯನ ಹುಂಡಿ ಗ್ರಾಮದ ಎಸ್.ಪುಟ್ಟಸ್ವಾಮಿ ಹಾಗೂ ಅರುಣ್ ಕುಮಾರ್ ನಾಮಪತ್ರ ಸಲ್ಲಿಸಿದರು. ಉಪಾಧ್ಯಕ್ಷ ಸ್ಥಾನಕ್ಕೆ ನಾಗರಾಜು ಹಾಗೂ ಸಿದ್ದಪ್ಪ ನಾಮಪತ್ರ ಸಲ್ಲಿಸಿದ್ದು ಅರುಣ್ ಕುಮಾರ್ ಹಾಗೂ ಸಿದ್ದಪ್ಪ ಇಬ್ಬರು ತಮ್ಮ ನಾಮಪತ್ರವನ್ನು ಹಿಂಪಡೆದ ಹಿನ್ನೆಲೆಯಲ್ಲಿ ಎಸ್.ಪುಟ್ಟಸ್ವಾಮಿ ಹಾಗೂ ನಾಗರಾಜು ಅವಿರೋಧವಾಗಿ ಆಯ್ಕೆಯಾದರು. ಇವರ ಆಯ್ಕೆಯನ್ನು ಚುನಾವಣಾಧಿಕಾರಿ ವಸಂತ್ ಕುಮಾರ್ ಘೋಷಣೆ ಮಾಡಿದರು.

ನೂತನ ಅಧ್ಯಕ್ಷ ಎಸ್.ಪುಟ್ಟಸ್ವಾಮಿ ಮಾತನಾಡಿ, ರೈತರು ಸಕಾಲದಲ್ಲಿ ಸಾಲ ಮರುಪಾವತಿ ಮಾಡಿದರೆ ಸಂಘವು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯಾಗುತ್ತದೆ. ಸಂಘದಲ್ಲಿ ಹೆಚ್ಚಿನ ಷೇರುದಾರರಾಗಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು. ಸಂಘದ ಎಲ್ಲಾ ಸದಸ್ಯರ ಸಹಕಾರ ಪಡೆದು ಮುಂದಿನ ದಿನಗಳಲ್ಲಿ ಸಂಘವನ್ನು ಅಭಿವೃದ್ಧಿಯತ್ತ ಕೊಂಡ್ಯೊಯಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಪ್ರತಿಯೊಬ್ಬ ರೈತರಿಗೂ ತಲುಪಿಸುವ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ನಿರ್ದೇಶಕರುಗಳಾದ ಕೆ.ಎನ್. ಮಲ್ಲೇಶ್, ಶಾಂತಮಲ್ಲೇಶ್, ಅರುಣ್‌ಕುಮಾರ್, ಮಾದಪ್ಪ, ನೀಲಮ್ಮ, ರೇವಮ್ಮ, ವೃಷಭೇಂದ್ರ, ಸಿದ್ದನಾಯಕ, ತಮ್ಮಯ್ಯ, ಸಿಇಓ ಶಿವಕುಮಾರ್, ಪಿಎಸಿಸಿಎಸ್ ಮಾಜಿ ಅಧ್ಯಕ್ಷ ಕೆ.ಎನ್.ಚಿನ್ನಸ್ವಾಮಿ, ಶಿವಪ್ಪ, ಸುಕೇತ ರಾಜು ಸೇರಿದಂತೆ ಪ್ರಮುಖರು ಹಾಜರಿದ್ದರು.

20 ವರ್ಷದ ವನವಾಸಕ್ಕೆ ಮುಕ್ತಿ: ರಾಜೂರು ಗ್ರಾಮದ ಮುಖ್ಯರಸ್ತೆಗೆ ಗುದ್ದಲಿ ಪೂಜೆ


ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸುತ್ತಿರುವ ಶಾಸಕ ದರ್ಶನ್.

ನಂಜನಗೂಡು/ಮಲ್ಕುಂಡಿ: ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವ ಪ್ರಿಯಾಂಕ ಖರ್ಗೆ ಅವರು ರಸ್ತೆ ಅಭಿವೃದ್ಧಿಗಾಗಿ ಕ್ಷೇತ್ರಕ್ಕೆ 10 ಕೋಟಿ ಅನುದಾನ ನೀಡಿದ್ದು, ಆ ಅನುದಾನದಲ್ಲಿ ಕಳೆದ 20 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ತಾಲೂಕಿನ ರಾಜೂರು ಗ್ರಾಮದ ಮುಖ್ಯ ರಸ್ತೆಯ ಅಭಿವೃದ್ಧಿಗೆ 1 ಕೋಟಿ 40 ಲಕ್ಷ ವೆಚ್ಚದಲ್ಲಿ ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ತಾಲೂಕಿನ ಕಡಬೂರು ಗ್ರಾಮದಿಂದ ರಾಜೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಹಾಗೂ, ಚಂದ್ರವಾಡಿ ಮತ್ತು ಬಸಾಪುರ–ಲಂಕೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಸೇರಿದಂತೆ 3 ಕೋಟಿ 5 ಲಕ್ಷ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಜೂರು ಮುಖ್ಯ ರಸ್ತೆ ಕಳೆದ 20 ವರ್ಷಗಳಿಂದ ಹಳ್ಳ ಗುಂಡಿ ಬಿದ್ದು ಸಂಚಾರಕ್ಕೆ ತೊಂದರೆಯುಂಟಾಗಿತ್ತು, ಜೊತೆಗೆ ಕಾಡಂಚಿನ ಗ್ರಾಮವಾಗಿದ್ದು, ಗ್ರಾಮಕ್ಕೆ ಬಸ್ ಬರಲು ಕೂಡ ತೊಂದರೆಯಾಗಿತ್ತು, ಗ್ರಾಮಸ್ಥರು ಚುನಾವಣೆ ಸಂದರ್ಭದಲ್ಲಿ ಮುಖ್ಯ ರಸ್ತೆ ಅಭಿವೃದ್ಧಿಪಡಿಸುವಂತೆ ಬೇಡಿಕೆ ಇಟ್ಟಿದ್ದರು, ಈ ರಸ್ತೆ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಡುವುದರಿಂದ, ಈ ರಸ್ತೆಯನ್ನು ಮೇಲ್ದರ್ಜೆಗೇರಿಸಿ ಲೋಕೋಪಯೋಗಿಯ ಅನುದಾನದಲ್ಲಿ ಸುಸಜ್ಜಿತವಾಗಿ ನಿರ್ಮಿಸಲು ಯೋಜನೆ ರೂಪಿಸಿದ್ದೆ, ಆದರೆ ಈ ವರ್ಷ ರಸ್ತೆ ಮೇಲ್ದರ್ಜೆಗೇರಿಸಲು ತಾಂತ್ರಿಕ ಅಡೆತಡೆಯಾದ್ದರಿಂದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆರವರ ಮನವೊಲಿಸಿ ಕ್ಷೇತ್ರಕ್ಕೆ 10 ಕೋಟಿ ಅನುದಾನ ಬಿಡುಗಡೆಗೊಳಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಿಧಾನಸಭಾ ಉಸ್ತುವಾರಿ ಕನಕಪುರ ಶ್ರೀಕಂಠು, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್, ಮುಖಂಡರಾದ ಎಂ.ಮಾದಪ್ಪ, ರಾಜೂರು ಮಹದೇವ, ಅಭಿನಂದನ್ ಪಟೇಲ್, ಆದರ್ಶ, ಚಂದನ್ ಗೌಡ, ಲೋಕೇಶ್, ಜಿಪಂ ಇಲಾಖೆ ಎಇಇ ರಾಜು, ಎಇ ಈರಯ್ಯ, ಚೆಸ್ಕಾಂ ಎಇಇ ಕಿರಣ್‌ಕುಮಾರ್, ದೇವರಾಜಯ್ಯ ಇದ್ದರು.


ಸರ್ಕಾರಿ ಪ್ರೌಢಶಾಲೆಯಲ್ಲಿ ಶುಕ್ರವಾರ ಮಕ್ಕಳ ದಿನಾಚರಣೆ


ಕಂಪಲಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಶುಕ್ರವಾರ ಮಕ್ಕಳ ದಿನಾಚರಣೆ ಆಚರಿಸಲಾಯಿತು. ಉಪನ್ಯಾಸಕಿ ನಳಿನಾಕ್ಷಿ, ಸಿಆರ್‌ಪಿ ಸುದರ್ಶನ್, ಮುಖ್ಯ ಶಿಕ್ಷಕ ಮಹ ದೇವಯ್ಯ, ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣ ಮಂಜು, ಪತ್ರಕರ್ತ ಸದಾಶಿವ, ಶಿಕ್ಷಕ, ಶಿಕ್ಷಕಿಯರು ಹಾಜರಿದ್ದರು.

ಗ್ರಾಮದೇವತೆ ಶಾಂತವೀರಮ್ಮನವರ ಹಬ್ಬ


ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಗ್ರಾಮದೇವತೆ ಶಾಂತವೀರಮ್ಮನವರ ಹಬ್ಬ ವಿಜೃಂಭಣೆಯಿಂದ ನೆರವೇರಿತು. ದೇವಾಲಯದ ಆವರಣದಲ್ಲಿ ವಿಶೇಷ ದೀಪಾಲಂಕಾರ ಹಾಗೂ ರಾತ್ರಿ ಗ್ರಾಮದ ಮಹಿಳೆಯರಿಂದ ತಂಬಿಟ್ಟು ದೀಪೋತ್ಸವ ನಂತರ ರಾತ್ರಿ ದೇವರ ಮೂರ್ತಿ ಮೆರವಣಿಗೆ, ಕೊಂಡೋತ್ಸವ, ಸಾವಿರಾರು ಜನರಿಂದ ಕೊಂಡ ಹಾಯುವ ಕಾರ್ಯಕ್ರಮ ನಡೆಯಿತು.

ಗಿರಿಯಪ್ಪ ನಿಧನ



ಭೇರ್ಯ: ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯ ಗಿರಿಯಪ್ಪ (ಗಿರೀಗೌಡ) ಶುಕ್ರವಾರ ನಿಧನರಾದರು. ಅವರಿಗೆ 80 ವರ್ಷ ವಯಸ್ಸಾಗಿತ್ತು.

ಮೃತರು ಪತ್ನಿ, ಮೈಸೂರುಮಿತ್ರ ಪ್ರತಿನಿಧಿ ಸಿ.ಜಿ.ಮಧು ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಮತ್ತು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಮಾಜಿ ಸಚಿವ ಸಾ.ರಾ.ಮಹೇಶ್, ದೊಡ್ಡಸ್ವಾಮೇಗೌಡ, ಜಿ.ಪಂ.ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್ ಅಂತಿಮ ನಮನ ಸಲ್ಲಿಸಿದರು. ಮೃತರ ಅಂತ್ಯಕ್ರಿಯೆ ಚುಂಚನಕಟ್ಟೆ ಸಮೀಪದ ಮೃತರ ಜಮೀನಿನಲ್ಲಿ ಶುಕ್ರವಾರ ಮಧ್ಯಾಹ್ನ ನಡೆಯಿತು.

ಬಿಳಿಕೆರೆ ಶ್ರೀಮಹದೇಶ್ವರ ದೇವಸ್ಥಾನ ಲೋಕಾರ್ಪಣೆ


ಹದಿನಾರು ಗ್ರಾಮ ಪ್ರವಾಸಿ ತಾಣ, ಧಾರ್ಮಿಕ ಕ್ಷೇತ್ರವಾಗಲಿದೆ: ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ನಂಜನಗೂಡು: ನಾವು ದೇವರೆಂದು ಪೂಜಿಸುತ್ತಿರುವ ಮಹದೇಶ್ವರ ದೇವರ ವಿಚಾರಧಾರೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಶಾಂತಿ, ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತದೆ. ಇದಕ್ಕೆ ನಾವೆಲ್ಲರೂ ಒಂದೇ ಎನ್ನುವ ಭಾವನೆ ಎಲ್ಲರಲ್ಲೂ ಬರಬೇಕು ಎಂಬುದು ನಮ್ಮ ಆಶಯವಾಗಿದೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಶುಕ್ರವಾರ ಜಿಲ್ಲಾಡಳಿತ ಮತ್ತು ಕಾವೇರಿ ನೀರಾವರಿ ನಿಗಮ ನಿಯಮಿತದ ಸಂಯುಕ್ತ ಆಶ್ರಯದಲ್ಲಿ 'ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಂಜನಗೂಡು ತಾಲೂಕು ಹದಿನಾರು ಗ್ರಾಮದಲ್ಲಿ ಜೀರ್ಣೋದ್ಧಾರಗೊಂಡ ಶ್ರೀ ಬಿಳಿಕೆರೆ ಮಹದೇಶ್ವರ ದೇವಸ್ಥಾನದ ಅಭಿವೃದ್ಧಿ, ಲೋಕಾರ್ಪಣೆ ಮತ್ತು ಕಾಮಗಾರಿಗಳ ಶಂಕುಸ್ಥಾಪನಾ ಸಮಾರಂಭದಲ್ಲಿ ಮಾತನಾಡಿದರು.

ಮಹದೇಶ್ವರ ಅವರು ಜನರ ಬದುಕಿನ ನೋವು, ಕಷ್ಟಗಳನ್ನು ಜಾನಪದ ಸಾಹಿತ್ಯದ ಮೂಲಕ ಹೇಳುತ್ತಿದ್ದರು. ಬದುಕನ್ನು ಅರ್ಥ ಪೂರ್ಣವಾಗಿ ಹೇಳುವುದರ ಮೂಲಕ ಜನರನ್ನು ಜಾಗೃತಿಗೊಳಿಸುತ್ತಿದ್ದರು. ಮಹದೇಶ್ವರ ಜಾನಪದ ಸಾಹಿತ್ಯದ ನಾಯಕ, ಸಮಾಜದ ಸುಧಾರಣೆ ಮೂಲಕ ಜನರನ್ನು ಎಚ್ಚರಗೊಳಿಸುತ್ತಿದ್ದರು. ಪೂಜಾ ಕೈಂಕರ್ಯಗಳು ಜನರನ್ನೆಲ್ಲ ಒಂದೇ ಕಡೆ ಸೇರಿಸಿ ನಾವೆಲ್ಲರೂ ಒಂದೇ ಎನ್ನುವುದನ್ನು ತಿಳಿಸುವುದು, ಯಾವುದೇ ತಾರತಮ್ಯ ಮಾಡದೇ ಮನುಷ್ಯರೆಲ್ಲರೂ ಒಂದೇ ಎಂಬುದು ಮಹದೇಶ್ವರ ತತ್ವವಾಗಿತ್ತು ಎಂದು ತಿಳಿಸಿದರು.

ಹದಿನಾರು ಗ್ರಾಮದ ಪಕ್ಕದಲ್ಲಿ ಚಿತ್ರನಗರಿ, ಕಾರ್ಖಾನೆಗಳು ಸ್ಥಾಪನೆಯಾಗಲಿದ್ದು, ಪ್ರವಾಸಿ ತಾಣವಾಗುವುದರ ಜೊತೆಗೆ ಧಾರ್ಮಿಕ ಕ್ಷೇತ್ರವಾಗುವುದು ಖಂಡಿತಾ. ಆದ್ದರಿಂದ ಈ ಸ್ಥಳದ ಸ್ವಚ್ಛತೆಯನ್ನು ಕಾಪಾಡಬೇಕು, ಸರ್ಕಾರ ಜನರ ಅನುಕೂಲಕ್ಕಾಗಿ ಅನೇಕ ಸೌಕರ್ಯಗಳನ್ನು ನೀಡಿದೆ.


ಬಿಳಿಕೆರೆ ಶ್ರೀ ಮಹದೇಶ್ವರ ದೇವಸ್ಥಾನವನ್ನು ಉದ್ಘಾಟಿಸುತ್ತಿರುವ ಸಚಿವ ಡಾ.ಹೆಚ್.ಸಿ.ಮಹದೇವಪ್ಪ.

ಸಂಸದರಾದ ಸುನೀಲ್ ಬೋಸ್ ಮಾತನಾಡಿ, ನಾನು ಹುಟ್ಟಿದ ಊರಲ್ಲಿ ಈ ದೇವಸ್ಥಾನದ ಅಭಿವೃದ್ಧಿ ನೋಡಿ ಸಂತಸವಾಗುತ್ತಿದೆ, ಯಾರೇ ಆಗಲಿ ಒಂದು ಉನ್ನತ ಸ್ಥಾನಕ್ಕೆ ಹೋದಾಗ ತಮ್ಮ ಗ್ರಾಮಕ್ಕೆ ಒಂದಷ್ಟು ಒಳ್ಳೆಯ ಕೆಲಸ ಮಾಡಬೇಕು, ನನ್ನ ಹುಟ್ಟೂರಿಗೆ ಏನಾದರೂ ಮಾಡಬೇಕು ಎಂಬ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಅದೇ ರೀತಿ ಮಹದೇವಪ್ಪ ಅವರು ಸ್ವಗ್ರಾಮಕ್ಕೆ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ, ಈ ಹಿಂದೆ ಲೋಕೋಪಯೋಗಿ ಸಚಿವರಾಗಿದ್ದಾಗ ಅನೇಕ ರಸ್ತೆಗಳು, ಸೇತುವೆ ಮಾಡಿದ್ದಾರೆ. ಗಬ್ಬು ನಾರುತ್ತಿದ್ದ ಸ್ಥಳವನ್ನು ಉದ್ಯಾನವನ ನಿರ್ಮಾಣ ಮಾಡಿ ಈ ಗ್ರಾಮದ ಜನರಿಗೆ ಕೊಡುಗೆ ನೀಡಿದ್ದಾರೆ ಎಂದು ಸಚಿವರನ್ನು ಕೊಂಡಾಡಿದರು.

ಈಗಾಗಲೇ ಈ ಭಾಗದಲ್ಲೇ ಫಿಲ್ಮ್ ಸಿಟಿ ನಿರ್ಮಾಣ ಮಾಡಲಾಗುತ್ತಿದೆ. ಇದರಿಂದ ಹದಿನಾರು ಗ್ರಾಮವು ಕೂಡ ಒಂದು ಪ್ರವಾಸಿತಾಣವಾಗಲಿದೆ. ಸುಸಜ್ಜಿತವಾದ ದೇವಾಲಯವನ್ನು ಊರಿನ ಜನರು ಸ್ವಚ್ಛವಾಗಿ ಕಾಪಾಡಿಕೊಂಡು ಹೋಗಬೇಕು. ನಾವು ಇದೇ ರೀತಿ ಇನ್ನೂ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ನಮ್ಮ ಗ್ರಾಮಕ್ಕೆ ಮಾಡುತ್ತೇವೆ, ಏನೇ ಮಾಡಿದರೂ ಹುಟ್ಟೂರಿನ ಋಣ ತೀರಿಸಲು ಆಗದು ಎಂದು ಸಂತಸ ವ್ಯಕ್ತಪಡಿಸಿದರು.

> ನಾನು ರಾಜಕೀಯಕ್ಕೆ ಬಂದ ನಂತರ ನನಗೆ ನನ್ನ ತಾಯಿ ಊರಿನ ಜನರಿಗೆ ನೀನು ಒಳ್ಳೆಯದನ್ನು ಮಾಡಬೇಕು. ರಸ್ತೆ, ದೇವಸ್ಥಾನ, ಕುಡಿಯುವ ನೀರಿನ ವ್ಯವಸ್ಥೆ ಉತ್ತಮವಾಗಿ ಮಾಡಿಕೊಡಬೇಕು ಎಂದು ಹೇಳಿದರು. ಅದರಂತೆ ಊರಿನ ಅಭಿವೃದ್ಧಿ ಮಾಡುತ್ತಾ ಬರುತ್ತಿದ್ದೇನೆ. ರಾಜಕೀಯದಲ್ಲಿ ನನ್ನ ತಾಯಿಯೇ ನನಗೆ ಪ್ರೇರಣೆ.
> –ಡಾ.ಹೆಚ್.ಸಿ.ಮಹದೇವಪ್ಪ

ಇದೇ ವೇಳೆ ದೇವಾಲಯ ನಿರ್ಮಾಣಕ್ಕೆ ಸಹಕರಿಸಿದ ಗುತ್ತಿಗೆದಾರರು, ಶಿಲ್ಪಿಗಳು ಮತ್ತು ಕಾರ್ಮಿಕರನ್ನು ಗೌರವಿಸಿ, ಅಭಿನಂದಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ವಿಷ್ಣುವರ್ಧನ್, ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರಾದ ಶೇಖ್ ತನ್ವೀರ್ ಅಸೀಫ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಮೈಸೂರು ಮೃಗಾಲಯದ ಅಧ್ಯಕ್ಷ ರಂಗಸ್ವಾಮಿ, ದೇವನೂರು ಬುಲೆಟ್ ಮಹದೇವಪ್ಪ ಅಧಿಕಾರಿಗಳಾದ ರವಿಕುಮಾರ್, ಕಾಡಾ ಇಲಾಖೆಯ ಮಹೇಶ್, ಹದಿನಾರು ಗ್ರಾಪಂ ಅಧ್ಯಕ್ಷ ಸಣ್ಣತಾಯಮ್ಮ, ಉಪಾಧ್ಯಕ್ಷ ಗೋವಿನ ಶೆಟ್ಟಿ, ಜಿಪಂ ಮಾಜಿ ಸದಸ್ಯ ನಂಜಪ್ಪ, ಬಸವಣ್ಣ, ಅಭಿಲಾಶ್, ಗುರುಮಲ್ಲಪ್ಪ, ಶಿವಕುಮಾರ್, ತಿಬ್ಬಣ್ಣ, ಗುತ್ತಿಗೆದಾರ ನಾಗರಾಜು, ಮಹದೇವಸ್ವಾಮಿ ಹದಿನಾರು ಗ್ರಾಮದ ಮುಖಂಡರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಕನ್ನಡ ರಾಜ್ಯೋತ್ಸವ

ಶಾಲೆಗಳಲ್ಲಿ ಮಾತೃ ಭಾಷೆ, ಪರಿಸರ ಭಾಷೆ ಕಲಿಕೆಗೆ ಒತ್ತು ನೀಡಬೇಕು: ಉದ್ಯಮಿ ಡಿ.ಟಿ.ಪ್ರಕಾಶ್ ಕರೆ




ಮೈಸೂರಿನ ಕನಕದಾಸನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಯಮಿ ಹಾಗೂ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ.ಪ್ರಕಾಶ್ ಉದ್ಘಾಟಿಸಿದರು. ಈ ವೇಳೆ ನೈಪುಣ್ಯ ವಿದ್ಯಾ ಸಂಸ್ಥೆ ಅಧ್ಯಕ್ಷ ಆರ್.ರಘು ಅವರಿದ್ದರು. ಮತ್ತೊಂದು ಚಿತ್ರದಲ್ಲಿ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕಾಣಬಹುದು.

ಮೈಸೂರು, ನ.14(ಬಿಎಲ್‌ಯು)– ಪ್ರಾಥಮಿಕ ಶಿಕ್ಷಣದಲ್ಲಿ ಮಾತೃ ಭಾಷೆ ಹಾಗೂ ಪರಿಸರ ಭಾಷೆ ಕಲಿಕೆಗೆ ಹೆಚ್ಚು ಒತ್ತು ನೀಡಬೇಕು ಎಂದು ಉದ್ಯಮಿಯೂ ಆದ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ.ಪ್ರಕಾಶ್ ಕರೆ ನೀಡಿದರು.

ಮೈಸೂರಿನ ಕನಕದಾಸ ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಇಂದು ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂಗ್ಲಿಷ್ ಹಾಗೂ ಅನ್ಯ ಭಾಷೆ ಕಲಿಯುವುದರ ಜೊತೆಗೆ ಕನ್ನಡ ಭಾಷೆಗೆ ಹೆಚ್ಚಿನ ಮಹತ್ವ ನೀಡಬೇಕು ಎಂದು ಸಲಹೆ ನೀಡಿದರು.

ಮಕ್ಕಳು ಸಂಸ್ಕಾರವಂತರಾಗಲು ಅವರಲ್ಲಿ ಪ್ರಾಥಮಿಕ ಹಂತದಲ್ಲೇ ಶಿಸ್ತಿಗೆ ಮಹತ್ವ ನೀಡಬೇಕು. ಮಕ್ಕಳಲ್ಲಿರುವ ಸಾಂಸ್ಕೃತಿಕ ಕೌಶಲ್ಯವನ್ನು ಶಿಕ್ಷಕರು ಹಾಗೂ ಪೋಷಕರು ಅನಾವರಣಗೊಳಿಸಬೇಕು ಎಂದು ಡಿ.ಟಿ.ಪ್ರಕಾಶ್ ಅಭಿಪ್ರಾಯಪಟ್ಟರು.

ಇಂದು ಮನೆಗಳಲ್ಲಿ ಬಾಲ್ಯದ ಸಹಜ ವಾತಾವರಣ ಸೃಷ್ಟಿಸಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಶಾಲಾ ಪರಿಸರದಲ್ಲೇ ಮಕ್ಕಳಿಗೆ ನಮ್ಮ ಪರಂಪರೆ ಬಗ್ಗೆ ಪರಿಚಯ ಮಾಡಿಕೊಟ್ಟು ಅವರು, ಸಮಾಜಮುಖಿಯಾಗಿ ಬೆಳೆಯಲು ಅವಕಾಶ ಕಲ್ಪಿಸಬೇಕು. ಅಲ್ಲದೆ ಪರಿಸರ ಪ್ರೇಮ, ನಾಡು ನುಡಿ, ದೇಶಾಭಿಮಾನದ ಬಗ್ಗೆ ಆಸಕ್ತಿ ಮೂಡಿಸಬೇಕು ಎಂದು ಕಿವಿಮಾತು ಹೇಳಿದರು.

ಈ ಹಿನ್ನೆಲೆಯಲ್ಲಿ ನೈಪುಣ್ಯ ವಿದ್ಯಾಸಂಸ್ಥೆ ಬಹಳ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ. ಸಂಶೋಧನೆ ವಿಚಾರಗಳ್ನು ಅಳವಡಿಸಿಕೊಂಡು ಹೊಸ ಪ್ರಯೋಗ ನಡೆಸುತ್ತಿದೆ. ಇದು ಇಂದಿನ ಶಿಕ್ಷಣ ವ್ಯವಸ್ಥೆಗೆ ಅತ್ಯಗತ್ಯ ಎಂದು ಡಿ.ಟಿ.ಪ್ರಕಾಶ್ ಅಭಿಪ್ರಾಯಪಟ್ಟರು.

ಇದೇ ವೇಳೆ ಮಾತನಾಡಿದ ಬರಹಗಾರ ರಂಗನಾಥ್ ಅವರು, ಮಕ್ಕಳಿಗೆ ಕನ್ನಡ ಭಾಷೆಯ ಕಲಿಕೆಗೆ ಒತ್ತು ನೀಡುವುದು ಪ್ರತಿಯೊಂದು ಶಿಕ್ಷಣ ಸಂಸ್ಥೆಗಳ ಆದ್ಯ ಕರ್ತವ್ಯವಾಗಿದೆ. ನೈಪುಣ್ಯ ವಿದ್ಯಾ ಸಂಸ್ಥೆ ಇದರ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿದೆ ಎಂದು ಪ್ರಶಂಸಿಸಿದರು.

ಕನ್ನಡ ರಾಜ್ಯೋತ್ಸವದ ಹಿನ್ನೆಲೆ ಮಕ್ಕಳು ಛದ್ಮವೇಶ, ಕನ್ನಡ ಹಾಡುಗಳಿಗೆ ನೃತ್ಯ ಹಾಗೂ ಕಿರು ನಾಟಕಗಳನ್ನು ಪ್ರದರ್ಶಿಸಿದರು.

ಸಂಸ್ಥೆ ಅಧ್ಯಕ್ಷ ಆರ್.ರಘು ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ಪ್ರಾಂಶುಪಾಲರಾದ ಮಹೇಂದ್ರ ಹಾಗೂ ಎಂ.ಎನ್.ಶ್ರೀಮತಿ ಶಾಲಿನಿ ಮಾಜೋ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನವ್‌ಕೀಸ್ ಶಾಲೆಯಲ್ಲಿ ರಾಜ್ಯೋತ್ಸವ



ಮೈಸೂರಿನ ಬನ್ನೂರು ರಸ್ತೆಯ ನಾಡನಹಳ್ಳಿಯಲ್ಲಿರುವ ನವ್‌ಕೀಸ್ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ವಿಜೃಂಭಣೆಯಿಂದ ನೆರವೇರಿತು.

ಮೈಸೂರು,ನ.14(ಎಂಟಿವೈ)– ಮೈಸೂರಿನ ಬನ್ನೂರು ರಸ್ತೆಯ ನಾಡನಹಳ್ಳಿಯಲ್ಲಿರುವ ನವ್‌ಕೀಸ್ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ವಿಜೃಂಭಣೆಯಿಂದ ನೆರವೇರಿತು.

ಶಾಲಾ ಆವರಣದಲ್ಲಿ ಆಯೋಜಿಸಿದ್ದ ವರ್ಣರಂಜಿತ ವೇದಿಕೆಯಲ್ಲಿ 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರು' ಪತ್ರಿಕೆಯ ವರದಿಗಾರ ಎಂ.ಟಿ.ಯೋಗೇಶ್ ಕುಮಾರ್ ಅವರು, ದೀಪ ಬೆಳಗಿಸಿ, ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ದೇಶದಲ್ಲಿರುವ ಸಾವಿರಾರು ಭಾಷೆಗಳಲ್ಲಿ ಕನ್ನಡ ಭಾಷೆ ಅತ್ಯಂತ ಶ್ರೀಮಂತ ಭಾಷೆಯಾಗಿದೆ. ಅನೇಕ ಮಹನೀಯರು, ಹೆಸರಾಂತ ಕವಿ, ಸಾಹಿತಿಗಳು ಕನ್ನಡ ಭಾಷೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತಾ ತಮ್ಮದೆ ಆದ ಕೊಡುಗೆ ನೀಡಿದ್ದಾರೆ. ಹಿರಿಯರು ಕಟ್ಟಿ ಬೆಳೆಸಿದ ಕನ್ನಡ ಭಾಷೆಯನ್ನು ಮತ್ತಷ್ಟು ಶ್ರೀಮಂತಗೊಳಿಸುವ ಹಾಗೂ ಕನ್ನಡವನ್ನು ಬಳಸಿ, ಬೆಳೆಸುವ ಮಹತ್ತರ ಜವಾಬ್ದಾರಿ ಯುವಸಮೂಹ ಹಾಗೂ ವಿದ್ಯಾರ್ಥಿಗಳದ್ದಾಗಿದೆ ಎಂದು ಅಭಿಪ್ರಾಯಪಟ್ಟರು.

ಇದಕ್ಕೂ ಮುನ್ನ ಶಾಲೆಯ ಪ್ರಾಂಶುಪಾಲರಾದ ತಾರಾಕೇಶ್ವರಿ ಮಾತನಾಡಿ, ಕನ್ನಡ ಭಾಷೆಯ ಇತಿಹಾಸ, ವೈಶಿಷ್ಟ್ಯತೆಯ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸಿದರು.

ಶಾಲೆಯ ವಿದ್ಯಾರ್ಥಿಗಳು ಆದಿವಾಸಿ ನೃತ್ಯ, ಪುಣ್ಯಕೋಟಿ ನೃತ್ಯ, ಕಂಸಾಳೆ, ಪೂಜಾ ಕುಣಿತ, ಕನ್ನಡ ನಾಡಿನ ಸಂಭ್ರಮ ಕುರಿತ ನೃತ್ಯ ಪ್ರದರ್ಶಿಸಿದರು.

ಮೊಬೈಲ್ ತ್ಯಜಿಸಿ ಪರಿಶ್ರಮಪಟ್ಟರೆ ಗುರಿ ಸಾಧಿಸಬಹುದು

ಸಂಶೋಧನಾ ವಿದ್ಯಾರ್ಥಿಗಳಿಗೆ ಕುಲಪತಿ ಪ್ರೊ.ಲೋಕನಾಥ್ ಸಲಹೆ



ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಸ್ಟಡೀಸ್ ಸಭಾಂಗಣದಲ್ಲಿ ಶುಕ್ರವಾರ ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಹಸ್ತಪ್ರತಿ ಬರವಣಿಗೆ, ಜರ್ನಲ್ ಪ್ರಕಟಣೆ ಮತ್ತು ಸಂಶೋಧನಾ ನೀತಿ ಶಾಸ್ತ್ರದ ಕಾರ್ಯಾಗಾರವನ್ನು ಪ್ರೊಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಮೈಸೂರು, ನ.14(ಬಿಎಲ್ ಯು)– ವಿದ್ಯಾ ಭ್ಯಾಸಕ್ಕೆ ಸಂಬಂಧಿಸಿದಂತೆ ಮೊಬೈಲ್ ಯಾವುದೇ ಸೂಕ್ತ ಮಾಹಿತಿ ನೀಡುವುದಿಲ್ಲ. ಇದರಿಂದ ಮೊಬೈಲ್ ಪಕ್ಕಕಿಟ್ಟು ಶ್ರಮ ಪಟ್ಟರೆ ಗುರಿ ಸಾಧಿಸಬಹುದು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಸಲಹೆ ನೀಡಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಇನ್ಸ್ ಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಸ್ಟಡೀಸ್ ಸಭಾಂಗಣದಲ್ಲಿ ಇಂದು ವಿಶ್ವ ವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಹಸ್ತಪ್ರತಿ ಬರವಣಿಗೆ, ಜರ್ನಲ್ ಪ್ರಕಟಣೆ ಮತ್ತು ಸಂಶೋಧನಾ ನೀತಿ ಶಾಸ್ತ್ರದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಆವಿಷ್ಕಾರ, ಹೊಸತನದ ಬಗ್ಗೆ ಹುಡುಕಾಟ ನಡೆಸಿದಾಗ ಸಂಶೋಧನೆ ಮಾಡಲು ಸಾಧ್ಯವಾಗುತ್ತದೆ ಎಂದರು.

ಬಹು ಜ್ಞಾನವನ್ನು ರೂಢಿಸಿಕೊಂಡು ಹೊಸತನವನ್ನು ಕಂಡುಕೊಳ್ಳಬೇಕು. ಈ ಮೂಲಕ ಗುಣಮಟ್ಟದ ಸಂಶೋಧನೆ ಮಾಡಿ ಪಿಹೆಚ್ ಡಿ ಪಡೆಯಲು ಸಾಧ್ಯವಾಗುತ್ತದೆ. ಓದಿನಲ್ಲಿ ನಕಾರಾತ್ಮಕತೆ ಬಿಟ್ಟು ಸಕಾರಾತ್ಮಕ ವಿಚಾರಗಳ ಬಗ್ಗೆ ಗಮನ ಹರಿಸಬೇಕು ಎಂದು ಪ್ರೊ.ಲೋಕನಾಥ್ ಹೇಳಿದರು.

ಸರ್ಕಾರಿ ಕೆಲಸವೇ ಬೇಕೆಂದು ಪಟ್ಟು ಹಿಡಿಯಬಾರದು. ಖಾಸಗಿ ಕ್ಷೇತ್ರದಲ್ಲಿ ಸಿಗುವ ಅವಕಾಶ ಪಡೆದುಕೊಳ್ಳಬೇಕು. ನಾವು ಸಾಧನೆ ಮಾಡಲು ಬಹಳಷ್ಟು ಅವಕಾಶಗಳಿದ್ದು, ಅದನ್ನು ಸದುಪಯೋಗ ಮಾಡಿಕೊಳ್ಳಬೇಕಷ್ಟೆ ಎಂದು ಹೇಳಿದರು.

ನಮಗೆ ಇಂಗ್ಲಿಷ್ ಬರುವುದಿಲ್ಲ ಎಂದು ಹಿಂಜರಿಯಬಾರದು, ಗಮನವಿಟ್ಟು ಜ್ಞಾನಾರ್ಜನೆ ಮಾಡಿದರೆ ಯಾವ ಭಾಷೆಯೂ ಕಬ್ಬಿಣದ ಕಡಲೆಯಲ್ಲ. ಈ ಹಿನ್ನೆಲೆಯಲ್ಲಿ ಸವಾಲುಗಳನ್ನು ಸ್ವೀಕರಿಸಿ ಪರಿಶ್ರಮ ಪಟ್ಟರೆ ಸುಲಭವಾಗಿ ಗುರಿ ಸಾಧಿಸಬಹುದು ಎಂದು ಪ್ರೊ.ಲೋಕನಾಥ್ ಸಂಶೋಧನಾ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಿಶ್ವವಿದ್ಯಾನಿಲಯದ ವೃತ್ತಿ ಕೇಂದ್ರದ ಸಂಯೋಜಕ ಪ್ರೊ.ಆರ್.ಮಹೇಶ್, ಗೌರವ ನಿರ್ದೇಶಕ ಗಿರೀಶ್ ಬಾಗ, ಪ್ರೊ.ಎಸ್.ಜೆ.ಮಂಜುನಾಥ್ ಹಾಗೂ ಪಿ.ಪ್ರಭಾಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.


ಮೈಸೂರು ಮಾನಸ ಗಂಗೋತ್ರಿ ಆವರಣ ಸಮಸ್ಯೆಯ ಆಗರ

ನೀರಿಲ್ಲ, ಲೈಟಿಲ್ಲ; ಸುರಕ್ಷತೆ ಮೊದಲೇ ಇಲ್ಲ

ಮೈಸೂರು, ನ.14(ವಿವಿಹೆಚ್)– ಶತಮಾನಗಳ ಇತಿಹಾಸವಿರುವ, ರಾಷ್ಟ್ರಕವಿ ಕುವೆಂಪು ಕನಸು, ಸಮೃದ್ಧ ಪರಿಸರದೊಂದಿಗೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಾಕ್ಷಿಯಾಗುತ್ತಿದ್ದ, ಇಲ್ಲಿಗೆ ಬಂದರೆ ಬದುಕು ಕಟ್ಟಿಕೊಂಡು ಹೋಗಬಹುದು ಎಂದು ರಾಜ್ಯ ಮಾತ್ರವಲ್ಲದೇ ದೇಶ–ವಿದೇಶಗಳಲ್ಲಿಯೂ ಭರವಸೆ ಮೂಡಿಸುತ್ತಿದ್ದ ಮೈಸೂರು ವಿಶ್ವವಿದ್ಯಾನಿಲಯ ಇಂದು ಶೋಚನೀಯ ಸ್ಥಿತಿ ತಲುಪಿರುವುದು ದುರಂತವೇ ಸರಿ...



ಕೆಟ್ಟುನಿಂತ ಆರ್ ಓ ಪ್ಲಾಂಟ್



ಬುದ್ಧ ಆವರಣದಲ್ಲಿ ವಿದ್ಯುತ್ ಬಲ್ಬ್‌ಗಳು ಕಾಣೆಯಾಗಿರುವುದು



ಕ್ಲಾಕ್ ಟವರ್ ಆವರಣದಲ್ಲಿ ಹಾಳಾಗಿರುವ ವಿದ್ಯುತ್ ದೀಪಗಳು

ಮಾನಸ ಗಂಗೋತ್ರಿಯಲ್ಲಿ ಲಕ್ಷಾಂತರ ರೂ. ಖರ್ಚುಮಾಡಿ ನಿರ್ಮಿಸಲಾದ ಶುದ್ಧ ಕುಡಿಯುವ ನೀರಿನ ಘಟಕಗಳು ಉದ್ಘಾಟನೆಯಾದ 6 ತಿಂಗಳಲ್ಲೇ ಹಾಳಾಗಿದ್ದು, ಎರಡು ವರ್ಷ ಕಳೆದರೂ ಇವುಗಳ ಸರಿಪಡಿಸುವ ಕಡೆಗೆ ವಿವಿ ಚಿಂತನೆ ನಡೆಸಿಲ್ಲ. ವಿದ್ಯಾರ್ಥಿಗಳಿಗೆ ನೀರಿಲ್ಲದೇ ತೀವ್ರ ತೊಂದರೆಯಾಗಿದೆ. ಹೀಗಾಗಿ ಮಾನಸ ಗಂಗೋತ್ರಿಯಲ್ಲಿ ಶುದ್ಧ ಕುಡಿಯುವ ನೀರಿಗಾಗಿ ವಿದ್ಯಾರ್ಥಿಗಳು ಸ್ಥಳೀಯ ಕ್ಯಾಂಟೀನ್‌ಗಳು, ಬಾಟಲಿ ನೀರನ್ನು ಅವಲಂಬಿಸುವ ದುರ್ಗತಿ ಬಂದಿದೆ.

ಮತ್ತೊಂದೆಡೆ ವಿವಿಯಲ್ಲಿ ಅಳವಡಿಸಲಾಗಿದ್ದ ವಿದ್ಯುತ್ ದೀಪಗಳ ಪೈಕಿ ಭಾಗಶಃ ಎಲ್ಲವೂ ನಾಶವಾಗಿ ಹೋಗಿವೆ. ಕಾಡಿನಂತಿರುವ ಕ್ಯಾಂಪಸ್‌ನಲ್ಲಿ ಸಂಜೆ ವೇಳೆ ತಿರುಗಾಡುವುದಕ್ಕೂ ವಿದ್ಯಾರ್ಥಿಗಳು ಭಯಪಡುವ ಸ್ಥಿತಿ ನಿರ್ಮಾಣವಾಗಿದೆ.

ಕತ್ತಲಲ್ಲಿ ಗಂಗೋತ್ರಿ; ಶತಮಾನಗಳ ಇತಿಹಾಸವಿರುವ, ಶಿಕ್ಷಣ ಕಾಶಿ ಎಂದೇ ಹೆಸರುವಾಸಿಯಾಗಿದ್ದ ಮೈಸೂರು ವಿವಿಯ ಮಾನಸ ಗಂಗೋತ್ರಿ ಆವರಣ ಇಂದು ಕತ್ತಲಲ್ಲಿ ಮುಳುಗಿದೆ. ಗಂಗೋತ್ರಿ ಆವರಣದಲ್ಲಿ ಸಂಜೆ ವೇಳೆ ತಿರುಗಾಡುವುದೇ ಕಷ್ಟಕರ ಪರಿಸ್ಥಿತಿ ನಿರ್ಮಾಣವಾಗಿದೆ. ಗಂಗೋತ್ರಿಯಲ್ಲಿ ಅಳವಡಿಸಿದ್ದ ಬಹುತೇಕ ವಿದ್ಯುತ್ ಬಲ್ಬ್‌ಗಳು ಹಾಳಾಗಿವೆ. ಹೀಗಿದ್ದರು ಅದನ್ನು ಸರಿಪಡಿಸುವ ಕೆಲಸಕ್ಕೆ ಯಾರೂ ಕೈ ಹಾಕಿಲ್ಲ.

ವಿವಿಯ ಮುಖ್ಯದ್ವಾರದಿಂದ ಕ್ಲಾಕ್ ಟವರ್‌ವರೆಗೆ ಹಾಗೂ ಗೆಸ್ಟ್ ಹೌಸ್ ರಸ್ತೆಯ ಭಾಗದಲ್ಲಿ ಮಾತ್ರ ವಿದ್ಯುತ್ ದೀಪಗಳು ಬೆಳಗುತ್ತಿವೆ. ಉಳಿದಂತೆ ಶೇ.80 ರಷ್ಟು ಎಲ್ಲ ಕೆಟ್ಟುನಿಂತಿವೆ. ಕ್ಲಾಕ್ ಟವರ್ ಸುತ್ತಮುತ್ತಲ ಜಾಗದಲ್ಲಿ ಅಳವಡಿಸಲಾಗಿರುವ ಬಲ್ಬ್‌ಗಳು ಒಡೆದು ಹೋಗಿವೆ. ಒಂದಷ್ಟು ಬಲ್ಬ್‌ಗಳು ವೈರ್‌ಗಳಲ್ಲಿ ನೇತಾಡುತ್ತಿದ್ದರೆ, ಮತ್ತೊಂದಿಷ್ಟು ಉದುರಿ ಪುಡಿಪುಡಿಯಾಗಿವೆ. ಪಡುವಾರಹಳ್ಳಿ ಕಡೆಯಿಂದ ಕ್ಯಾಂಪಸ್‌ಗೆ ಎಂಟ್ರಿ ಕೊಡುವ ರಸ್ತೆ ಬದಿ, ಕ್ಲಾಕ್‌ಟವರ್‌ನಿಂದ ಜೆಸಿ ಕಾಲೇಜು ಕಡೆ ತೆರಳುವ ಮಾರ್ಗದಲ್ಲಿ, ಓಲ್ಡ್ ಪಿಜಿ ವಿದ್ಯಾರ್ಥಿ ನಿಲಯದಿಂದ ಬುದ್ಧ ಪ್ರತಿಮೆವರೆಗಿನ ಮಾರ್ಗ ಸೇರಿದಂತೆ ಎಲ್ಲಾ ಪ್ರಮುಖ ರಸ್ತೆಗಳ ಬದಿಯಲ್ಲಿ ಹಾಕಲಾಗಿರುವ ವಿದ್ಯುತ್ ದೀಪಗಳು ಕೆಟ್ಟುನಿಂತು ತಿಂಗಳುಗಳೇ ಕಳೆದಿವೆ.

ವಿದ್ಯಾರ್ಥಿ ನಿಲಯದ ಮುಖ್ಯ ರಸ್ತೆಯಿಂದ ಬುದ್ಧ ಪ್ರತಿಮೆಗೆ ತೆರಳುವ ಮಾರ್ಗದಲ್ಲಿ ಹಾಕಲಾಗಿರುವ ಸೋಲಾರ್ ವಿದ್ಯುತ್ ಕಂಬಗಳು ಸಂಪೂರ್ಣವಾಗಿ ತುಕ್ಕು ಹಿಡಿದು ನಿಂತಿವೆ. ಒಂದಷ್ಟು ವಿದ್ಯುತ್ ಕಂಬಗಳ ಮೇಲೆ ಮರಗಳ ಕೊಂಬೆಗಳು ಹಾದುಹೋಗಿವೆ ಆ ಮೂಲಕ ಅಪಾಯಕ್ಕೆ ಆಹ್ವಾನ ನೀಡುತ್ತಿರುವಂತೆ ಕಾಣುತ್ತಿವೆ. ವಿದ್ಯುತ್ ಕೇಬಲ್‌ಗಳ ಮೇಲೆ ಮರಗಳು ಹಾದು ಹೋಗುತ್ತಿದ್ದು ಅವುಗಳನ್ನು ತೆರವುಗೊಳಿಸುವ ಕೆಲಸ ಮಾತ್ರ ಆಗಿಲ್ಲ ಎಂದು ದೂರಿದ್ದಾರೆ.

ಹಾಸ್ಟೆಲ್‌ನಲ್ಲಿ ಕಿರಿಕಿರಿ ಎಂದು ಬಹುಪಾಲು ಹಾಸ್ಟೆಲ್ ವಿದ್ಯಾರ್ಥಿಗಳೆಲ್ಲಾ ರಾತ್ರಿ ವೇಳೆ ಬೀದಿ ದೀಪಗಳ ಬೆಳಕಿನಲ್ಲಿ ಓದುತ್ತಾರೆ. ಜೊತೆಗೆ ರಾತ್ರಿ ಊಟ ಮುಗಿಸಿ, ವಾಕಿಂಗ್ ಮಾಡುವವರಿಗೆ ತೀರಾ ತೊಂದರೆಯಾಗುತ್ತಿದೆ. ಬದುಕು ಕಟ್ಟಿಕೊಳ್ಳಲು ಬರುವ ವಿದ್ಯಾರ್ಥಿಗಳಿಗೆ ಕನಿಷ್ಠ ಮೂಲ ಸೌಕರ್ಯಗಳನ್ನೂ ಒದಗಿಸದೇ ವಿವಿ ಅನ್ಯಾಯ ಮಾಡುತ್ತಿದೆ ಎಂದು ವಿದ್ಯಾರ್ಥಿಗಳು ದೂರುತ್ತಾರೆ.

ಕೆಟ್ಟುನಿಂತ ಆರ್‌ಓ ಪ್ಲಾಂಟ್‌ಗಳು: ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಗಂಗೋತ್ರಿ ಆವರಣದ ಗಣಿತಶಾಸ್ತ್ರ ಅಧ್ಯಯನ ವಿಭಾಗ, ಗ್ರಂಥಾಲಯದ ಹಿಂಭಾಗ ಹಾಗೂ ಭೂವಿಜ್ಞಾನ ಶಾಸ್ತ್ರ ಮತ್ತು ಇತಿಹಾಸ ಅಧ್ಯಯನ ವಿಭಾಗದ ಮುಂಭಾಗ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಲಾಯಿತು. ಆದರೆ ಉದ್ಘಾಟನೆಯಾದ 6 ತಿಂಗಳಲ್ಲೇ ಈ ಘಟಕಗಳು ಹಾಳಾಗಿದ್ದರೂ ಸಂಬಂಧಪಟ್ಟವರು ದುರಸ್ತಿಗೆ ಕ್ರಮ ಕೈಗೊಳ್ಳದೇ ಇರುವುದರಿಂದ ನೀರಿನ ಘಟಕಗಳ ಸುತ್ತಲಿನ ಕಬ್ಬಿಣದ ತಗಡುಗಳು ತಳಭಾಗದಲ್ಲಿ ತುಕ್ಕು ಹಿಡಿದಿವೆ. ನೀರಿನ ಪೂರೈಕೆಗಾಗಿ ಬಳಸಿದ್ದ ಪ್ಲಾಸ್ಟಿಕ್ ಟ್ಯಾಂಕ್‌ಗಳೂ ಸಂಪೂರ್ಣವಾಗಿ ಹಾಳಾಗಿವೆ. ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಮೂಲಕ ವಿದ್ಯಾರ್ಥಿಗಳಿಗೆ ಮೂಲ ಸೌಕರ್ಯ ಒದಗಿಸಿಕೊಡುವಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಮುಂದಾಗಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.



ವಿವಿಯಲ್ಲಿ ಕುಡಿಯುವ ನೀರು ಹಾಗೂ ಬೀದಿ ದೀಪಗಳ ದುರಸ್ತಿಗೆ ಅನೇಕ ಬಾರಿ ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ. ರಸ್ತೆಗಳಲ್ಲಿ ಸಂಜೆ ವೇಳೆ ವಿದ್ಯಾರ್ಥಿಗಳು ಜೀವವನ್ನು ಕೈಯಲ್ಲಿ ಹಿಡಿದು ನಡೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಕುಡಿಯುವ ನೀರಿಲ್ಲದೆ ಕ್ಯಾಂಟೀನ್‌ಗಳಲ್ಲಿ ದುಡ್ಡು ಕೊಟ್ಟು ಖರೀದಿಸುವ ದುಸ್ಥಿತಿ ಎದುರಾಗಿದೆ. ಲಕ್ಷ–ಲಕ್ಷ ಖರ್ಚು ಮಾಡಿ ನಿರ್ಮಿಸಿದ ಕುಡಿಯುವ ನೀರಿನ ಘಟಕ ಕೇವಲ ನಾಮಕಾವಸ್ಥೆಗೆ ಮಾತ್ರ ಎಂಬುದು ದುರದೃಷ್ಟಕರ. ಕೂಡಲೇ ಈ ಸಮಸ್ಯೆಗಳನ್ನು ಬಗೆಹರಿಸಬೇಕು.

-ರವಿಕುಮಾರ್ ಮುಡಿಗುಂಡ, ಸಂಶೋಧನಾ ವಿದ್ಯಾರ್ಥಿ



ಬೀದಿ ದೀಪಗಳು ಹಾಳಾಗಿರುವ ಸಂಬಂಧ ಸಿಂಡಿಕೇಟ್ ಸದಸ್ಯರು ಸಂಜೆ ವೇಳೆ ಖುದ್ದು ಭೇಟಿ ನೀಡಿ ಪರಿಶೀಲನೆ ಮಾಡಿದ್ದೇವೆ. ವಿವಿಯ ಇಂಜಿನಿಯರಿಂಗ್ ವಿಭಾಗದ ಸಂಪೂರ್ಣ ವೈಫಲ್ಯವೇ ಈ ಎಲ್ಲಾ ಅವಸ್ಥೆಗೆ ಕಾರಣ. ಗಂಗೋತ್ರಿಯನ್ನು ಕತ್ತಲಿಗೆ ದೂಡಿರುವುದು ನಿಜಕ್ಕೂ ಶೋಚನೀಯ. ಇದನ್ನು ದುರಸ್ತಿ ಮಾಡದಿದ್ದ ಮೇಲೆ ಆಡಳಿತ ವರ್ಗ ಇದ್ದು ಪ್ರಯೋಜನವೇನು?. ಈ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಿ, ಪರಿಹಾರಕ್ಕೆ ಆಗ್ರಹಿಸುತ್ತೇನೆ.

–ನಟರಾಜ್ ಶಿವಣ್ಣ, ಸಿಂಡಿಕೇಟ್ ಸದಸ್ಯರು, ಮೈಸೂರು ವಿವಿ.



ಸಂಶೋಧಕರ ಸಂಘದ ಅಧ್ಯಕ್ಷನಾಗಿ ಆಯ್ಕೆಯಾದ ನಂತರ ಕುಲಸಚಿವೆ ಎಂ.ಕೆ.ಸವಿತಾ ಹಾಗೂ ಇಂಜಿನಿಯರಿಂಗ್ ವಿಭಾಗದ ವಸುಮತಿ ಅವರೊಂದಿಗೆ ನೀರಿನ ಸಮಸ್ಯೆ ಹಾಗೂ ಬೀದಿ ದೀಪಗಳ ಬಗ್ಗೆ ಚರ್ಚಿಸಿ, ಅವುಗಳ ಜೊತೆಗೆ ವಿವಿಯ ಇನ್ನಿತರ ಸಮಸ್ಯೆಗಳ ಬಗ್ಗೆಯೂ ಪ್ರಸ್ತಾಪಿಸಿದ್ದೇನೆ. ಕ್ಯಾಂಪಸ್‌ನಲ್ಲಿ ರಾತ್ರಿ ವೇಳೆ ಬೀದಿ ದೀಪಗಳು ಬಹುಪಾಲು ಹಾಳಾಗಿ ಹೋಗಿವೆ. ಈ ಬಗ್ಗೆ ಕುಲಸಚಿವರ ಗಮನಕ್ಕೆ ತರಲಾಗಿದ್ದು, ಶೀಘ್ರ ಈ ಸಮಸ್ಯೆ ಪರಿಹರಿಸುವುದಾಗಿ ಭರವಸೆ ನೀಡಿದ್ದಾರೆ.

-ವರಹಳ್ಳಿ ಆನಂದ, ಅಧ್ಯಕ್ಷರು, ಮೈಸೂರು ವಿವಿ ಸಂಶೋಧಕರ ಸಂಘ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದಾವೂದ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ದೇ ದೇ ಪ್ಯಾರ್ ದೇ–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬ್ರ್ಯಾಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಅದರ್ಸ್ (ತ)	4 ಪ್ರದರ್ಶನಗಳು
ಸಂಗಂ	
ಗತವೈಭವ (ಕ)	4 ಪ್ರದರ್ಶನಗಳು
ಲಿಡೋ	
ಬ್ರ್ಯಾಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಯಜಮಾನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.25ಕ್ಕೆ, ಸಂ.4.45ಕ್ಕೆ
	ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ.11.00ಕ್ಕೆ, ರಾ.8.05, ರಾ.10.25ಕ್ಕೆ
ಸ್ಕ್ರೀನ್ 2	ಡೈಸ್ ಇರೇ (ಮ): ಬೆ.10.40ಕ್ಕೆ, ಆರೊಮಲೆ (ತ): ಮ.1.25ಕ್ಕೆ, ಬ್ರ್ಯಾಟ್(ಕ): ಸಂ.4.05ಕ್ಕೆ, ಸಂ.7.15ಕ್ಕೆ ಜಟಾಧರ (ತೆ): ರಾ.10.20ಕ್ಕೆ
ಸ್ಕ್ರೀನ್ 3	ಹಕ್ (ಹಿ): ಬೆ.10.35ಕ್ಕೆ, ಮ. 1.25ಕ್ಕೆ, ಸಂ. 7.15ಕ್ಕೆ ಲವ್ ಯು ಮುದ್ದು(ಕ): ಸಂ. 4.20ಕ್ಕೆ, ಇನ್ನೊಸೆಂಟ್ (ಮ): ರಾ.10.10ಕ್ಕೆ,
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಸಂ. 7.00ಕ್ಕೆ, ಬ್ರಾಟ್(ಕ): ಬೆ.10.20ಕ್ಕೆ, ಯಜಮಾನ(ಕ): ಮ.1.30ಕ್ಕೆ, ದಿ ಗರ್ಲ್‌ಫ್ರೆಂಡ್ (ತೆ): ಸಂ.4.10ಕ್ಕೆ, ರಾ. 10.20ಕ್ಕೆ

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಕಾಂತಾರ –1(ಕ): ಬೆ.10.30, ಮ.1.35, ರಾ.7.15ಕ್ಕೆ
ಬ್ರ್ಯಾಟ್ (ಕ): ಬೆ.10.45ಕ್ಕೆ, ಮ.1.45, ಸಂ.4.45, ರಾ.7.45ಕ್ಕೆ
ನಿಷಿದ್ಧ (ಕ): ಬೆ.10.50ಕ್ಕೆ, ದಿ ಗರ್ಲ್‌ಫ್ರೆಂಡ್ (ತೆ): ಬೆ.11, ಸಂ.6.30, ರಾ.9.15ಕ್ಕೆ
ಕೋಣ (ಕ): ಮ.1.15ಕ್ಕೆ, ಐ ಆ್ಯಮ್ ಗಾಡ್ (ಕ): ಸಂ.3.40ಕ್ಕೆ,
ಲವ್ ಯು ಮುದ್ದು(ಕ): ಸಂ.6.40ಕ್ಕೆ, ಡೈಸ್ ಇರೇ (ಮ): ರಾ. 9.15ಕ್ಕೆ,

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 10.00ಕ್ಕೆ, ಸಂ.4.15ಕ್ಕೆ, ರಾ.10.30ಕ್ಕೆ
ಬ್ರ್ಯಾಟ್ (ಕ): ಬೆ: 9.45ಕ್ಕೆ, ಸಂ.4.05ಕ್ಕೆ.
ದಿ ಗರ್ಲ್‌ಫ್ರೆಂಡ್ (ತೆ): ಬೆ: 9.55ಕ್ಕೆ, ಮ.12.50ಕ್ಕೆ, ಸಂ.6.55, ರಾ: 9.50ಕ್ಕೆ
ಹಕ್ (ಹಿ): ಬೆ: 10.05ಕ್ಕೆ, ಮ.1.25, ಸಂ.7.40, ರಾ.10.00ಕ್ಕೆ
ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ. 10.05ಕ್ಕೆ, ಮ.12.30, ಸಂ.7.15, ರಾ.9.40ಕ್ಕೆ
ದಿ ತಾಜ್ ಸ್ಟೋರಿ (ಹಿ): ಬೆ: 10.05, ಮ: 3.50ಕ್ಕೆ,
ಯಜಮಾನ (ಕ): ಮ: 12.40ಕ್ಕೆ, ಜಟಾಧರ (ತೆ): ಮ: 1.00ಕ್ಕೆ,
ಡೈಸ್ ಇರೇ (ಮ): ಮ. 1.35ಕ್ಕೆ, ರಾ: 7.40ಕ್ಕೆ, ಬಾಹುಬಲಿ (ಹಿ): ಮ. 2.55ಕ್ಕೆ,
ತಮ್ಮಾ (ಹಿ): ಮ.3.45ಕ್ಕೆ, ಚೆನ್ನೈ ಎಕ್ಸ್‌ಪ್ರೆಸ್ (ಹಿ): ಸಂ. 4.05ಕ್ಕೆ,
ಆರೊಮಲೆ (ತ): ಸಂ.7.15ಕ್ಕೆ, ಏಕ್ ದಿವಾನೆ ಕಿ ದೀವಾನಿಯಾತ್ (ಹಿ): ಸಂ.7.15ಕ್ಕೆ
ಇನ್ನೋಸೆಂಟ್(ಮ): ರಾ.10.10ಕ್ಕೆ, ಮರ್ಡ್‌ರ್ ರಿಪೋರ್ಟ್(ಕೋ): ರಾ.10.20ಕ್ಕೆ,


ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 9.50ಕ್ಕೆ, ಮ.1.10ಕ್ಕೆ, ಸಂ.7.05
ಪ್ರೆಡೆಟರ್ ಬ್ಯಾಡ್‌ಲ್ಯಾಂಡ್ಸ್ (ಇ): ಬೆ. 10.00ಕ್ಕೆ, ಸಂ.4.45, ರಾ.10.20ಕ್ಕೆ
ದಿ ಗರ್ಲ್‌ಫ್ರೆಂಡ್ (ತೆ): ಬೆ: 10.10ಕ್ಕೆ, ಸಂ.7.05, ರಾ.10.00ಕ್ಕೆ
ಹಕ್ (ಹಿ): ಬೆ: 10.40ಕ್ಕೆ, ಸ.4.15, ರಾ.10.30ಕ್ಕೆ
ಬಾಹುಬಲಿ (ತೆ): ಮ. 12.25ಕ್ಕೆ,
ಬ್ರ್ಯಾಟ್ (ಕ): ಮ. 1.05ಕ್ಕೆ, ಸಂ.7.10ಕ್ಕೆ
ಜಟಾಧರ (ತೆ): ಮ: 1.30ಕ್ಕೆ,
ಲವ್ ಯು ಮುದ್ದು(ಕ): ಸಂ.4.20ಕ್ಕೆ, ಡೈಸ್ ಇರೇ (ಮ): ಸಂ.4.35, ರಾ.10.10ಕ್ಕೆ
ಐ ಆ್ಯಮ್ ಗಾಡ್ (ಕ): ಸಂ.7.05ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಮಹಾರಾಜ ಪ್ರೌಢಶಾಲೆಯ ಕಟ್ಟಡ ನವೀಕರಣಕ್ಕೆ ದಾನಿಗಳ ನೆರವು ಅತ್ಯವಶ್ಯ

ಮಹಾರಾಜ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಶ್ರೀಧರರಾಜೇ ಅರಸ್ ಅಭಿಪ್ರಾಯ



ಮೈಸೂರು, ನ.14(ಬಿಎಲ್ ಯು)– ಮೈಸೂರಿನ ಮಹಾರಾಜ ಪ್ರೌಢಶಾಲೆಯ ಪಾರಂಪರಿಕ ಶೈಲಿಯ ಕಟ್ಟಡ ನವೀಕರಣ ಮಾಡಲು ದಾನಿಗಳ ಸಹಾಯ ಅತ್ಯವಶ್ಯ ಎಂದು ಮಹಾರಾಜ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಶ್ರೀಧ'ರ ರಾಜೇ ಅರಸ್ ಅಭಿಪ್ರಾಯಪಟ್ಟರು.

ಶಾಲೆಯ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾರಂಪರಿಕ ಶೈಲಿಯ ಈ ಕಟ್ಟಡ ನವೀಕರಣ ಮಾಡದಿದ್ದರೆ ಶಿಥಿಲಗೊಳ್ಳುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ತಿಂಗಳಾಂತ್ಯದಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭ ಆಯೋಜಿಸಿ, ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅವರನ್ನು ಆಹ್ವಾನಿಸಲಾಗುವುದು. ಶಾಲಾ ಕಟ್ಟಡದ ನವೀಕರಣಕ್ಕೆ ಸರ್ಕಾರದಿಂದ ಅನುದಾನ ದೊರಕಿಸುವಂತೆ ಅಂದು ಅವರಲ್ಲಿ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಶ್ರೀಧರ ರಾಜೇ ಅರಸ್ ಹೇಳಿದರು.

ಮೈಸೂರಿನ ಆದಿತ್ಯ ಅಧಿಕಾರಿ ಆಸ್ಪತ್ರೆಯ ಡಾ.ಚಂದ್ರಶೇಖರ್ ಸೇರಿದಂತೆ ಹಲವು ಗಣ್ಯರನ್ನು ಕೂಡ ಅಂದು ಆಹ್ವಾನಿಸಲಾಗುವುದು. ಈ ಮೂಲಕ ಸರ್ಕಾರದ ಅನುದಾನದ ಜೊತೆಗೆ ಹಲವು ದಾನಿಗಳಿಂದ ಹಣ ಸಂಗ್ರಹ ಮಾಡಿ ಪಾರಂಪರಿಕ ಶೈಲಿಯ ಕಟ್ಟಡ ನವೀಕರಣ ಮಾಡಲಾಗುವುದು ಎಂದರು.

ನವೀಕರಣಕ್ಕಾಗಿ ನಾನು ವೈಯಕ್ತಿಕವಾಗಿ 25 ಸಾವಿರ ರೂಪಾಯಿ ನೀಡುತ್ತೇನೆ. ಅಲ್ಲದೆ ಶಾಲಾಭಿವೃದ್ಧಿಗೆ ಪ್ರತಿ ವರ್ಷ ಕೂಡ ನನ್ನ ಕೈಲಾದ ಹಣ ನೀಡುತ್ತೇನೆ. ಇದೇ ರೀತಿ ರಾಜರ ಕಾಲದ ಈ ಶಾಲೆ ಉಳಿವಿಗೆ ಇನ್ನು ಹಲವು ದಾನಿಗಳು ಉದಾರತೆ ತೋರಬೇಕು ಎಂದು ಮನವಿ ಮಾಡಿದರು.

ನಾವು ಶಾಲಾ ಕಟ್ಟಡವನ್ನು ನವೀಕರಣ ಮಾಡುತ್ತೇವೆ. ಆದರೆ ಇಲ್ಲಿ ಗುಣಮಟ್ಟದ ಶಿಕ್ಷಣ ನೀಡುವುದು ಇಲ್ಲಿನ ಶಿಕ್ಷಕರ ಜವಾಬ್ದಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಉತ್ತಮ ಫಲಿತಾಂಶ ದೊರಕಿಸುವ ಮೂಲಕ ಮುಂದಿನ ವರ್ಷಗಳಲ್ಲಿ ಇಲ್ಲಿ ದಾಖಲಾತಿಗೆ ಬಹಳ ಬೇಡಿಕೆ ಬರುವಂತಾಗಬೇಕು ಎಂದು ಆಶಿಸಿದರು.

ಈ ಮೂಲಕ ಈ ಶಾಲೆಯನ್ನು ಖಾಸಗಿ ಶಾಲೆ ಮೀರಿಸುವಂತೆ ಗುಣಮಟ್ಟದ ಶಿಕ್ಷಣ ನೀಡಬೇಕು. ಈ ಹಿನ್ನೆಲೆಯಲ್ಲಿ ಶಿಕ್ಷಕ ವೃಂದ ದಕ್ಷತೆಯಿಂದ ಕೆಲಸ ಮಾಡಬೇಕು ಎಂದು ಶ್ರೀಧರ ರಾಜೇ ಅರಸ್ ಕಿವಿಮಾತು ಹೇಳಿದರು.

PUBLIC NOTICE

It is hereby notified to the General public that my client Sri Nischay.S S/o H.D Somashekar aged 32 is intending to purchase the below-mentioned Schedule property from its absolute owner Swamy Nayaka S/o Late Thammanna Nayaka, aged about 67 years residing at # 108 Nagavala village, Nagavala post. Elvala Hobli Mysore Taluk Dist Mysore, hence if anybody / General public has any Right, Title, Interest or Claim/s, Lien/s, Objection/s, Charge/s, or GPA holder, etc., over the Schedule Property shall contact me at the below mentioned address during the working hours, with the documentary proof/s in original within 07 (Seven) days from the date of this publication. Failing which it will be presumed by my client that (a) there are no claim/s, lien/s, objection/s, etc., (b) if any, the same is / are deemed to have been waived and thus my client will be obliged to proceed with purchase of the schedule property as if there are no valid claim/s, lien/s, objection/s, charge/s, etc., subsisting against the Schedule property.

SCHEDULE

All that piece and parcel of the agricultural land bearing SY no 374/1 measuring 2.00 acers, Situated at Nagavala village, Nagavala hobli, Mysore Taluk Mysore dist, bounded on East by: SY No 162, West by: Sy no 374/2, North by: SY no 162, South by: Road,

Sd/- Kenche Gowda Patel, B.A.L., LL.B
Advocate, #2394, 2nd Floor, S.K. Complex, Kantharaj Urs Road, K.G.Koppal, MYSURU-570 014,
PH: 9632299404

Date: 14-11-2025, Place: Mysore.



Models	GST reductions up to*	Additional benefits up to*	Total benefits up to*
i20	₹98 053	₹80 000	₹1 78 053
AURA	₹78 465	₹33 000	₹1 11 465
EXTER	₹89 209	₹75 000	₹1 64 209
Grand i10 NIOS	₹73 808	₹75 000	₹1 48 808

Additional benefits for CSD and KPKB customers##.

6 hai toh safe hai — 6 airbags standard

HYUNDAI

ADVAITH HYUNDAI

23 New Car Showrooms | 4 Hyundai Promise Showrooms | 37 State-of-art Service Centers across Karnataka

New Car Showrooms

Mysore - Belwadi - 9538970707 | JLB Road - 9538971141 | V V Nagar - 9945773967 | Hassan - 9538971132 | Mandya - 9740060075 | Kodagu: Gonikoppal - 9945774088 | Madikeri - 9538971151 | Kushalnagara 9538971149 | Bangalore: Residency Road - 9845390084 | Marathalli ORR - 9620147012 | Bilekahalli - 7204389797 | Millers Road - 9845516907 | Koramangala - 9606950352 | Bannerghatta Road - 9900086782 | Avalahalli - 9900093058 | Sarjapura - 9620733385 | Kolar - 9620229885 | Chintamani - 8147994737 | Ramanagara - 9620594433 | Tiptur - 7619577050 | Mangalore - 7760962814 | Belthangadi - 7760962819 | Sullia - 7760962813

9606076451

Service:

Mysore - JBL Road | Belvadi | VV Nagar | Hassan | Hassan New | Tiptur | Kodagu - Kushalnagar | Madikeri | Gonikoppal | Bangalore - Mission Road | JC Road | Vasanth Nagar | Rajajinagar | Binnyston | Bannerghatta Road | Outer Ring Road | Banashankari | Hulimavu | Hulimavu New | JP Nagar | ITPL | ITPL NEW | Indiranagar | Sarjapura | Attibele | Avalahalli | Mandur | Uttarahalli | Kolar | Chintamani | Ramanagara | Mandya | Mangalore - Kuntikana | Baikampady (New) | Baikampady | Sulia | Belthangady

9902099944

Hyundai Promise — Certified Pre-Owned Car

*Terms & conditions apply. *Offers and benefits mentioned are valid till 30th November 2025. Offers and benefits mentioned include cash, corporate, either exchange or scrappage benefits as applicable. ^EMI may differ basis the bank interest, tenure, customer profile, etc. Finance at the sole discretion of financier. ##CSD: Canteen Stores Department, KPKB: Kendriya Police Kalyan Bhandar.

ಸಪ್ತರ್ಷಿ ಸೌಹಾರ್ದ ಸಹಕಾರಿ ಸಂಘ ನಿಯಮಿತ.

#48, 2ನೇ ಮುಖ್ಯರಸ್ತೆ, 18ನೇ ಅಡ್ಡರಸ್ತೆ, ಜಯನಗರ, ಮೈಸೂರು–570014
ದೂರವಾಣಿ–2567755 Email ID :saptharshimys@gmail.com

ಆಹ್ವಾನ ಪತ್ರಿಕೆ

ನಮ್ಮ ಸಹಕಾರಿಯವತಿಯಿಂದ ದಿನಾಂಕ 16.11.2025ರಂದು ಕನ್ನಡ ರಾಜ್ಯೋತ್ಸವ, ಸಹಕಾರಿ ಸಪ್ತಾಹ ಪ್ರತಿಭಾ ಪುರಸ್ಕಾರ ಮತ್ತು ವಯೋಮಾನ ಹಾಗೂ ಸದಸ್ಯತ್ವದ ಹಿರಿಯ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಸದಸ್ಯರು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ಅಧ್ಯಕ್ಷತೆ : ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎಸ್.ಚಂದ್ರಶೇಖರ್
ಉದ್ಘಾಟನೆ : ಡಾ. ಡಿ.ತಿಮ್ಮಯ್ಯ, ವಿಧಾನ ಪರಿಷತ್ ಸದಸ್ಯರು.
ಸಮಾರೋಪ ಭಾಷಣ : ಪ್ರೋ. ಶೆಲ್ವಪಿಳ್ಳೆ ಅಯ್ಯಂಗಾರ್, ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು.
ಸ್ಥಳ : ರಾಮಾಗೋವಿಂದ ರಂಗಮಂದಿರ ಸಾಯಿ ಬಾಬಾ ದೇವಸ್ಥಾನದ ಹತ್ತಿರ, ರಾಮಕೃಷ್ಣ ನಗರ, ಮೈಸೂರು
ಸಮಯ : ಸಂಜೆ 4.30ಗಂಟೆಗೆ
ವಿಶೇಷ ಸೂಚನೆ: ದಿನಾಂಕ 17.11.2025ನೇ ಸೋಮವಾರದಂದು ಸಹಕಾರಿಗೆ ರಜೆ ಘೋಷಿಸಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಹೆಚ್.ಎ.ಪುರುಷೋತ್ತಮ
ಮುಖ್ಯಕಾರ್ಯನಿರ್ವಹಣಾಧಿಕಾರಿ

ಉಪ ನಿರ್ದೇಶಕರರವರ ಕಛೇರಿ, ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು

ಸಂಖ್ಯೆ: ಎಂವೈಜೆಡ್/ಟೆಂಡರ್/2025–26 ದಿ.12.11.2025

ಟೆಂಡರ್ ಪ್ರಕಟಣೆ

(ಇ ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)

ಈ ಕಛೇರಿ ಟೆಂಡರ್ ಪ್ರಕಟಣೆಯ ಕಾಮಗಾರಿಗಳನ್ನು 1) ಕೆ.ಡಬ್ಲ್ಯೂ–1ರ Indent No.135/25- 26 Dt.12.11.2025 2) ಕೆ.ಡಬ್ಲ್ಯೂ–1ರ Indent No.136/25-26 Dt.12.11.2025 ಅನ್ವಯ ಐಟಂವಾರು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿನಾಂಕವನ್ನು ಹಾಗೂ ಇತರೆ ವಿವರಗಳನ್ನು ಇ–ಪೋರ್ಟಲ್ (https://kppp.karnataka.gov.in) ನಲ್ಲಿ ಪಡೆಯಬಹುದು.

ಸಹಿ/– ಉಪನಿರ್ದೇಶಕರು, ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು
DIPR/DDMYS/1216/KSMCA/669/2025-26

11ನೇ ವರ್ಷದ ಪುಣ್ಯಸ್ಮರಣೆ

ನಿಧನ : 15-11-2014



ಡಾ. ಸಿ.ಜಿ. ಪುರುಷೋತ್ತಮ
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು
ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ
–ದುಃಖತಪ್ತರು: ಕುಟುಂಬ ವರ್ಗ

11ನೇ ವರ್ಷದ ಸವಿನೆನಪು



ಬಸವರಾಜೇಗೌಡ ಎಲ್
ನಿಧನ: 15.11.2014
ನೀವು ನಮ್ಮನ್ನಗಲಿ ಇಂದಿಗೆ 11 ವರ್ಷವಾದರೂ ಸದಾ ನಿಮ್ಮನ್ನು ಸ್ಮರಿಸುತ್ತಿರುವ
ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ, ಡಿ. ಸಾಲುಂಡಿ, ಚಂದ್ರ .ಬಿ. ಡಿಸಿಸಿ ಹಿರಿಯ ಕಾರ್ಯದರ್ಶಿ, ನಿರ್ದೇಶಕರು, ಧನಗಳ್ಳಿ ಕೃಷಿ ಪತ್ತಿನ ಸಹಕಾರ ಸಂಘ

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಎಸ್. ಶಾರದಮ್ಮ

ಇವರು ದಿನಾಂಕ: 04-11-2025ನೇ ಮಂಗಳವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 15-11-2025ನೇ ಶನಿವಾರ ಬೆಳಗ್ಗೆ 11-00 ಗಂಟೆಗೆ ಶ್ರೀ ಮರುಳೇಶ್ವರ ಶಾಂತಿಧಾಮ, ಕಾವೇರಿ ಸ್ಕೂಲ್ ಎದುರು, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಮೈಸೂರು. ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಭೋಜನ: ಮಧ್ಯಾಹ್ನ 12.30 ಗಂಟೆಗೆ

ದುಃಖತಪ್ತರು : ಶ್ರೀ ಬಿ. ನಾಗೇಂದ್ರ, ಬಿ. ವಿಜಯ್ ಕುಮಾರ್, ಬಿ. ಸುಜಾತ, ಬಿ. ಸಂಜಯ್ ಮತ್ತು ಕುಟುಂಬರ್ಗದವರು

ಹೆಸರು ಬದಲಾವಣೆ

ಸರೋಜ .ಬಿ ಆದ ನಾನು ನಂ.55, ಅಂಬೇಡ್ಕರ್ ಕಾಲೋನಿ, ಕೂರ್ಗಳ್ಳಿ ಗ್ರಾಮ, ಮೈಸೂರು ತಾಲೂಕು, ಮೈಸೂರು ಜಿಲ್ಲೆ–570018. ಇಲ್ಲಿ ವಾಸವಿದ್ದು, ನನ್ನ ಹೆಸರನ್ನು'ಸರೋಜಮ್ಮ' ಯಿಂದ 'ಸರೋಜ .ಬಿ' ಎಂಬುದಾಗಿ ನೋಟರಿ ಸರಸ್ವತಿ .ಜಿ ಇವರ ಸಮ್ಮುಖದಲ್ಲಿ ಬದಲಾಯಿಸಿ ಕೊಂಡಿರುತ್ತೇನೆ ಮತ್ತು ನನ್ನ ಮುಂದಿನ ಎಲ್ಲಾ ವ್ಯವಹಾರಗಳನ್ನು ಸರೋಜ.ಬಿ ಹೆಸರಿನಿಂದ ಮಾಡುತ್ತೇನೆ ಎಂದು ಪ್ರಮಾಣಿಕರಿಸುತ್ತೇನೆ.

ಸಹಿ/– ಸರೋಜ .ಬಿ

ಮೈಸೂರು ಮಿತ್ರ

46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು